ಭಾರತೀಯ ಮೊದಲ ಸ್ತ್ರೀವಾದಿ ಪ್ರತಿಪಾದಕಿ : ವಿದುಷಿ ನಾಗರತ್ನಮ್ಮ

ಸಂಪಾದಕೀಯ

೮೦ರ ದಶಕದಿಂದ ಈಚೆಗೆ ಕರ್ನಾಟಕದಲ್ಲಿ ಸ್ತ್ರೀವಾದದ ಚರ್ಚೆ, ಮಹಿಳಾ ಅಧ್ಯಯನ ಕೇಂದ್ರಗಳು ಪ್ರಾರಂಭವಾಗಿವೆ ಎಂದು ಮಹಿಳೆಯರೇ ದಾಖಲಿಸುತ್ತಿದ್ದಾರೆ. ನಂಜನಗೂಡು ತಿರುಮಲಾಂಬಾ (೧೮೮೭-೧೯೮೨), ಆರ್. ಕಲ್ಯಾಣಮ್ಮ (೧೮೯೨-೧೯೬೫) ಅವರ ಹುಟ್ಟು, ಸಾಧನೆ, ಸಿದ್ಧಿಗಳೆಲ್ಲ ಸ್ತ್ರೀವಾದದ ಅರಿವಿಲ್ಲದೆಯೋ, ಚಳುವಳಿ ಮಟ್ಟ ಮುಟ್ಟದೆಯೋ - ಕೇವಲ ಪ್ರಾರಂಭ, ಪ್ರಯತ್ನ, ಸುಳಿವುಗಳಾಗಿಯೇ ಕಾಣುತ್ತಿರುವವರೂ ಮಹಿಳೆಯರೆ. ಇದರ ಜೊತೆಗೆ ಕೆಲ ದಿನಗಳ ಹಿಂದೆ ದೂರದರ್ಶನ ಮಾಧ್ಯಮ ಒಂದರಲ್ಲಿ ಒಬ್ಬ ಕವಯಿತ್ರಿಯನ್ನು ಇನ್ನೊಬ್ಬ ಪತ್ರಕರ್ತೆ ಸಂದರ್ಶನ ನಡೆಸುತ್ತ ಕೇಳಿದ ಪ್ರಶ್ನೆಯೊಂದಕ್ಕೆ 'ಈಗ ಗಂಡಸರೆಲ್ಲಿ ಬರೆಯುತ್ತಿದ್ದಾರೆಯೇ, ಬರೆಯುತ್ತಿರುವುದು ಹೆಂಗಸರೆ ಕಣೇ, ನಾವೇ ಕಣೇ' ಎಂಬ ತುರೀಯಾವಸ್ಥೆ ಮುಟ್ಟಿರುವಂತಹ ಉತ್ತರದ ಸಂದರ್ಭದಲ್ಲಿ ನಾನು ಬದುಕಿದ್ದೇನೆ, ಈ ಮಾತುಗಳನ್ನು ಬರೆಯುತ್ತಿದ್ದೇನೆ, ಕ್ಷಮಿಸಬೇಕು.

ವಿಶ್ವಮಟ್ಟದಲ್ಲಿ ಸ್ತ್ರೀವಾದದ ಪ್ರತಿಪಾದಕ ನೆಲೆಯಲ್ಲಿ ಮೇರಿ ವುಲ್‌ಸ್ಟನ್ ಕ್ರಾಫ್ಟ್ (೧೭೫೯-೧೭೯೭) ಅವರೇ ಮೊದಲಿಗರೆಂದೂ ಸಿಮೋನ್ ದ ಬೋವಾ (೧೯೦೮-೧೯೮೬) ಎರಡನೆಯವರೆಂದೂ ಗುರುತಿಸಲಾಗುತ್ತಿದೆ. ಕರ್ನಾಟಕದ ಪಂಡಿತ ರಮಾಬಾಯಿಯಂತಹ (೧೮೫೮-೧೯೨೨) ಸಾಮಾಜಿಕ, ಶೈಕ್ಷಣಿಕ, ಬೌದ್ಧಿಕ ಕ್ಷೇತ್ರಗಳಲ್ಲಿ ದುಡಿದ ಮಹಿಳೆಯರನ್ನು ಈ ಪಟ್ಟಿಯಲ್ಲಿ ಸೇರಿಸದ, ಇಟ್ಟು ನೋಡದ ಕಾರಣವನ್ನು ಗಮನಿಸಿದರೆ, ಇವೆಲ್ಲ ಕೇವಲ ಸಾಂಸ್ಕೃತಿಕ (ಅಕ್ಷರ ಸಂಸ್ಕೃತಿ, ಉಪ ಸಂಸ್ಕೃತಿ) ಮಟ್ಟದ ದಾಖಲೆ, ಚರ್ಚೆಗಳಿಂದಲೇ ಚರಿತ್ರೆ ಪುನರ್ ರೂಪಿಸುತ್ತಿರುವಂತೆ ಕಾಣುತ್ತಿದೆ. ಎಂದಿನಂತೆ (ಅಥವಾ ಆಸ್ಥಾನ ಪಂಡಿತರಂತೆ) ಅಕಾಡಮಿಕ್ ನೆಲೆಯ ಚರ್ಚೆ ಮಾತ್ರವೇ ಆಗಿ ಇವೆಲ್ಲ ಉಳಿದಂತೆಯೇ ಆಗಿದೆ.

ಹಾಗಿದ್ದರೆ ಬೆಂಗಳೂರು ನಾಗರತ್ನಮ್ಮ (೧೮೭೮-೧೯೫೨) ಅವರ ಬದುಕು, ಹೋರಾಟ, ಬರವಣಿಗೆ, ಸಂಘಟನೆಗೆ ಯಾವ ಅರ್ಥ, ವ್ಯಾಖ್ಯಾನ, ಭಾಷ್ಯವನ್ನು ಬರೆಯಬೇಕು, ಹಚ್ಚಬೇಕು ಎಂಬ ಗೊಂದಲ, ಅನುಮಾನ, ಹಿಂಜರಿತ; ನಿಜವಾದ ಸತ್ಯಶೋಧಕರಿಗೆ ಎದುರಾಗುವುದು ಸಹಜ. ತಿರುಮಲಾಂಬಾ ಅವರಂತೆಯೇ ಕರ್ನಾಟಕದ ನಂಜನಗೂಡಿನಲ್ಲಿ ಹುಟ್ಟಿದ್ದು ನಾಗರತ್ನಮ್ಮ ಅವರ ತಪ್ಪಾಯಿತೊ? ೧೯-೨೦ನೇ ಶತಮಾನದ ನಡುವೆ ಕಾಣಿಸಿಕೊಂಡದ್ದು ತಪ್ಪಾಯಿತೊ? ವೇಶ್ಯೆ ಕುಲವೃತ್ತಿಯ, ಜಾತಿಯ ಮನೆತನದಲ್ಲಿ ಹುಟ್ಟಿದ್ದೇ ಮಹಾಪರಾಧವಾಯಿತೊ? ವೀಣೆ ಶೇಷಣ್ಣ, ಬಿಡಾರಂ ಕೃಷ್ಣಪ್ಪ, ಮೈಸೂರು ವಾಸುದೇವಾಚಾರ್ಯ, ಡಿ.ವಿ. ಗುಂಡಪ್ಪ - ಅಂತಹ ಪುರುಷಸಿಂಹಗಳ ನಡುವೆಯೂ ಸವಾಲಾಗಿ ಬೆಳೆದದ್ದು ತಪ್ಪಾಯಿತೊ? ಮೈಸೂರು ಬೆಂಗಳೂರಿಗಳಿಗೇ ಸೀಮಿತವಾಗದೆ ತಮಿಳುನಾಡಿನ ರಾಜಧಾನಿಗೂ ಲಗ್ಗೆ ಇಕ್ಕಿ ಬೆಳೆದದ್ದು ತಪ್ಪಾಯಿತೊ? ಆ ಕಾಲದ ತೆಲುಗು ಸಾಹಿತ್ಯದ ಅತಿರಥ ಮಹಾರಥನ್ನೂ ಎದುರಿಸಿ, ಸಂಶೋಧಕಿಯಾಗಿ ತಲೆ ಎತ್ತಿ, ಸ್ತ್ರೀಯರ ಬಗ್ಗೆ ತಲೆಮಾರಿನಿಂದ ಬಂದ ಸಣ್ಣಬುದ್ಧಿಯನ್ನ, ಬುದ್ಧಿಗೇಡಿತನವನ್ನ ಕೇಡಿಬುದ್ಧಿಯನ್ನ ಸಮರ್ಥರೀತಿಯಲ್ಲಿ ವಿರೋಧಿಸಿದ್ದು ತಪ್ಪಾಯಿತೊ, ಸಂಗೀತಲೋಕ ಕಂಡ ಮಹಾನುಭಾವನ ಶಾಶ್ವತ ಕೀರ್ತಿಗೆ ತನ್ನನ್ನು ಅರ್ಪಿಸಿಕೊಂಡ ಮಹಾಸಾಧನೆಯೇ ಈ ಹೆಣ್ಣು ಹೆಂಗಸಿಗೆ (ನಮ್ಮವರು 'ಮಹಿಳಾ ಲೇಖಕಿ' ಎಂದು ಬರೆಯುವಂತೆ) ಮುಳುವಾಯಿತೊ? ನೂರು ವರ್ಷದ ಆನಂತರ ಸ್ಥಾಪಿತವಾಗಲಿರುವ ಸ್ತ್ರೀವಾದಕ್ಕೆ ಅಂದೇ ಬುನಾದಿ ಹಾಕಿದ್ದು ಪುರುಷ ಸಮಾಜಕ್ಕೆ ನುಂಗಲಾರದ ತುತ್ತು (ಅಥವಾ ತೊತ್ತು) ಆಯಿತೊ?

ಹಾಗಿದ್ದರೆ ದಯವಿಟ್ಟು ಏಳಿ, ಜೊತೆಯಲ್ಲಿ ಬನ್ನಿ : ಬೆಂಗಳೂರಿನಲ್ಲಿ ಗಾಯನ ಸಮಾಜ ಎಂಬ ಪುರಾತನ ಸಂಸ್ಥೆ ಒಂದಿದೆ. ಕೆಲ ಕಾಲದ ಹಿಂದೆ, ತುಂಬಿ ತುಳುಕಿದ್ದ ಸಂಗೀತ ಕ್ಷೇತ್ರದ ಸಾಧಕರ (ಕನ್ನಡ ಸಾಹಿತ್ಯ ಪರಿಷತ್ತಿನಲ್ಲಿ ಈಗಲೂ ಹೇಗೆ ಯಾವ ಕ್ರಮ ಇಲ್ಲದೆ, ಅವ್ಯವಸ್ಥೆಯೇ ಒಂದು ವ್ಯವಸ್ಥೆ ಎನ್ನುವಂತೆ) ಭಾವಚಿತ್ರಗಳಲ್ಲಿ ನಾಗರತ್ನಮ್ಮ ಅವರ ಭಾವಚಿತ್ರ ನೋಡಿದವರು ಯಾರಾದರೂ ಇದ್ದಾರೆಯೊ? ಇದೀಗ

ಇರುವವರದೂ ಬೇಡ ಎಂದು ಕಿತ್ತು ಬಿಸಾಕಿ, ಕೇವಲ ಶೆಮ್ಮಂಗುಡಿ, ಸುಬ್ಬಲಕ್ಷ್ಮೀ ಅವರಿಬ್ಬರ ಭಾವಚಿತ್ರಗಳನ್ನು ಮಾತ್ರ ಉಳಿಸಿಕೊಂಡದ್ದರ ಹಿನ್ನೆಲೆ ಏನೊ? ಇನ್ನು ಕೆಲವೇ ದಿನಗಳಲ್ಲಿ ಕಮಲನಾಥ ಹಾಗೂ ಮೈಸೂರು ಸುಬ್ರಹ್ಮಣ್ಯ ಅವರಿಬ್ಬರ ಚಿತ್ರಗಳೇ ಆ ಜಾಗಕ್ಕೆ ಬಂದು ಕುಳಿತರೂ ಆಶ್ಚರ್ಯವಿಲ್ಲ. ಇನ್ನು ನೆನ್ನೆ ಮೊನ್ನೆ ಹುಟ್ಟಿದ ಕನ್ನಡನಾಡಿನ ಸಂಸ್ಥೆಗಳಲ್ಲಿ, ನೆನ್ನೆಮೊನ್ನೆ ದೊಡ್ಡವರಲ್ಲ ಜನಪ್ರಿಯರಾದ ತಮಿಳುನಾಡಿನ ಕಲಾವಿದರ ವಿವಿಧ ಭಂಗಿಗಳು ಮೂಡಿರುವುದು ಅವರ ಅಭಿ-ಮಾನದ ದ್ಯೋತಕವೆನ್ನಬೇಕಷ್ಟೆ !

ಕನ್ನಡಿಗರ ಹಣೇಬರಹ ಇಷ್ಟಾದರೆ, ನಡೆಯಿರಿ, ಆಂಧ್ರ ಸಾಹಿತ್ಯ ಪ್ರಪಂಚಕ್ಕೆ. ಪೆನ್ನನ್ನು ಗನ್ನಾಗಿ ಹಿಡಿದು ಹೋರಾಡಿದ ಭೂಲೋಕದ ವೀರಾಧಿವೀರರೇ ಅಲ್ಲಿದ್ದಾರೆ. ಅನುಪಮಾ ಅವರನ್ನು ಕೈ ಹಿಡಿದ ನಿರಂಜನರಂತೆ, ರಾಮಲಕ್ಷ್ಮಿಯವರನ್ನು ಕೈ ಹಿಡಿದ ಆರುದ್ರ ಅವರು ಬರೆದ ಮಹಾನ್ ಸಾಹಿತ್ಯ ಚರಿತ್ರೆಯ ಸಂಪುಟಗಳಲ್ಲಿಯೂ ನಾಗರತ್ನಮ್ಮ ಅವರ ವಿಳಾಸ ಇದ್ದಂತೆ ಕಾಣಲಿಲ್ಲ. ಈವರೆಗಿನ ಯಾವ ಪ್ರಗತಿಪರ - ಜನಪರ - ಸ್ತ್ರೀಪರ ಚಳುವಳಿಗಳಲ್ಲಿಯೂ, ಕೊನೆಗೆ ಮುಪ್ಪಾಳ ರಂಗನಾಯಕಮ್ಮ ಅಂತಹ ಧೀಮಂತರೂ ನಾಗರತ್ನಮ್ಮ ಕುರಿತು, ಅವರ ಸ್ತ್ರೀ ವಾದ-ವಿವಾದ ಚರ್ಚೆ ಕುರಿತು ಒಂದು ಸಾಲು ಬರೆದಂತೆ ಕಂಡುಬರಲಿಲ್ಲ.

ಇನ್ನು ನಾಗರತ್ನಮ್ಮ ಕೊನೆಗಾಲದಲ್ಲಿ ಬದುಕಿದ್ದ ತಮಿಳುನಾಡಿಗೆ ಹೋಗೋಣಬನ್ನಿ. ತನ್ನ ಸರ್ವಸ್ವವನ್ನೇ ಮಾರಿ (ಅದು ಪುರುಷರಾದರೆ ತ್ಯಾಗ) ತಿರುವೈಯಾರಿನಲ್ಲಿ ತ್ಯಾಗರಾಜರ ಸಮಾಧಿಯನ್ನು ಕಟ್ಟಿಸಿದವರು ನಮ್ಮ ನಾಗರತ್ನಮ್ಮ ಅವರೆ. ನೆಲವೇನೊ ತಮಿಳು. ವ್ಯಕ್ತಿಯೇನೊ ತೆಲುಗು ಮಹನೀಯ. ಕಟ್ಟಿಸಿದವರೊ ಕನ್ನಡ ನಾಡಿನ ಹೆಣ್ಣುಮಗಳು, ಅದೂ ವೇಶ್ಯೆ (ತ್ಯಾಗರಾಜರೋ ಜಪತಪ ನಿಷ್ಠಾವಂತ ಬ್ರಾಹ್ಮಣ). ಅಲ್ಲಿಗೆ ಮುಗಿಯಿತಲ್ಲ. ಆಕೆ ಮಾಡಿದ ಉಪಕಾರಕ್ಕೆ, ಆಕೆಯ ಸಮಾಧಿ ಪ್ರತಿಮೆಗೇ ರಾಮಭಕ್ತರು ತೆರೆ ಎಳೆದು ಕುನ್ನೈಕ್ಕುಡಿ ವೈದ್ಯನಾಥನ್ ಅಂತಹ ಸರ್ಕಸ್ ಕಲಾವಿದರು, ಆರಾಧನೆಯ ಗ್ಯಾಂಗ್ ಪೆರೇಡ್ ಮಾಡುವುದನ್ನು ಯಾರೂ ನೋಡಬಹುದು. ಆ ಸಮೂಹಸನ್ನಿಯನ್ನೇ ನಮ್ಮ ಎಲ್ಲಾ ಮಾಧ್ಯಮಗಳೂ ಹಗಲುರಾತ್ರಿ ಭಕ್ತಿಭಾವ ಪರವಶೆಯಿಂದ ಬಿತ್ತರಿಸುತ್ತವೆ. ನಮ್ಮ ಕರ್ನಾಟಕದ ಕಲಾವಿದರೂ ಮಾನ, ಮರ್ಯಾದೆ, ನಾಚಿಕೆ ಇಲ್ಲದೆ ಭಾಗವಹಿಸುತ್ತಾರೆ, ಕಣ್ಣು ಬಾಯಿಬಿಟ್ಟು ನೋಡುತ್ತಾರೆ.

ಇವೆಲ್ಲಕ್ಕೂ ಏನು ಕಾರಣ ಎಂದು ತಿಳಿಯುವುದು ?

ಕನ್ನಡಿಗರಲ್ಲಿನ 'ಕನ್ನಡತನ' ಎಂಬುದೇನು? ತನ್ನವರ ಹಿರಿಮೆ ಗರಿಮೆ ಮರೆತು, ಪರರನ್ನು ಅಪ್ಪಿಕೊಳ್ಳುವುದೆ? ಡಿ.ಕೆ. ಪಟ್ಟಮಾಳ್, ಎಂ.ಎಸ್. ಸುಬ್ಬಲಕ್ಷ್ಮೀ, ಎಂ.ಎಲ್. ವಸಂತಕುಮಾರಿ, ರುಕ್ಮಿಣಿ ಅರುಂಡೇಲ್ ಅವರಿಗಿಂತ ಯಾವ ರೀತಿಯಿಂದಲೂ ಕಡಿಮೆ ಇಲ್ಲದ, ಭಾರತ ರಾಷ್ಟ್ರವಾಗಿ ರೂಪುಗೊಳ್ಳುವ ಮುಂಚೆಯೇ ರಾಷ್ಟ್ರರತ್ನವಾಗಿ ಮೆರೆದ ನಾಗರತ್ನಮ್ಮ ಅವರ ವ್ಯಕ್ತಿತ್ವದ ಗಟ್ಟಿತನ, ತಾತ್ವಿಕ ಸಿದ್ಧಾಂತದ ಎತ್ತರ ನಮ್ಮಲ್ಲಿ ಮರೆಮಾಚುವುದು, ಮರೆಯಾಗುವುದು ನ್ಯಾಯವೊ?

ಹೋರಾಟಕ್ಕೆ, ಯಾವುದಕ್ಕಾಗಿ ಹೋರಾಡುತ್ತಿದ್ದೇವೆ ಎಂಬುದನ್ನೇ ಮರೆಯುವಮಟ್ಟಿನ ಹೋರಾಟಕ್ಕೆ - ಹೆಸರಾದವರು ಆಂಧ್ರರು. ಪ್ರಾಣಬಿಟ್ಟು ರಾಜ್ಯ ಪಡೆದವರು. ವೀರೇಶಲಿಂಗಂ, ದಕ್ಷಿಣದ ಈಶ್ವರಚಂದ್ರ ವಿದ್ಯಾಸಾಗರ ಎಂಬ ಹೆಸರು ಪಡೆದವರು. ಮಹಿಳೆಯರ ಬದುಕಿಗೆ ಬೆಳಕಾದವರು. ಅವರೂ ಮುದ್ದುಪಳನಿಯಂತಹ ಒಬ್ಬ ಕವಯಿತ್ರಿ ಬಗ್ಗೆ ಇಷ್ಟು ಕೆಳಮಟ್ಟದಲ್ಲಿ ಆಲೋಚಿಸಿದರೆ ? ಮಾನವೀಯತೆಗೆ ಇನ್ನೊಂದು ಹೆಸರು ಎನ್ನುವಂತಹ ಕವಿ ಗುರಜಾಡ ಅಪ್ಪಾರಾವ್, ಸ್ತ್ರೀಯರನ್ನು ಮನುಷ್ಯರೆಂದು ಕಂಡ ಗುಡಿಪಾಟಿ ವೆಂಕಟ ಚಲಂ - ಅಂತಹವರೂ, ನಾಗರತ್ನಮ್ಮ ಅವರನ್ನು ಅರಿತುಕೊಳ್ಳಲಿಲ್ಲವೆ? ಆಕೆಯ ವಿಚಾರ, ಹೋರಾಟ ಗೌರವಿಸಲಿಲ್ಲವೆ? ಇತ್ತೀಚಿನ ವರವರರಾವ್ ಅಂತಹ ಕವಿ, ಹೋರಾಟಗಾರರ ಕವಿತೆಯೊಂದರಲ್ಲಿ 'ಸೂಳೇಮಗ' ಎಂಬ ಪದ ಪ್ರಯೋಗ ಮಾಡಿದ್ದಕ್ಕೆ, ನ್ಯಾಯಾಲಯ ಮೆಟ್ಟಲು ಹತ್ತಲೂ ಸಿದ್ಧವಾಗಿ, ಕ್ಷಮೆ ಕೇಳಿಸಿದ ಮಾರ್ಕ್ಸಿಸ್ಟ್ ಮುಪ್ಪಾಳ ರಂಗನಾಯಕಮ್ಮ ಅವರಿಗಾದರೂ ನಾಗರತ್ನಮ್ಮ ಅವರ ಬದುಕು, ಸಾಧನೆ ಗಮನ ಸೆಳೆಯಲಿಲ್ಲವೆ? ಕನ್ನಡಿಗಳು, ವೇಶ್ಯೆ - ಯಾವುದು ಅಡ್ಡವಾಯಿತೊ ಪಾಪ?

ತಮಿಳರು ಬಿಡಿ. ವಿಶ್ವದಲ್ಲಿ ಕ್ರೈಸ್ತರು ಹೇಗೆ, ಎಲ್ಲ ಪ್ರಾಣಿಗಳನ್ನೂ ತಮ್ಮ ಧರ್ಮದ ದಯೆಯಲ್ಲಿ ಅದ್ದಿ ಮುಳುಗಿಸುವಂತೆಯೇ, ನಮ್ಮ ನಾಗರತ್ನಮ್ಮ ಅವರನ್ನೂ ಈ ತಮಿಳರು ನಾಗರತ್ನಮ್ಮಾಳ್ ಎಂದು ಪರಿವರ್ತಿಸಿ ಒಳ ಬರಮಾಡಿಕೊಂಡವರು. (ಆರ್ಯರ ಶ್ರೀ ವಿರುದ್ಧ ಸಮರ ಸಾರಿ ತಿರು ಎನ್ನುವಂತೆ. ಈ ತಮಿಳು ಪುರಾತನರ ಆನುವಂಶಿಕ ಗುಣ ಕನ್ನಡ ವೀರಶೈವರ ಬೆನ್ನಹತ್ತಿ ಶರಣ ಎನ್ನುವಂತೆ). ಇನ್ನು ಕೆಲಕಾಲಕ್ಕೆ ಬೆಂಗಳೂರು ನಾಗರತ್ನಮ್ಮ, ಮದ್ರಾಸ್ ನಾಗರತ್ನಮ್ಮಾಳ್ ಎಂದು ಚರಿತ್ರೆ ಬರೆದರೂ, ಬರೆಸಿದರೂ ಸೋಜಿಗವಿಲ್ಲ.

ಏಕೆಂದರೆ ಎಸ್.ಎಸ್. ಸುಬ್ಬುಲಕ್ಷ್ಮಿ ಅವರಿಗೆ ಕಲ್ಕಿ ಸದಾಶಿವಂ, ರಾಜಾಜಿ, ನೆಹರು ಅಂತಹವರು ಸಿಕ್ಕಂತೆ, ನಾಗರತ್ನಮ್ಮ ಅವರನ್ನು ಶಾಶ್ವತವಾಗಿ ಕೈ ಹಿಡಿದು ಮೇಲೆತ್ತಿದ್ದವರು ಆಗ ಯಾರೂ ಇರಲಿಲ್ಲವೆ!

ತಮಿಳುನಾಡಿನಲ್ಲಿ ನೆಲೆನಿಂತು, ತ್ಯಾಗರಾಜರ ಸಮಾಧಿ ನಿರ್ಮಿಸಿ, ತೆಲುಗು ಸಾಹಿತ್ಯದಲ್ಲಿ ಕೃಷಿ ಮಾಡಿದರೂ ಕೊನೆವರೆಗೊ ಕನ್ನಡ ನಾಡಿನ ಬಗ್ಗೆ, ಕನ್ನಡಿಗರ ಬಗ್ಗೆ ಅಪಾರ ಪ್ರೀತಿ ಇಟ್ಟುಕೊಂಡಿದ್ದವರು ನಮ್ಮ ನಾಗರತ್ನಮ್ಮ ಅವರು. ಕನ್ನಡಿಗರ ಏಳಿಗೆಗಾಗಿ, ಕೀರ್ತಿಗಾಗಿ, ಯಶಸ್ಸಿಗಾಗಿ ಸಾಯುವವರೆಗೂ ಪರಿತಪಿಸುತ್ತಿದ್ದವರು. ಕನ್ನಡದ ನೆಲದ ಋಣ ತೀರಿಸಬೇಕೆಂದು ಆಶಿಸಿದವರು. ತೆಲುಗು ಅಷ್ಟ ದಿಗ್ಗಜಗಳನ್ನು ಸಾಕಿದ ಕನ್ನಡಿಗ ಶ್ರೀ ಕೃಷ್ಣದೇವರಾಯ, 'ನಾ ಕವಿತ್ವಂಬು ನಿಜಮು ಕರ್ಣಾಟ ಭಾಷ' ಎಂದ ಶ್ರೀನಾಥ ಕವಿ, ಬೆಂಗಳೂರು ನಾಗರತ್ನಮ್ಮ - ಇವರೆಲ್ಲ ನಮ್ಮ ಸಂಶೋಧಕರ ಕಣ್ಣಿಗೆ ಕನ್ನಡದ, ಕರ್ನಾಟಕದ ಕನ್ನಡಿಗರ ದ್ರೋಹಿಗಳ ಪಟ್ಟಿಯಲ್ಲಿ ಸೇರಿಸಿಬಿಡುವ ದುರಂತ ಕಾಣುತ್ತಿದೆಯೆ!

ಒಂದು ವಿಶ್ವವಿದ್ಯಾನಿಲಯಕ್ಕೇ (ಮೈಸೂರಿನಲ್ಲಿ ಸ್ಥಾಪಿಸಲು ಹೊರಟಿರುವ ಸಂಗೀತ ವಿಶ್ವವಿದ್ಯಾನಿಲಯಕ್ಕೆ) ಹೆಸರಿಡಬಹುದಾದ, ಹೆಸರಿಡಬೆಕಾದ ಧೀಮಂತ ಮಹಿಳೆ ನಾಗರತ್ನಮ್ಮ ಅವರು. (ಉಸ್ತಾದ್ ವಿಲಾಯತಖಾನ್ ಅವರಿಗೆ ಪದ್ಮವಿಭೂಷಣ ನೀಡಲು ಮುಂದಾಗಿ, ಪಂಡಿತ ರವಿಶಂಕರ್ ಅವರಿಗೆ ಭಾರತರತ್ನ ನೀಡಿದ ರಾಜಕಾರಣಿಗಳ ಸಂಗೀತಪ್ರಜ್ಞೆ ಪ್ರಶ್ನಿಸಲಿಲ್ಲವೆ, ಎಂಬ ನೆನಪು ಇನ್ನೂ ಇದೆ) ಗಾಯನ ಸಮಾಜ ಮಾತ್ರವೇ ಅಲ್ಲ, ಯಾವುದೇ ಕೇಂದ್ರಗಳಲ್ಲಿ ಅದರಲ್ಲಿಯೂ ಮಹಿಳಾ ಅಧ್ಯಯನ ಕೇಂದ್ರಗಳಲ್ಲಿಯೂ ಇಡಬೇಕಾದ ಭಾವಚಿತ್ರ ನಾಗರತ್ನಮ್ಮ ಅವರದು. ರೂಪು, ವಿದ್ಯೆ, ಸಂಪತ್ತು, ವಿನಯ, ತ್ಯಾಗ-ಗಳ ಮುತ್ತೈದೆ ಎಂಬುದು ನಮ್ಮ ನಾಗರತ್ನಮ್ಮ ಅವರ ಚಿತ್ರ ನೋಡಿದವರಿಗೆ ಸದಾ ಕಾಣಿಸುವ ಭಾವವಂತಿಕೆ. ನ್ಯಾಷನಲ್ ಬುಕ್ ಟ್ರಸ್ಟ್, ಕೇಂದ್ರ ಸಾಹಿತ್ಯ ಅಕಾಡೆಮಿ - ಅಂತಹ ರಾಷ್ಟ್ರೀಯ ಸಂಸ್ಥೆಗಳು ಇನ್ನಾದರೂ ಮರೆಯದೆ ಪ್ರಕಟಿಸಬೇಕಾದ ಜೀವನ ಚರಿತ್ರೆ, ನಾಗರತ್ನಮ್ಮ ಅವರದು.

ಕನ್ನಡಿಗರಲ್ಲಿ ರಾಷ್ಟ್ರೀಯ ಮಟ್ಟದ ನಾಯಕರು, ಸಾಂಸ್ಕೃತಿಕ ಚಿಂತಕರು ಇಲ್ಲ ಎನ್ನುವ ಸುಳ್ಳು, ಬುರುಡೆ, ಅಜ್ಞಾನದ ಮಾತುಗಳನ್ನೇ ನಮ್ಮ ಜ್ಞಾನಪೀಠಿಯು ಭಾವಭಂಗಿಗಳಲ್ಲಿ ಆಡುವ ಮಧ್ಯೆ; ನಮ್ಮವರನ್ನ, ನಮ್ಮ ಯೋಗ್ಯತೆಯನ್ನ, ನಮ್ಮತನವನ್ನ ನಾವೇ ಕಂಡುಕೊಳ್ಳಬೇಕಾದ ಸಂದರ್ಭ ಈಗ ನಮ್ಮ ಮುಂದೆ ಇದೆ. ಅದಕ್ಕೆ ಉಜ್ವಲ ಸಾಕ್ಷಿ ವಿದುಷಿ ನಾಗರತ್ನಮ್ಮ. ಹುಟ್ಟಿ ಶತಮಾನವೇ ಉರುಳಿತು, ತೀರಿಕೊಂಡು ಅರ್ಧಶತಮಾನವಾಯಿತು. ಆದರೂ ಕನ್ನಡಿಗರಿಗೆ ಕನ್ನಡಿಗರು ತಿಳಿಯಲಿಲ್ಲ, ತಿಳಿಯುತ್ತಿಲ್ಲ. ತಿಳಿಸುವವರು ಯಾರಾದರೂ ಇದ್ದಾರೆಯೆ? ಎಲ್ಲಿದ್ದಾರೆ? ದಯವಿಟ್ಟು ತಿಳಿಸಿ.

❑

೨

ಕನ್ನಡ ನಾಡಿನ ಕಣ್ಮಣಿ : ಬೆಂಗಳೂರು ನಾಗರತ್ನಮ್ಮ

ಮೈಸೂರು ವಾಸುದೇವಾಚಾರ್ಯ

ಕಮಲಪುಷ್ಪ ಕೆಸರಿನಲ್ಲಿ ಹುಟ್ಟಿದ್ದೇ ಆದರೂ ಭಗವದರ್ಪಣಕ್ಕೆ ಯೋಗ್ಯವೇ ಹೌದು. ದೇವದಾಸಿಯರ ಕುಲದಲ್ಲಿ ಜನ್ಮತಾಳಿದ್ದರೂ ಗಾಂಭೀರ್ಯದ ಗಣಿಯಾಗಿ, ಗಾಯನ ನರ್ತನಮಣಿಯಾಗಿ, ವಿರಾಗಿಣಿಯಾಗಿ ಇಹಲೋಕ ಜೀವನದ ಸಾರ್ಥಕತೆಯನ್ನು ಪಡೆದು ಕನ್ನಡ ನಾಡಿನ ಕಣ್ಮಣಿಯಂತಿದ್ದ ನಾಗರತ್ನಮ್ಮನನ್ನು ಪಡೆದ ನಮ್ಮ ನಾಡು ನಿಜಕ್ಕೂ ಭಾಗ್ಯದ ಬೀಡು. ರೂಪ, ವಿದ್ಯೆ, ಸಂಪತ್ತು – ಈ ಮೂರು ಸರಿಸಮವಾಗಿ ನಾಗರತ್ನಮ್ಮನವರಲ್ಲಿ ಮನೆಮಾಡಿಕೊಂಡಿದ್ದರೂ ಆಕೆ ವಿನಯನಿಧಿಯಾಗಿದ್ದರು.

ನಾಗಮ್ಮನವರ ಪ್ರಥಮ ಪರಿಚಯ ನನಗಾದದ್ದು ವೀಣೆ ಸುಬ್ಬಣ್ಣನವರ ಮನೆಯಲ್ಲಿ. ಶೇಷಣ್ಣ, ಸುಬ್ಬಣ್ಣ, ಕೃಷ್ಣಪ್ಪ ಮೊದಲಾದ ಹಿರಿಯ ವಿದ್ವಾಂಸರೆದುರು ಆಳುದ್ದ ದೇಹವನ್ನು ಗೇಣುದ್ದ ಮಾಡಿಕೊಂಡು ಅವರ ಪಾದಗಳಿಗೆ ಸರ್ವಸ್ವವನ್ನೂ ಸಮರ್ಪಣೆ ಮಾಡಬಯಸುವ ಭಾವಭಂಗಿಯಲ್ಲಿ ನಿಲ್ಲುತ್ತಿದ್ದ ಆಕೆಯ

ಆಕೃತಿ ಇಂದಿಗೂ ಕಣ್ಣಿಗೆ ಕಟ್ಟಿದಂತಿದೆ ನನಗೆ. ಹಿರಿಯರನ್ನು ಕಣ್ಣೆತ್ತಿ ಸಹ ನೋಡುತ್ತಿರಲಿಲ್ಲ ಆಕೆ. ಇಂಪಿನ ಕೊರಳಿನಿಂದ ಹೊರ ಬೀಳುತ್ತಿದ್ದ ಆಕೆಯ ಮಿತವಾದ ಮಾತು ಮುತ್ತಿಗಿಂತ ನಯ. ಆಕೆಯ ಸೌಂದರ್ಯರಾಶಿಯ ಹಿಂದಡಗಿದ್ದ ಅಪೂರ್ವ ಕಾಂತಿಯೊಂದು ನೋಡುಗರಲ್ಲಿ ಪೂಜ್ಯಭಾವನೆಯನ್ನುಂಟು ಮಾಡುತ್ತಿತ್ತು.

ನಂಜನಗೂಡಿನ ವಕೀಲ್ ಸುಬ್ಬರಾಯರ ಆಶ್ರಯದಲ್ಲಿ ಬೆಳೆದವರು ನಾಗರತ್ನಮ್ಮ ಹಾಗೂ ಅವರ ತಾಯಿ. ಬಾಲ್ಯದಲ್ಲಿಯೇ ಹುಡುಗಿಯ ಕಲಾಭಿರುಚಿಯನ್ನು ಕಂಡುಕೊಂಡ ವಕೀಲರು ಕಲಾಕುಸುಮವನ್ನು ವಿಕಸನಗೊಳಿಸುವ ಉದ್ದೇಶದಿಂದ ಮೈಸೂರಿಗೆ ಅವರನ್ನು ಕರೆತಂದರು. ಬಿಡಾರಂ ಕೃಷ್ಣಪ್ಪ ಹಾಗೂ ಆಸ್ಥಾನ ಕವಿ ಗಿರಿಭಟ್ಟರ ತಮ್ಮಯ್ಯನವರಲ್ಲಿ ನಾಗರತ್ನಮ್ಮನ ವ್ಯಾಸಂಗ ಪ್ರಾರಂಭವಾಯಿತು. ತಮ್ಮಯ್ಯ ಸಂಗೀತ ಮತ್ತು ಸಾಹಿತ್ಯಗಳಲ್ಲಿ ಗಣ್ಯ ವಿದ್ವಾಂಸರು. ಮೈಸೂರು ಅರಮನೆಯ ಶಾಕುಂತಲ ನಾಟಕ ಸಭೆಯ ಶಿಕ್ಷಕರಾಗಿದ್ದರು. ಇವರ ಬಳಿ ಒಂದೆರಡು ವರ್ಷಗಳ ಕಾಲ ಸಂಗೀತ, ನರ್ತನ ಹಾಗೂ ಕನ್ನಡ ಸಾಹಿತ್ಯವನ್ನು ಅಧ್ಯಯನ ಮಾಡಿದರು ನಾಗರತ್ನಮ್ಮ. ತಮ್ಮಯ್ಯ ಹೊಸದಾಗಿ ಕಲಾಮೂರ್ತಿಯನ್ನೇನೂ ಕಡೆಯಬೇಕಾಗಿರಲಿಲ್ಲ. ದೈವದತ್ತವಾದ ಮೂರ್ತಿಗೆ ಶೃಂಗಾರ ಮಾಡುವ ಕೆಲಸ ಮಾತ್ರ ಉಳಿದಿತ್ತು ಅಷ್ಟೆ. ಆದುದರಿಂದಲೇ ನಾಗರತ್ನಮ್ಮನ ವಿದ್ಯಾರ್ಜನೆ ಹೂವಿನ ಸರ ಎತ್ತಿದಷ್ಟು ಹಗುರವಾಗಿಯೂ ತ್ವರಿತವಾಗಿಯೂ ಸಾಗಿತು.

ಅಲ್ಲಿಂದ ಮುಂದೆ ಬೆಂಗಳೂರಿನಲ್ಲಿದ್ದ ತನ್ನ ಸೋದರಮಾವಂದಿರಾದ ಪಿಟೀಲು ವೆಂಕಟಸಾಮಪ್ಪನವರಲ್ಲಿ ಸಂಗೀತಾಭ್ಯಾಸವನ್ನು ಮುಂದುವರಿಸಿದರು ನಾಗರತ್ನಮ್ಮ. ವಿದ್ವಾಂಸರ ಮತ್ತು ರಸಿಕರ ಗೌರವಾದರಗಳಿಗೆ ಪಾತ್ರರಾದರು. ಪ್ರಭುಗಳ ಕೃಪಾಕಟಾಕ್ಷ ದೊರಕಲೂ ಹೆಚ್ಚುಕಾಲ ಬೇಕಾಗಲಿಲ್ಲ.

ನಾಗರತ್ನಮ್ಮನವರಿಗೆ ಇನ್ನೂ ಹೆಚ್ಚಿನ ಪಾಂಡಿತ್ಯವನ್ನು ಸಂಪಾದಿಸಬೇಕೆಂಬ ಹಿರಿಯಾಸೆಯಾಗಿ ಮದ್ರಾಸಿಗೆ ಪ್ರಯಾಣ ಬೆಳೆಸಿದರು. ಪ್ರಖ್ಯಾತ ವಿದ್ವಾಂಸರ ಕಚೇರಿಗಳನ್ನು ಕೇಳಿ ವಿಷಯ ಸಂಗ್ರಹ ಮಾಡಿಕೊಂಡರು. ಸಂಗ್ರಹ ಮಾಡಿದುದನ್ನು ಸಾಧಿಸಿ ತಮ್ಮ ವಿದ್ಯೆಯನ್ನು ಪರಿಪಕ್ವ ಮಾಡಿಕೊಂಡರು. ಅವರ ಸಂಗೀತ ಜ್ಞಾನ ಒಂದಕ್ಕೆ ಹತ್ತರಷ್ಟಾಯಿತು.

ತ್ಯಾಗರಾಜರ ಕೀರ್ತನೆಗಳೆಂದರೆ ನಾಗರತ್ನಮ್ಮನಿಗೆ ಬಲು ಅಕ್ಕರೆ. ಸಾಹಿತ್ಯ ಭಾವವನ್ನು ಸಂಪೂರ್ಣ ಗ್ರಹಿಸಿ ಚಿತ್ತಾಕರ್ಷಕ ಶೈಲಿಯಲ್ಲಿ ಹಾಡುತ್ತಿದ್ದರು. ಅವರು ದೀಕ್ಷಿತರ ಕೃತಿಗಳನ್ನು ಹಾಡಿದ್ದೇ ವಿರಳ. ಒಮ್ಮೆ ಆಕೆಯ ಮಿತ್ರರೊಬ್ಬರು "ದೀಕ್ಷಿತರ ಕೀರ್ತನೆಗಳನ್ನು ನೀವೇಕೆ ಅಷ್ಟಾಗಿ ಹಾಡುವುದಿಲ್ಲ?" ಎಂದು ಕೇಳಿದರು. "ದೀಕ್ಷಿತರ ಕೀರ್ತನೆಗಳನ್ನು, ಸಾಹಿತ್ಯವನ್ನು ಅರ್ಥ ಮಾಡಿಕೊಂಡು ಪದಗಳನ್ನೂ, ಅಕ್ಷರಗಳನ್ನೂ ಸ್ಪಷ್ಟವಾಗಿ ಉಚ್ಚರಿಸುವುದು ಸುಲಭ ಸಾಧ್ಯವಲ್ಲ. ಆಳವಾದ ಸಾಹಿತ್ಯಜ್ಞಾನ ಅತ್ಯಾವಶ್ಯಕ. ಹೇಳಿಕೊಟ್ಟಿದ್ದನ್ನು ಗಿಳಿಯ ಪಾಠದಂತೆ ಹಾಡಿ ಒಪ್ಪಿಸುವುದು ಹೆಚ್ಚಿನದಲ್ಲ. ನನಗೆ ಸಂಸ್ಕೃತ ಭಾಷೆಯ ಪರಿಚಯ ಅಷ್ಟಾಗಿಲ್ಲ. ತಿಳಿಯದ ವಿಷಯಕ್ಕೆ ಕೈಹಾಕಿ ಕೀರ್ತನೆಗೂ ಅದರ ಕರ್ತೃವಿಗೂ ದ್ರೋಹಮಾಡುವುದು ನನಗೆ ಇಷ್ಟವಿಲ್ಲ" ಎಂದು ಪ್ರತ್ಯುತ್ತರವಿತ್ತರು ನಾಗರತ್ನಮ್ಮ. ಕನ್ನಡ ದೇವರ ನಾಮಗಳನ್ನು ತ್ಯಾಗಯ್ಯನವರ ಕೀರ್ತನೆಗಳನ್ನೂ ಭಾವಗರ್ಭಿತವಾಗಿ ಹಾಡಿ ಜನಾದರಣೀಯವನ್ನಾಗಿ ಮಾಡಲು ಶ್ರಮಿಸಿದರು. ಮದ್ರಾಸಿನಲ್ಲಿ ಸಹ ನಾಗರತ್ನಮ್ಮನವರ ಹೆಸರು ಮೂಲೆಮೂಲೆಗೂ ಹಬ್ಬಿತು.

ಹೀಗಿರುವಲ್ಲೊಂದು ದಿನ ವಿಚಿತ್ರ ಪ್ರಸಂಗವೊಂದು ಜರುಗಿತು. ಅಂದು ತ್ಯಾಗಯ್ಯನವರ ಆರಾಧನೆಯ ದಿನ. ನಾಗರತ್ನಮ್ಮ ಭಕ್ತಿಪುರಸ್ಸರದಿಂದ ಅಯ್ಯನವರ ಪೂಜೆ ಕೈಗೊಂಡರು. ನಾಲ್ಕಾರು ಕೀರ್ತನೆಗಳನ್ನು ಹಾಡಿ ಗಾನಸೇವೆಯನ್ನು ಸಲ್ಲಿಸಿದರು. ರಾತ್ರಿ ಊಟ ಮಾಡದೆಯೆ ಪ್ರಸಾದ ರೂಪವಾದ ಹಾಲು ಹಣ್ಣನ್ನು ಮಾತ್ರ ಸೇವಿಸಿ ಮಲಗಿದರು. ಎಂದೂ ಇಲ್ಲದ ಪ್ರಶಾಂತತೆ, ಗಂಭೀರತೆಯೊಂದು ಅವರ ಮನವನ್ನಾವರಿಸಿತ್ತು ಆ ದಿನ. ತ್ಯಾಗರಾಜರ ಪುಣ್ಯಜೀವನದ ಒಂದೊಂದು ಘಟನೆಯೂ ಕಣ್ಮುಂದೆ ಸುಳಿದು ನಾಗರತ್ನಮ್ಮನಿಗೆ ರೋಮಾಂಚನವಾಯಿತು. ರಾತ್ರಿ ಸುಮಾರು ಒಂದು ಘಂಟೆಯ ಸಮಯ. ತೇಜಃಪುಂಜರಾದ ವೃದ್ಧರೊಬ್ಬರು ಬಂದು ನಾಗರತ್ನಮ್ಮನವರನ್ನು ನಿದ್ದೆಯಿಂದ ಎಬ್ಬಿಸಿದಂತಾಯಿತು. "ತಾಯಿ, ನಿನ್ನ ಭಕ್ತಿ ಪೂಜೆಯಿಂದ ರಾಮಚಂದ್ರ ತೃಪ್ತನಾಗಿದ್ದಾನೆ. ತಿರುವಯ್ಯಾರಿನಲ್ಲಿ ತ್ಯಾಗರಾಜರ ಬೃಂದಾವನದ ಬಳಿ ಒಂದು ಮಂಟಪವನ್ನು ಕಟ್ಟಿಸಿ ವರ್ಷವರ್ಷವೂ ಭಕ್ತಶ್ರೇಷ್ಠರು ಬಂದು ಸೇರಿ ರಾಮನಾಮಸಂಕೀರ್ತನವನ್ನು ಮಾಡಲು ಅವಕಾಶವನ್ನು ಕಲ್ಪಿಸಿ ಪುಣ್ಯಶಾಲಿನಿಯಾಗು" ಎಂದು ಹೇಳಿ ಆ ವ್ಯಕ್ತಿ ಅದೃಶ್ಯವಾಯಿತಂತೆ. ನಾಗರತ್ನಮ್ಮನಿಗೆ ಮೈ

ಪುಳಕಿತವಾಯಿತು. ಆ ಮಹತ್ಕಾರ್ಯ ಸಾಧನೆಗಾಗಿ ತನ್ನ ಇಡೀ ಜೀವಮಾನವನ್ನೇ ಮುಡುಪಾಗಿಟ್ಟಳು ಆ ಮಹಾತಾಯಿ! ಮಾರನೆಯ ದಿನವೇ ಮದ್ರಾಸಿಗೆ ತೆರಳಿ ಸಂಬಂಧಪಟ್ಟ ಅಧಿಕಾರಿಗಳನ್ನೂ, ಪುರಪ್ರಮುಖರನ್ನೂ ಕಂಡು ಮಾತುಕತೆ ನಡೆಸಿ ಪುಣ್ಯಕೆಲಸದ ಅಂಕುರಾರ್ಪಣೆ ಮಾಡಿದರು. ಕೆಲಸಕಾರ್ಯಗಳ ಮೇಲ್ವಿಚಾರಣೆಯನ್ನು ಖುದ್ದಾಗಿ ಪರಿಶೀಲಿಸುವ ಉದ್ದೇಶದಿಂದ ಮದ್ರಾಸಿನಲ್ಲಿಯೇ ನೆಲೆಸಿದರು.

ಸ್ಥಳ-ಪರಸ್ಥಗಳಲ್ಲಿ ನಾಗರತ್ನಮ್ಮನವರ ಕಚೇರಿಗಳಾದವು. ಸಂಗ್ರಹವಾದ ಧನವನ್ನೆಲ್ಲ ತಮ್ಮ ಕನಸನ್ನು ನನಸಾಗಿಸಲು ಕೂಡಿಟ್ಟರು. ಹಗಲಿರುಳೂ ದೇವಬ್ರಾಹ್ಮಣರ ಪೂಜೆ, ರಾಮಾಯಣ ಶ್ರವಣ, ಸಂಗೀತಾರಾಧನೆ ನಡೆಸುತ್ತ ಕಾರ್ಯಾರಂಭದ ಸುದಿನವನ್ನು ಇದಿರು ನೋಡುತ್ತಿದ್ದರು.

ಕೊನೆಗೊಂದು ದಿನ ಕಾಲಹರಣ ಮಾಡದೆಯೆ ಒಡನೆಯೇ ಕಟ್ಟಡದ ಕೆಲಸವನ್ನು ಪ್ರಾರಂಭಿಸಬೇಕೆಂಬ ಆಸೆಯಾಯಿತು ನಾಗರತ್ನಮ್ಮನವರಿಗೆ. ಆದರೆ ಬೇಕಾಗಿದ್ದ ಮೊಬಲಗಿಗಿಂತ ಶೇಖರವಾಗಿದ್ದ ಹಣ ಕಡಿಮೆಯಾಗಿದ್ದಿತು. ಧೈರ್ಯಗೆಡಲಿಲ್ಲ ನಾಗರತ್ನಮ್ಮ. ಜೀವನದಲ್ಲಿ ಅನುಭವಿಸಬೇಕಾಗಿದ್ದ ಸುಖಾಭಿಲಾಷೆಗಳನ್ನೆಲ್ಲ ತೊರೆದಿದ್ದರು ಆಕೆ. ಹುಟ್ಟಿದ ಒಂದೆರಡು ಮಕ್ಕಳೂ ಮೃತಿ ಹೊಂದಿದ್ದರಿಂದ ನಾಗರತ್ನಮ್ಮ ವಿರಕ್ತರಾಗಿದ್ದರು. ತಮ್ಮ ಮನೆಯನ್ನು ಮಾರಿ ಬಂದ ಮೂವತ್ತು ಸಹಸ್ರ ರೂಪಾಯಿಗಳನ್ನು ನಿಧಿಗೆ ಸೇರಿಸಿದರು. ಆಪಾದಮಸ್ತಕವೂ ಇದ್ದ ತಮ್ಮ ಅಮೂಲ್ಯ ಆಭರಣಗಳನ್ನೆಲ್ಲ ಮಾರಿ ಬಂದ ಹಣವನ್ನು 'ಕೃಷ್ಣಾರ್ಪಣ' ಎಂದರು. ತ್ಯಾಗರಾಜ ಕ್ಷೇತ್ರದಲ್ಲಿ ಕಟ್ಟಡ ನಿರ್ಮಾಣ ಕಾರ್ಯ ಪ್ರಾರಂಭವಾಯಿತು. ಭಕ್ತಗಳು ಪವಿತ್ರ ಮನಸ್ಸಿನಿಂದ ಪ್ರಾರಂಭಮಾಡಿದ ಪುಣ್ಯ ಕಾರ್ಯಕ್ಕೆ ಜನಸಹಾಯ ತಾನೇ ತಾನಾಗಿ ಒದಗಿ ಬಂದಿತು. ಕಟ್ಟಡ ಮುಗಿದಂದು ನಾಗರತ್ನಮ್ಮನವರಿಗಾದ ಆನಂದ ಸಂಭ್ರಮಗಳಿಗೆ ತುದಿಮೊದಲಿರಲಿಲ್ಲ. "ಇನ್ನು ಯಾವ ಘಳಿಗೆಯಲ್ಲಿ ಬೇಕಾದರೂ ಪ್ರಾಣತ್ಯಾಗ ಮಾಡಲು ಸಿದ್ಧ ನಾನು" ಎನ್ನುತ್ತಿದ್ದರು ನಾಗರತ್ನಮ್ಮ.

ವರ್ಷವರ್ಷವೂ ದೇಶದ ನಾನಾ ಮೂಲೆಗಳಿಂದ ತಿರುವಯ್ಯಾರಿಗೆ ಬಂದು ಸೇರುವ ಭಕ್ತಾಗ್ರಣಿಗಳು ಇಂದಿಗೂ ನಾಗರತ್ನಮ್ಮನ ಪವಿತ್ರ ಜೀವನವನ್ನು ಕೃತಜ್ಞತೆಯಿಂದಲೂ ಗೌರವದಿಂದಲೂ ಸ್ಮರಿಸುತ್ತಾರೆ.

ಈ ಮಹತ್ಕಾರ್ಯ ಸಾಧನೆಯಾದ ಬಳಿಕ ನಾಗರತ್ನಮ್ಮ ಒಮ್ಮೆ ಬೆಂಗಳೂರಿಗೆ ಬಂದರು. ಕನ್ನಡಿಗರ ಹೆಸರಾಗಿ 'ಮೈಸೂರು ಛತ್ರ'ವೊಂದನ್ನು ತಿರುವಯ್ಯಾರಿನಲ್ಲಿ ಕಟ್ಟಿಸಿ ವರ್ಷಂಪ್ರತಿ ಹತ್ತು ಮಂದಿ ವಿದ್ಯಾರ್ಥಿಗಳಿಗೆ ಪ್ರೌಢ ಸಂಗೀತ ಶಿಕ್ಷಣ ದೊರೆಯುವಂತೆ ಏರ್ಪಡಿಸಬೇಕೆಂಬ ಉದ್ದೇಶದಿಂದ. ಆರ್ಕಾಟು ರಾಮಸ್ವಾಮಿ ಮೊದಲಿಯಾರ್ ಅವರ ದಿವಾನಗಿರಿಯ ಕಾಲ ಅದು. ಆಪ್ತಮಿತ್ರರಲ್ಲಿ ತಮ್ಮ ಉದ್ದೇಶವನ್ನು ತಿಳಿಯಪಡಿಸಿದರು. ಧನಸಂಗ್ರಹಕ್ಕಾಗಿ ಕಛೇರಿಗಳನ್ನು ಮಾಡಿದರು. ಸುಮಾರು ಆರು ಸಹಸ್ರ ರೂಪಾಯಿಗಳಷ್ಟು ಹಣ ಒದಗಿತು. ನಾಗಮ್ಮನವರ ಮುಖ ಕಿರಿದಾಯಿತು. ಆಕೆಯ ಇಂಗಿತವನ್ನರಿತ ಚಿರಪರಿಚಿತರೊಬ್ಬರು ನಾಗರತ್ನಮ್ಮನವರನ್ನು ಪ್ರಶ್ನಿಸಿದರು; "ನೀವು ಪಟ್ಟ ಇಷ್ಟು ಶ್ರಮಕ್ಕೆ ಅಲ್ಪ ಪ್ರತಿಫಲ ದೊರಕಿದ್ದರಿಂದ ನಿಮ್ಮ ಮನಸ್ಸಿಗೆ ಬೇಸರವಾಗಿರುವುದು ಸಹಜ. ಮದ್ರಾಸಿನಲ್ಲಿಯೇ ನೀವು ಇಷ್ಟು ಪ್ರಯತ್ನಿಸಿದ್ದರೆ ಇದಕ್ಕೆ ನಾಲ್ಕರಷ್ಟು ಹಣ ಶೇಖರಣೆಯಾಗುತ್ತಿತ್ತಲ್ಲ?" ಎಂದು. ನಾಗರತ್ನಮ್ಮ ನಕ್ಕು ನುಡಿದರು; "ಈ ಅಲ್ಪ ಆರು ಸಹಸ್ರ ರೂಪಾಯಿಗಳನ್ನು ಅರೆಕ್ಷಣದಲ್ಲಿ ಕೇವಲ ಒಬ್ಬ ಧನಿಕನಿಂದ ಪಡೆಯಬಲ್ಲೆ ಮದ್ರಾಸಿನಲ್ಲಿ. ಆದರೆ ನನ್ನ ಉದ್ದೇಶವೇ ಬೇರೆ. ಕನ್ನಡಿಗರಿಗಾಗಿ ಕೈಗೊಂಡ ಕಾರ್ಯಕ್ಕೆ ಕನ್ನಡೇತರರ ಕೊಂಕಿರಬಾರದು" ಎಂದು. ಕನ್ನಡ ನುಡಿಯ ಮೇಲೆ ಕನ್ನಡಿಗರ ಮೇಲೆ, ಅಷ್ಟು ಅಭಿಮಾನ, ಅಷ್ಟು ಮಮತೆ ಆಕೆಗೆ.

'ಮೈಸೂರು ಛತ್ರ'ದ ಕಟ್ಟಡದ ಕೆಲಸ ಪೂರೈಸುವುದರೊಳಗಾಗಿ ನಾಗರತ್ನಮ್ಮನವರ ಭೌತಿಕ ದೇಹ ನಮ್ಮಿಂದ ಕಣ್ಮರೆಯಾಯಿತು. ಆಗ ಅವರ ವಯಸ್ಸು ಸುಮಾರು ಎಂಭತ್ತು.

ನಾಗರತ್ನಮ್ಮನವರದು ಕಟ್ಟುಬಿಕ್ಕಟ್ಟಿನ ಸಂಗೀತ. ಖಚಿತವಾದ ಲಯ ಜ್ಞಾನ. ಅವರ ಶಾರೀರದ ಒಂದು ಅಪೂರ್ವ ಲಕ್ಷಣವೆಂದರೆ ಹೆಂಗಸಿನ ಶಾರೀರದ ಮಾಧುರ್ಯ, ಗಂಡಸಿನ ಶಾರೀರದ ಗಾಂಭೀರ್ಯ- ಎರಡೂ ಅದರಲ್ಲಿ ಮಿಲನವಾಗಿದ್ದವು. ಸಂಗೀತ ಶಾಸ್ತ್ರಾಧ್ಯಯನದ ಜೊತೆಯಲ್ಲಿಯೇ ನಾಟ್ಯ ಮತ್ತು ಅಭಿನಯ ಶಾಸ್ತ್ರಗಳ ಪರಿಚಯವೂ ಸಾಗಿದ್ದರಿಂದ ಆಕೆಯ ಸಂಗೀತ ಭಾವಭರಿತವಾಯಿತು.

ನಾಗರತ್ನಮ್ಮನವರ ಕಛೇರಿಗಳಲ್ಲಿ ಸ್ವರಕಲ್ಪನೆಗಿಂತ ರಾಗಾಲಾಪನೆಗೆ ಪ್ರಾಮುಖ್ಯತೆ ಹೆಚ್ಚು. ಯದುಕುಲಕಾಂಬೋಧಿಯನ್ನು ಹಾಡದೇ ಇದ್ದ ಕಛೇರಿಗಳೇ ಅಪರೂಪ. ಆ ರಾಗದಲ್ಲಿ 'ಶ್ರೀರಾಮ ಜಯರಾಮ' ಎಂಬ ಕೃತಿಯನ್ನು ಬಲು ಸೊಗಸಾಗಿ ಹಾಡುತ್ತಿದ್ದರು. 'ನಿತ್ಯಕಲ್ಯಾಣಿ' ಎಂಬ ರಾಗಮಾಲಿಕೆಯನ್ನು ಜನಪ್ರಿಯವನ್ನಾಗಿ ಮಾಡಿದವರೇ ನಾಗರತ್ನಮ್ಮ. 'ಭಕ್ತಾಪಾಯ ಭುಜಂಗ ಗಾರುಡಮಣಿಃ', ಶತ್ರುಚ್ಛೇದೈಕಮಂತ್ರಂ

ಇವೇ ಮೊದಲಾದ ಮುಕುಂದಮಾಲಾ ಶ್ಲೋಕಗಳನ್ನೂ ದೇವರನಾಮಗಳನ್ನೂ ಹಾಡುವುದರಲ್ಲಿ ನಾಗರತ್ನಮ್ಮನವರದೇ ಒಂದು ಶೈಲಿ, ಒಂದು ವೈಖರಿ. ಸಂಗೀತದಲ್ಲಿ ಖಚಿತವಾದ ಪಾಂಡಿತ್ಯವಿದ್ದುದರಿಂದ ವಿದ್ವಾಂಸರ ಯಾವ ಸವಾಲಿಗೂ ಹಿಂದು ಮುಂದು ನೋಡುತ್ತಿರಲಿಲ್ಲ.

ನಾಗರತ್ನಮ್ಮನವರ ಹಲವಾರು ಕಛೇರಿಗಳನ್ನು ಕೇಳುವ ಸುಯೋಗ ನನಗೆ ದೊರೆತಿದ್ದಿತು. ಜಡ್ಜ್ ನರಹರಿರಾಯರು, ಚೀಫ್ ಜಡ್ಜ್ ಚಂದ್ರಶೇಖರಯ್ಯನವರು, ಪುಟ್ಟಣ್ಣಶೆಟ್ಟರು ಇವರೇ ಮೊದಲಾದ ಕಲಾಭಿಜ್ಞರು ನಾಗರತ್ನಮ್ಮನವರ ಕಛೇರಿಗಳನ್ನು ಆಗಿಂದಾಗ್ಗೆ ಏರ್ಪಡಿಸಿ ಉತ್ತೇಜನ ನೀಡುತ್ತಿದ್ದರು. ವೀಣೆ ಸುಬ್ಬಣ್ಣನವರ ಮನೆಯಲ್ಲಿ ಆಕೆ ಅನೇಕ ಸಾರಿ ಹಾಡಿದ್ದರು.

ಈ ಎಲ್ಲ ಸನ್ನಿವೇಶಗಳೂ ನನಗೆ ಜ್ಞಾಪಕವಿದ್ದಾಗ್ಯೂ ಮದ್ರಾಸಿನಲ್ಲಿ ನಾನೊಮ್ಮೆ ಅವರ ಮನೆಗೆ ಹೋಗಿದ್ದ ಸಂದರ್ಭ ಮಾತ್ರ ನನ್ನ ಮನಸ್ಸಿನಲ್ಲಿ ಕದಲದೆ ನಿಂತಿದೆ. ಬಲು ವಿಶ್ವಾಸದಿಂದ ನಾಗರತ್ನಮ್ಮ ನನ್ನನ್ನು ಬರಮಾಡಿಕೊಂಡರು. ಅವರು ವ್ಯಾಸಂಗ ಮಾಡುತ್ತಿದ್ದ ಕೊಠಡಿಗೆ ಹೋದೊಡನೆಯೆ ಮೂಲೆಯಲ್ಲಿ ಒರಗಿಸಿಟ್ಟಿದ್ದ ತಂಜಾವೂರು ತಂಬೂರಿಯೊಂದರ ಮೇಲೆ ನನ್ನ ದೃಷ್ಟಿ ಬಿದ್ದಿತು. ನನ್ನ ಇಂಗಿತವನ್ನರಿತ ನಾಗರತ್ನಮ್ಮ ತಂಬೂರಿಯನ್ನು ನನ್ನ ಮುಂದಿಟ್ಟರು. ತಂಬೂರಿಯ ಕಾಯಿ, ದಂಡಿ, ಬಿರುಡೆಗಳನ್ನೊಳಗೊಂಡ ತುದಿ–ಹೀಗೆ ಮೂರು ಭಾಗಗಳನ್ನು ಬೇರೆ ಬೇರೆಯಾಗಿ ಮಾಡಿ ಮತ್ತೆ ಒಂದುಗೂಡಿಸಿ ತೋರಿಸಿದರು. ಪರಸ್ಥಳಗಳಿಗೆ ಹೋಗುವಾಗ ಜೊತೆಯಲ್ಲಿ ತೆಗೆದುಕೊಂಡು ಹೋಗಲು ಅನುಕೂಲವಾಗಿರಲೆಂದು ಈ ರೀತಿ ಮಾಡಿಸಿದ್ದೇನೆಂದರು. ಸೊಗಸಾದ ತಂಬೂರಿ. ಕೈಗೆ ತೆಗೆದುಕೊಂಡು ಶ್ರುತಿ ಮಾಡಿದೆ. ಶುದ್ಧವಾದ ತುಂಬು ನಾದವನ್ನು ಕೆಲನಿಮಿಷಗಳ ಕಾಲ ಇಬ್ಬರೂ ಕೇಳಿ ಆನಂದಿಸಿದೆವು. "ನಿಮ್ಮ ಹಾಡುಗಾರಿಕೆಯನ್ನು ಕೇಳಿ ಬಹುದಿನಗಳಾದವು. ಸ್ವಲ್ಪ ಏನಾದರೂ ಹಾಡಬಹುದಲ್ಲ?" ಎಂದೆ. "ಸೂರ್ಯನಿಗೆ ದೀಪೋತ್ಸವವೇ?" ಎಂದರು. "ಬಲುದೊಡ್ಡ ಮಾತು" ಎಂದೆ. "ಸರಿ, ತಮ್ಮ ಚಿತ್ತ" ಎಂದು ನಾಗರತ್ನಮ್ಮ ಹಾಡಲುಪಕ್ರಮಿಸಿದರು. ಮೈಸೂರು ಸದಾಶಿವರಾಯರ ಕಮಾಚ್ ರಾಗದ ಕೀರ್ತನೆ 'ಪರಮಾದ್ಭುತ ಮೈನ' ಎಂಬುದರಿಂದ ಅಂದಿನ ಸಂಗೀತ ಪ್ರಾರಂಭವಾಯಿತು. ಕೀರ್ತನೆಯೇ ಮುದ್ದಾದ ರಚನೆ. ನಾಗರತ್ನಮ್ಮ ಸುವರ್ಣ ಪುಷ್ಪಕ್ಕೆ ಸುಂಗಂಧ ಸೇರಿಸಿದಂತೆ ಮನೋಹರವಾಗಿ ಹಾಡಿದರು. ಸದಾಶಿವರಾಯರ ಕೀರ್ತನೆಗಳನ್ನು ಹಾಡುವುದು ಅಷ್ಟು ಸುಲಭಸಾಧ್ಯವಲ್ಲ. ಶಿಸ್ತಿನ ಅಭ್ಯಾಸ ಬಲದಿಂದ ಮಾತ್ರ ಸಾಧ್ಯ. ನಾಗರತ್ನಮ್ಮನವರ ಅಂದಿನ ಹಾಡಿಕೆ ಪರಿಶುದ್ಧವಾಗಿತ್ತು, ಹೃದಯಂಗಮವಾಗಿತ್ತು.

❑

ಕೃಪೆ : ನಾ ಕಂಡ ಕಲಾವಿದರು, ಪ್ರಕಾಶಕರು : ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು

೩

ಮಹಾವಿದುಷಿ : ಬೆಂಗಳೂರು ನಾಗರತ್ನಮ್ಮ

ಡಿ.ವಿ.ಜಿ.

ಬೆಂಗಳೂರು ನಾಗರತ್ನಮ್ಮ ಎಂಬಾಕೆ ಮೈಸೂರು ಪ್ರಾಂತದವಳು.

ಈಕೆಯಿಂದ ಬೇರೆಯಾದವಳು ಕೋಲಾರದ ನಾಗರತ್ನಮ್ಮ. ಕೋಲಾರದ ನಾಗರತ್ನಮ್ಮನ ತಾಯಿ ನಂಜುಂಡಾಸಾನಿ ಆ ಕಾಲದಲ್ಲಿ ಪ್ರಸಿದ್ಧಳಾಗಿದ್ದ ವಿದುಷಿ–ಸಂಗೀತದಲ್ಲಿಯೂ ಭರತನಾಟ್ಯದಲ್ಲಿಯೂ ಮಹಾಪ್ರವೀಣೆಯೆಂದು ಅನೇಕ ಸಭೆಗಳಲ್ಲಿ ಜಯಪತ್ರ ಗಳಿಸಿದ್ದವಳು.

ಕೋಲಾರದ ನಾಗರತ್ನಮ್ಮನ್ನೂ ಪ್ರಸಿದ್ಧಳಾದ ಗಾಯಕಿ. ಆಕೆಯ ಹಾಡಿಕೆಯೂ ಶ್ರಾವ್ಯವಾದದ್ದು. ಆಕೆಯ ಸಹೋದರ ಪುಟ್ಟಸ್ವಾಮಯ್ಯನವರು ಪಿಟೀಲುವಾದನದಲ್ಲಿ ಹೆಸರಾಗಿದ್ದರು ; ಚಿಕ್ಕವಯಸ್ಸಿನಲ್ಲಿಯೇ ಕಾಲವಾದರು.

ಬೆಂಗಳೂರು ನಾಗರತ್ನಮ್ಮ ವಾಸ್ತವವಾಗಿ ನಂಜನಗೂಡಿನ ಹೆಣ್ಣುಮಗಳು. ಆಕೆಯ ತಾಯಿ

ನಂಜನಗೂಡಿನಲ್ಲಿದ್ದ ಲಾಯರ್ ಸುಬ್ಬರಾಯರೆಂಬವರ ಆಶ್ರಿತಳು. ಮಗಳು ಪ್ರಾಪ್ತವಯಸ್ಕಳಾದ ಮೇಲೆ ಆಕೆಯು ಮಗಳ ವಿದ್ಯಾಭ್ಯಾಸಕ್ಕೋಸ್ಕರ ಮೈಸೂರಿನಲ್ಲಿ ನೆಲಸಿದಳು. ಆಸ್ಥಾನ ವಿದ್ವಾನ್ ಕವಿ ಗಿರಿಭಟ್ಟರ ತಮ್ಮಯ್ಯನೆಂಬವರ ಬಳಿ ನಾಗರತ್ನಮ್ಮ ಸಂಗೀತವನ್ನೂ ಸಾಹಿತ್ಯವನ್ನೂ ಅಭ್ಯಾಸ ಮಾಡಿದಳು. ಆಕೆಗೆ ಸಂಸ್ಕೃತ ಕಾವ್ಯ ಪಾಠವಾಗಿತ್ತು. ಶಬ್ದದ ಸಾಧುತ್ವ ಅಸಾಧುತ್ವಗಳು ಗೊತ್ತಿದ್ದದ್ದು ಮಾತ್ರವಲ್ಲದೆ ಸಂಧಿ ಸಮಾಸ ಅಲಂಕಾರ ಮೊದಲಾದ ವಿವರಗಳು ತಿಳಿದಿದ್ದವು. ಆದದ್ದರಿಂದಲೇ ಸಂಸ್ಕೃತ ಶ್ಲೋಕ ಗಮಕದಲ್ಲಿ ಆಕೆ ಈ ಹೊತ್ತಿಗೂ ಅಸಮಾನಳಾಗಿದ್ದಾಳೆ. ಗ್ರಾಮೊಫೋನ್ ರಿಕಾರ್ಡಿಗಾಗಿ ಆಕೆ ಹಾಡಿದ 'ಭಕ್ತಾಪಾಯ ಭುಜಂಗ ಗಾರುಡಮಣಿಸ್ತ್ರೈ ಲೋಕ್ಯರಕ್ಷಾಮಣಿಃ', 'ಶತುಚ್ಛೇದೈಕಮಂತ್ರಂ' ಈ ಶ್ಲೋಕಪಠನಗಳಲ್ಲಿಯೂ 'ನಿತ್ಯ ಕಲ್ಯಾಣಿ' ಎಂಬ ಸಂಸ್ಕೃತ ರಾಗಮಾಲಿಕೆಯಲ್ಲಿಯೂ ಆಕೆಯ ಸಾಹಿತ್ಯ ಪರಿಜ್ಞಾನ ಪ್ರಕಾಶಿಸುತ್ತದೆ.

ಆಕೆ ಕನ್ನಡ ಸಾಹಿತ್ಯದಲ್ಲಿಯೂ ಪರಿಶ್ರಮ ಮಾಡಿದ್ದವಳು. ಜೈಮಿನಿ ಭಾರತದಿಂದಲೂ, ರಾಜಶೇಖರ ವಿಲಾಸದಿಂದಲೂ, ಕುಮಾರವ್ಯಾಸ ಭಾರತದಿಂದಲೂ ಹತ್ತಾರು ಪದ್ಯಗಳನ್ನು ಉಚಿತ ರಾಗಗಳೊಡನೆ ಹಾಡಿ ವಿವರಣೆ ಕೊಡುತ್ತಿದ್ದಳು. ಆಕೆ ಮಹಾ ವಿದುಷಿ.

ಆಕೆಯನ್ನು ನಾನು ೧೯೦೮-೯ನೆಯ ವರ್ಷದಿಂದ ಬಲ್ಲೆ. ಆಗ ಆಕೆ ಚಿಕ್ಕಪೇಟೆಯಲ್ಲಿರುವ ಸಾಹುಜಿಯವರ ಮಹಡಿಯ ಮೇಲೆ ಸಂಗೀತ ಕಚೇರಿ ನಡೆಸಿದ್ದನ್ನು ನಾನು ನಾಲ್ಕಾರು ಸಲ ಕೇಳಿದ್ದೇನೆ. ಆಕೆಯ ಕಚೇರಿಗೆ ಕುತೂಹಲದಿಂದ ಬರುತ್ತಿದ್ದವರಲ್ಲಿ ದಿವಂತರಾದ ಚೀಫ್ ಜಡ್ಜಿ ಕೆ.ಎಸ್. ಚಂದ್ರಶೇಖರಯ್ಯರ್ ಅವರೂ ಒಬ್ಬರು. ಅವರಿಗೆ ಆಕೆಯ ಸಂಸ್ಕೃತ ಶ್ಲೋಕಗಾನದಲ್ಲಿ ಹೆಚ್ಚು ಮೆಚ್ಚಿಗೆ. "ನಾಗರತ್ನಮ್ಮನ ಸ್ಟೈಲೇ ಸ್ಟೈಲು" ಎನ್ನುತ್ತಿದ್ದರು.

ನಾಗರತ್ನಮ್ಮನು ಮೈಸೂರು ಪಟ್ಟಣದಲ್ಲಿ ವಿದ್ಯಾಭ್ಯಾಸ ನಡೆಸುತ್ತಿದ್ದಾಗಲೇ ಆಕೆಯ ಕೀರ್ತಿ ಮಹಾರಾಜ ಶ್ರೀ ಚಾಮರಾಜ ಒಡೆಯರವರ ಸನ್ನಿಧಾನದವರೆಗೂ ಹಬ್ಬಿತೆಂದು ಕಾಣುತ್ತದೆ. ಆಗ ಮಹಾಸ್ವಾಮಿಯವರ ಕಟಾಕ್ಷ ಆಕೆಯ ಕಡೆಗೆ ತಿರುಗಿತು.

ಕೆಲವು ದಿವಸಗಳಾದ ಮೇಲೆ ಆಕೆಯ ವಿದ್ಯಾವೈದುಷ್ಯಗಳು ಇನ್ನೂ ವಿಕಾಸ ಪಡೆಯಬೇಕಾದರೆ ಮೈಸೂರಿಗಿಂತ ಬೆಂಗಳೂರು ಹೆಚ್ಚು ತಕ್ಕ ಸ್ಥಳವೆಂದು ಆಕೆಯ ತಾಯಿ ಆಲೋಚಿಸಿ ಆಕೆಯನ್ನು ಬೆಂಗಳೂರಿನಲ್ಲಿದ್ದ ತನ್ನ ಅಣ್ಣ ಪಿಟೀಲು ವೆಂಕಟಸ್ವಾಮಪ್ಪನವರ ಮನೆಯಲ್ಲಿರುವಂತೆ ಏರ್ಪಡಿಸಿದಳು. ವೆಂಕಟಸ್ವಾಮಪ್ಪನವರು ಆ ಕಾಲದಲ್ಲಿ ಅತ್ಯಂತ ಪ್ರಸಿದ್ಧರಾದ ಪಿಟೀಲು ವಿದ್ವಾಂಸರು. ಆತನ ಮನೆಯಿದ್ದದ್ದು ನಗರ್ತರ ಪೇಟೆಯಲ್ಲಿ-ಕಾಳಮ್ಮನ ಗುಡಿಯ ಸಮೀಪದಲ್ಲಿ. ಅಲ್ಲಿ ನಾಗರತ್ನಮ್ಮ ಸಂಗೀತ ನರ್ತನಗಳೆರಡನ್ನೂ ಅಭ್ಯಾಸ ಮಾಡುತ್ತಿದ್ದಳು.

ನರಹರಿರಾಯರ ಆಶ್ರಯ

ನಾಗರತ್ನಮ್ಮನ ಸೌಂದರ್ಯ ಲಾವಣ್ಯಗಳ ವಾರ್ತೆ ಆಗ ಹೈಕೋರ್ಟಿನ ಜಡ್ಜಿಯಾಗಿದ್ದ ನರಹರಿರಾಯರ ಕಿವಿಯನ್ನು ಮುಟ್ಟಿತು. ನರಹರಿರಾಯರು ಆಕೆಗೆ ಆಶ್ರಯದಾತರಾದರು.

ನರಹರಿರಾಯರಿಗೆ ನಾಗರತ್ನಮ್ಮನವರಿಗೆ ಆಶ್ರಯಕೊಡಬೇಕೆಂದು ಮನಸ್ಸಾದಾಗ ಮೊದಲು ತಮ್ಮ ಧರ್ಮಪತ್ನಿಯ ಅನುಮತಿಯನ್ನು ಪಡೆದುಕೊಂಡರು. ಭಾರ್ಯೆಯನ್ನು ಕರೆಸಿಕೊಂಡು ಕೇಳಿದರು :

ನ : "ಏನ್ರಿ, ನಿಮ್ಮಲ್ಲಿ ಒಂದು ಮಾತು ಹೇಳಬೇಕಾಗ್ಯದೆ. ನಿಮ್ಮ ಅನುಮತಿ ಬೇಕಾಗ್ಯದೆ."

ಆಕೆ : "ನನ್ನ ಅನುಮತಿ ನಿಮಗೆ ಬೇಕು ಎಂದರೆ ಅದು ಯಾರಾದರೂ ಒಪ್ಪುವ ಮತೆ? ನನ್ನಿಂದೇನಾಗಬೇಕು ಹೇಳ್ರಿ."

ನ : "ಹಾಂಗಲ್ರಿ, ಇದೊಂದು ವಿಶೇಷ ಸಂದರ್ಭ. ನಮಗೆ ಕೆಲವು ದಿವಸದಿಂದ ನಾಗರತ್ನಮ್ಮ ಎಂಬಾಕೆಯ ಸಂಗೀತದ ಮೇಲೆ ಮನಸ್ಸಾಗ್ಯದೆ. ಆಕೆ ಬಹಳ ಛಂದಾಗಿ ಹಾಡ್ತಾರೆ. ನಾನು ಆಗಾಗ ಆಕೆಯ ಸಂಗೀತ ಕೇಳಬೇಕೆಂದು ಅಪೇಕ್ಷಾ ಆಗ್ಯದೆ. ನಿಮಗೆ ಅದು ಸಮ್ಮತವಿಲ್ಲದಿದ್ದರೆ ಹೇಳಿಬಿಡ್ರಿ, ಆ ಅಪೇಕ್ಷಾನ ಅಲ್ಲಿಗೇ ಬಿಟ್ಟು ಬಿಡುತ್ತೇನೆ".

ಆಕೆ : "ನಿಮ್ಮ ಅಪೇಕ್ಷಾ ಏನದೋ ಅದನ್ನು ನಡೆಸಬೇಕೆಂದು ನಮ್ಮ ಅಪೇಕ್ಷಾ."

ನ : "ಅದರಿಂದ ನಿಮಗೆ ಯಾವ ಅನಾನುಕೂಲವೂ ಆಗದ ಹಾಂಗೆ ನಾನು ನೋಡಿಕೊಳ್ಳುತ್ತೇನೆ."

ಆಕೆ : "ನಮಗೆ ಅನನುಕೂಲ ಆಗುವುದೇನಿದೆ? ಸಂಸಾರಕ್ಕೆ ಬೇಕಾದ್ದನ್ನೆಲ್ಲ ಮಾಡಿದೀರಿ. ಮಕ್ಕಳೆಲ್ಲ ಬೆಳೆದು

ಅವರ ಕಾಲಮೇಲೆ ನಿಂತುಕೊಂಬೋರಾಗಿದ್ದಾರೆ. ಹೆಣ್ಣು ಮಕ್ಕಳಿಗೆ ಮದುವೆ ಆಗ್ಯದೆ. ಗಂಡುಮಕ್ಕಳು ವಿದ್ಯಾವಂತರಾಗ್ಯಾರೆ. ಈಗ ನೀವು ಸಂತೋಷವಾಗಿರುವ ಹಾಂಗಿರುವುದು ನಮಗೆಲ್ಲ ಕರ್ತವ್ಯ."

ಹೀಗೆ ಆ ಮಹಾತಾಯಿ ಅಪ್ಪಣೆ ಕೊಟ್ಟರು. ಅನಂತರ ನರಹರಿರಾಯರ ಸಂಕಲ್ಪ ನಡೆದದ್ದು.

ಈ ಸಂಗತಿಯನ್ನು ನಾನು ಅವರ ಅತ್ಯಂತ ಸಮೀಪಸ್ಥರೊಬ್ಬರಿಂದ ಕೇಳಿದ್ದೇನೆ. ನನಗೆ ಹೇಳಿದವರು ನರಹರಿರಾಯರ ಮನೆಯಲ್ಲಿ ಊಟಮಾಡಿಕೊಂಡು ಸೆಂಟ್ರಲ್ ಕಾಲೇಜಿನಲ್ಲಿ ವಿದ್ಯಾರ್ಥಿಯಾಗಿದ್ದು ಬಳಿಕ ಸಾಧು ಸಜ್ಜನರೆಂದೂ ಕಾರ್ಯಸಮರ್ಥರೆಂದೂ ಗಣ್ಯರಾಗಿದ್ದ ಒಬ್ಬ ಹಳಬರು.

ರಾಯರು ಕೋರ್ಟಿನಿಂದ ಸಂಜೆ ಹಿಂದಿರುಗುವಾಗ ನಗರ್ತ ಪೇಟೆಗೆ ಬಂದು ತಮ್ಮ ಕೋಚ್‌ಗಾಡಿಯನ್ನು ಹೊರಗೆ ನಿಲ್ಲಿಸಿ ನಾಗರತ್ನಮ್ಮನ ಮನೆಯೊಳಕ್ಕೆ ಹೋಗಿ ಅಲ್ಲಿ ಕೆಲವು ಕಾಲ ಸಂಗೀತ ಕೇಳುತ್ತಿದ್ದರು. ನರಹರಿರಾಯರಿಗೆ ಸಂಗೀತ ಸಾಹಿತ್ಯಗಳಲ್ಲಿ ತುಂಬಾ ಅಭಿರುಚಿ. ಅವರ ಮಕ್ಕಳು ಲಕ್ಷ್ಮೀನರಸಿಂಹರಾಯರೂ, ಟಿ. ಹನುಮಂತರಾಯರೂ ಸಂಗೀತ ವಿದ್ವಾನ್ ವಾಸುದೇವಾಚಾರ್ಯರಿಗೆ ಮುಖ್ಯ ಸ್ನೇಹಿತರು. ಆಚಾರ್ಯರ ಸಂಗೀತದಲ್ಲಿ ತುಂಬಾ ಸಂತೋಷ. ಅಣ್ಣತಮ್ಮಂದಿರಿಬ್ಬರೂ ವಾಸುದೇವಾಚಾರ್ಯರನ್ನು ದಿನಗಟ್ಟಲೆ ತಮ್ಮ ತಮ್ಮ ಮನೆಗಳಲ್ಲಿ ಅತಿಥಿಯಾಗಿರಿಸಿಕೊಂಡು ಉಪಚರಿಸುತ್ತಿದ್ದರು. ಟಿ. ಲಕ್ಷ್ಮೀನರಸಿಂಹರಾಯರು ಕರ್ಣಾಟಕ ಸಾಹಿತ್ಯ ಪರಿಷತ್ತಿನ ಸಂಸ್ಥಾಪಕರಲ್ಲಿ ಒಬ್ಬರು. ಅವರಿಗೆ ಇಂಗ್ಲಿಷ್ ಸಾಹಿತ್ಯದಲ್ಲಿ ವಿಸ್ತಾರವಾದ ಪರಿಚಯವಿತ್ತು. ಈ ಗುಣಸಂಪತ್ತು ಅವರ ತೀರ್ಥರೂಪರಿಂದ ಬಂದಿದ್ದದ್ದೆಂದು ತೋರುತ್ತದೆ.

ನರಹರಿರಾಯರ ಔದಾರ್ಯ, ಕರ್ತವ್ಯ ಜಾಗೃತಿ

ನರಹರಿರಾಯರು ಸಂಗೀತ ಸಾಹಿತ್ಯಗಳಿಗೆ ಮನಸೋತಿದ್ದವರು ಮಾತ್ರವಲ್ಲದೆ ತುಂಬ ಉದಾರಿಗಳೂ ಮರ್ಯಾದೆವಂತರೂ ಆಗಿದ್ದರು. ಅವರ ಮನೆಯಲ್ಲಿ ಊಟಮಾಡುತ್ತಿದ್ದ ವಿದ್ಯಾರ್ಥಿಗಳ ಸಂಖ್ಯೆಗೆ ಮಿತಿಯಿಲ್ಲ. ಅನೇಕ ಮಂದಿ ಸಣ್ಣ ಹುಡುಗರು ಮೊದಲುಗೊಂಡು ಕಾಲೇಜು ದರ್ಜೆಯ ವಿದ್ಯಾರ್ಥಿಗಳವರೆಗೂ ಭೋಜನಕ್ಕಿರುತ್ತಿದ್ದರು. ನರಹರಿರಾಯರಿಗೆ ಆ ಹುಡುಗರ ಹೆಸರು ವಿಳಾಸಗಳೊಂದೂ ಗೊತ್ತಿರಲಿಲ್ಲ. ಅವರು ಪ್ರತಿಯೊಬ್ಬ ಬಾಲಕನನ್ನೂ "ಏನ್ರಿ? ಯಾವ ತರಗತಿಯಲ್ಲಿ ಓದುತ್ತಿದ್ದೀರಿ? ನಿಮಗೆ ಪುಸ್ತಕ ಇದೆಯೆ? ಏನು ಬೇಕು?" ಎಂದು ವಿಚಾರಿಸುತ್ತಿದ್ದರು. ಅವರು ಯಾರನ್ನೂ ಎಂದೂ ಏಕವಚನದಲ್ಲಿ ಮಾತನಾಡಿಸಿದ್ದಿಲ್ಲ.

ಒಂದು ದಿನ ವಿಶೇಷ ಸಂಗತಿ ನಡೆಯಿತು. ಜಡ್ಜಿ ನರಹರಿರಾಯರು ಆಗಾಗ ನಾಗರತ್ನಮ್ಮನ ಮನೆಗೆ ಹೋಗುತ್ತಿದ್ದ ಸಂಗತಿ ದಿವಾನ್ ಸರ್ ಕೆ. ಶೇಷಾದ್ರಿ ಅಯ್ಯರ್ ಅವರಿಗೆ ಹೇಗೋ ತಿಳಿದುಬಂತು. ಆಮೇಲೆ ಒಂದು ದಿನ ಬೆಳಗ್ಗೆ ಶೇಷಾದ್ರಿ ಅಯ್ಯರ್ ಅವರು ನರಹರಿರಾಯರ ಮನೆಗೆ ದಯಮಾಡಿಸಿದರು. ಅವರ ಮನೆಯಿದ್ದದ್ದು ಕೋಟೆಯಲ್ಲಿ ; ವೆಂಕಟರಮಣಸ್ವಾಮಿ ದೇವಸ್ಥಾನದ ಎದುರುಗಡೆ–ಈಗ ಬೆಂಗಳೂರು ಮೆಡಿಕಲ್ ಕಾಲೇಜಿರುವ ಜಾಗದ ಪೂರ್ವಕ್ಕೆ. ದಿವಾನರು ತಮ್ಮ ಮನೆಗೆ ದಯಮಾಡಿದರೆಂದು ನರಹರಿರಾಯರಿಗೆ ಒಂದು ಕಡೆ ಸಂತೋಷ ; ಒಂದು ಕಡೆ ಆಶ್ಚರ್ಯ. ಶೇಷಾದ್ರಿ ಅಯ್ಯರ್‌ರವರಿಗೆ ತಮ್ಮ ಉದ್ದೇಶದ ವಿಷಯವನ್ನು ಹೇಳಲು ಸಂಕೋಚ. ಕುಶಲ ಪ್ರಶ್ನೆಗಳಾದ ಬಳಿಕ ಶೇಷಾದ್ರಿ ಅಯ್ಯರ್ ಅವರು ಹೇಳಿದರು :

"ರಾಯರೆ, ನಾನು ಹೇಳಬೇಕೆಂದು ಬಂದಿರುವ ವಿಷಯ ನಿಮ್ಮ ಅಂತರಂಗ ಜೀವನಕ್ಕೆ ಸಂಬಂಧಪಟ್ಟದ್ದು. ಅದರಲ್ಲಿ ನನಗೆ ಯಾವ ಅಧಿಕಾರವೂ ಸಲ್ಲದು. ನಾನು ಆ ಮಾತಿಗೆ ಬರುವುದು ಅಧಿಕ ಪ್ರಸಂಗಿತನವಾಗುತ್ತದೆ. ಇಷ್ಟರ ಮೇಲೆ ತಾವು ಪ್ರಾಜ್ಞರು ; ವಿನಯ ಶೀಲರು ; ಧರ್ಮಾಧರ್ಮ ವಿವೇಕವುಳ್ಳವರು. ಆದರೆ ಪ್ರಜೆಯ ಮನಸ್ಸನ್ನು ತಿಳಿದು ನಡೆಯಬೇಕಾದದ್ದು ನನ್ನ ಕರ್ತವ್ಯ. ಸರಕಾರವು ಜನರ ಮನಸ್ಸಿನಲ್ಲಿ ಮನ್ನಣೆ ಪಡೆದಿರಬೇಕು. ಜನ ಸರಕಾರಕ್ಕೆ ಕೊಡುವ ಗೌರವವನ್ನು ಕಾಪಾಡಬೇಕಾದದ್ದು ನನ್ನ ಕರ್ತವ್ಯ. ಆದುದರಿಂದ ನಾನು ಒಂದು ವಿಜ್ಞಾಪನೆ ಮಾಡಿಕೊಳ್ಳಬಂದಿದ್ದೇನೆ. ನಾನು ದುಡುಕಿರುವುದಾದರೆ ತಾವು ಸ್ನೇಹದಿಂದ ಕ್ಷಮಿಸಬೇಕು."

ಇದಕ್ಕೆ ಉತ್ತರವಾಗಿ ನರಹರಿರಾಯರು ಹೇಳಿದರು :

ನ : "ತಾವು ಇಷ್ಟು ಹೇಳುವುದು ಅನಾವಶ್ಯಕ. ತಮಗೆ ಯಾವುದು ಕರ್ತವ್ಯವೋ ಅದು ನನಗೂ ಕರ್ತವ್ಯ. ಸಂಗತಿ ಅಪ್ಪಣೆಯಾಗಬೇಕು."

ಶೇ : "ನೀವು ಸಂಜೆ ಹೈಕೋರ್ಟಿನಿಂದ ಮನೆಗೆ ಹಿಂದಿರುಗುವಾಗ ನಾಗರತ್ನಮ್ಮನವರ ಮನೆ ಸಮೀಪಿಸಿದ ಕೂಡಲೆ ಕೋಚಿನ ಮೇಲೆ ಸಾರಥಿಯ ಪಕ್ಕದಲ್ಲಿ ಕುಳಿತಿರುವ ಜವಾನನು ತನ್ನ ಕೈಯಲ್ಲಿರುವ ಬೆಳ್ಳಿ ಹಿಡಿಯ ಕೋಲನ್ನು ಕೆಳಗಿರಿಸಿಬಿಡುವಂತೆ ಅಪ್ಪಣೆಯಾಗಬೇಕು. ಆ ಕೋಲು ಅಧಿಕಾರ ಲಾಂಛನ. ಅದನ್ನು ಜನ ನೋಡಿದೊಡನೆಯೇ 'ಇದು ಜಡ್ಡಿಗಳು ಒಲಿದಿರುವ ಸ್ಥಳ' ಎಂದು ಭ್ರಾಂತಿಪಟ್ಟಾರು."

ಈ ಮಾತನ್ನು ಕೇಳಿದ ಕೂಡಲೆ ನರಹರಿರಾಯರು ಮೇಲಕ್ಕೆದ್ದು–

"ತಾವು ಹೇಳಿದ್ದು ಸರಿಯಾದ ಮಾತು. ಇದುವರೆಗೂ ಅಜಾಗ್ರತೆಯಿಂದ ತಪ್ಪು ನಡೆಯಿತು. ಈ ಕೂಡಲೆ ಅದನ್ನು ಸರಿಪಡಿಸುತ್ತೇನೆ. ಈ ಹೊತ್ತು ತಾವು ನನಗೆ ದೊಡ್ಡ ಉಪಕಾರ ಮಾಡಿದ್ದೀರಿ. ತಮ್ಮಿಂತ ನಾನು ಕರ್ತವ್ಯ ಜಾಗರೂಕನಾದೆ. ಇದುವರೆಗೆ ನಡೆದದ್ದನ್ನು ಮಾಫ್ ಮಾಡಬೇಕು."

– ಹೀಗೆ ಹೇಳಿ ಬೀಳ್ಕೊಟ್ಟರು.

ಮೌಂಟ್ ಜಾಯ್

ಇದಾದ ಕೆಲವು ದಿನಗಳ ತರುವಾಯ ನರಹರಿರಾಯರು ತಮ್ಮ ಸಂಗೀತ ವಿನೋದಕ್ಕೆ ತಕ್ಕ ಜಾಗವನ್ನು ಊರ ಹೊರಗಡೆ ಕಲ್ಪಿಸಿಕೊಳ್ಳತಕ್ಕದ್ದೆಂದು ನಿಶ್ಚಯಿಸಿ ಬೆಂಗಳೂರು ಸುತ್ತಮುತ್ತಿನ ಪ್ರದೇಶಗಳಲ್ಲಿ ಹುಡುಕಾಡಿ ಕಡೆಗೆ ಈಗ "ನರಹರಿರಾಯರ ಗುಡ್ಡ" ಎಂದು ಪ್ರಸಿದ್ಧವಾಗಿರುವ ಸ್ಥಳವನ್ನು ಗೊತ್ತುಮಾಡಿದರು. ಆ ಕಾಲಕ್ಕೆ ಈ ಪ್ರದೇಶವೆಲ್ಲ ಕಾಡಾಗಿತ್ತು. ಗುಡ್ಡಕ್ಕೆ ಮೌಂಟ್ ಜಾಯ್ (ಆನಂದ ಶೈಲ) ಎಂದು ಹೆಸರಿಟ್ಟವರು ಅವರೇ, ಮತ್ತು ಅಲ್ಲಿಯ ಅನೇಕ ಮಂಪಟಗಳನ್ನೂ ಕಟ್ಟಡಗಳನ್ನೂ ಕಟ್ಟಿಸಿದವರು ಅವರೇ. ಆ ಗುಡ್ಡದ ಮೇಲಣ ಶಿವಾಲಯ ಅಲ್ಲಿ ಮೊದಲೇ ಇದ್ದದ್ದು. ನರಹರಿರಾಯರು ಅದರ ಜೀರ್ಣೋದ್ಧಾರ ಮಾಡಿಸಿದರು. ತಿಂಗಳಿಗೆ ಒಂದು ಸಾರಿಯೋ ಎರಡು ಸಾರಿಯೋ ನರಹರಿರಾಯರು ಮಿತ ಪರಿವಾರದೊಡನೆ ಅಲ್ಲಿಗೆ ಹೋಗಿ ನಾಗರತ್ನಮ್ಮನವರ ಸಂಗೀತದಿಂದ ಸಂತೋಷ ಪಡುತ್ತಿದ್ದರು.

ನರಹರಿರಾಯರು ಕೆಲಸದಿಂದ ನಿವೃತ್ತರಾಗುವ ದಿವಸ ಬರುವ ಸಮಯದಲ್ಲಿ ಅವರು ಮುಂದಾಲೋಚನೆಯಿಂದ ನಾಗರತ್ನಮ್ಮನವರಿಗೆ ಮದರಾಸಿನಲ್ಲಿ ಆಶ್ರಯವನ್ನು ಕಲ್ಪಿಸಿದರು. ಹಾಗೆ ಅಲ್ಲಿ ಆಶ್ರಯಕೊಟ್ಟವರು ಸಾಹುಕಾರರಾದ–ಮೊದಲಿಯಾರ್ ಎಂಬವರು. ಸ್ವಲ್ಪಕಾಲದ ಮೇಲೆ ನಾಗರತ್ನಮ್ಮ ಸಂಗೀತ ಪ್ರಪಂಚದಲ್ಲಿ ಸ್ವತಃ ಮಹೋನ್ನತಳಾಗಿ ಇತರ ಆಶ್ರಯದ ಅಪೇಕ್ಷೆಯಿಲ್ಲದವಳಾದಳು.

ನಾಗರತ್ನಮ್ಮನವರ ಕಡೆಯ ದಿನಗಳು

ಆಕೆಯನ್ನು ನಾನು ಕಡೆಯ ಸಾರಿ ಕಂಡದ್ದು ಸರ್ ಆರ್ಕಾಟ್ ರಾಮಸ್ವಾಮಿ ಮೊದಲಿಯರ್ ಅವರು ದಿವಾನರಾಗಿದ್ದಾಗ. ಆಗ ಆಕೆ ಬೆಂಗಳೂರಿಗೆ ಬಂದಿದ್ದದ್ದು ಒಂದು ಧರ್ಮ ಕಾರ್ಯಕ್ಕೆ ಸಹಾಯ ಸಂಪಾದಿಸುವುದಕ್ಕಾಗಿ. ಆಕೆಯ ವೈಯಕ್ತಿಕ ಜೀವನ ಕಡೆಯ ದಿನಗಳಲ್ಲಿ ಸಂತೋಷಕರವಾಗಿರಲಿಲ್ಲ. ಇದ್ದ ಒಂದೆರಡು ಮಕ್ಕಳು ತೀರಿಕೊಂಡಿದ್ದವು ; ಸಾಕಿಕೊಂಡಿದ್ದ ಒಂದು ಮಗುವೂ ಹೋಯಿತು. ಭಾಗವತದಲ್ಲಿ ಹೇಳುವಂತೆ ಭಗವಂತನು ಯಾರಲ್ಲಿ ಅನುಗ್ರಹ ಮಾಡಬೇಕೆಂದಿರುತ್ತಾನೋ ಅವರಿಗೆ ಕಷ್ಟ ಪರೀಕ್ಷೆಯನ್ನಿಡುತ್ತಾನೆ.

ಯಸ್ಯಾನುಗ್ರಹಮಿಚ್ಛಾಮಿ
ತಸ್ಯ ವಿತ್ತಂ ಹರಾಮ್ಯಹಮ್ ॥

ಶ್ರೀರಾಮಪಾದಾರವಿಂದದ ವಿನಾ ಮತ್ತೆಲ್ಲಿಯೂ ತನಗೆ ಸುಖಶಾಂತಿಗಳು ಲಭ್ಯವಲ್ಲವೆಂದು ಆಕೆ ಮನಗಂಡಳು. ತಾನು ಸಂಪಾದಿಸಿದ್ದ ಹಣವೂ ಕೀರ್ತಿಯೂ ತ್ಯಾಗರಾಜರ ಮಹಿಮೆಯಿಂದ ಬಂದವು. ಆದದ್ದರಿಂದ ತನ್ನ ಸರ್ವಸ್ವವನ್ನೂ ತನ್ನ ಗುರು ಸ್ವಾಮಿಯಾದ ತ್ಯಾಗರಾಜರಿಗೂ ತ್ಯಾಗರಾಜರ ಇಷ್ಟದೈವವಾದ ಶ್ರೀರಾಮಚಂದ್ರನಿಗೂ ಸಮರ್ಪಿಸತಕ್ಕದ್ದೆಂದು ನಿಶ್ಚಯಿಸಿದ್ದಳು.

ಮನಸ್ಸು ಈ ನಿಶ್ಚಯಕ್ಕೆ ಬಂದಮೇಲೆ ಒಂದು ರಾತ್ರಿ ಆಕೆಗೆ ತ್ಯಾಗರಾಜರ ಸಮಾಧಿ ಸ್ಥಳದ ದೃಶ್ಯವು ಕನಸಿನಲ್ಲಿ ತೋರಿತಂತೆ. ಮಾರನೆಯ ದಿನವೇ ಆಕೆ ತ್ಯಾಗರಾಜರ ಸಮಾಧಿ ಸ್ಥಳವಾದ ತಿರುವಾಯುರಿಗೆ ಹೋಗಿ ಅಲ್ಲಿ ಒಬ್ಬಿಬ್ಬರು ಸ್ನೇಹಿತರೊಡನೆ ಶ್ಮಶಾನದಲ್ಲೆಲ್ಲ ಹುಡುಕಿ ಸಮಾಧಿಯನ್ನು ಗೊತ್ತುಮಾಡಿಕೊಂಡಳು. ಬಳಿಕ ಸಂಬಂಧಪಟ್ಟ ಅಧಿಕಾರಿಗಳನ್ನು ಕಂಡು ಬೇಕಾದ ಜನಸಹಾಯವನ್ನು ಸಂಪಾದಿಸಿ ಸಮಾಧಿ ಸ್ಥಳದಲ್ಲಿ ಶ್ರೀಸೀತಾರಾಮ ದೇವಾಲಯವನ್ನು ಕಟ್ಟಿಸಿ ತನ್ನ ಸರ್ವಸ್ವವನ್ನೂ ಅದಕ್ಕೆ ಧಾರೆಯೆರೆದಳು. ಮದರಾಸಿನ ಸಾಹುಕಾರಪೇಟೆಯಲ್ಲಿ ತಾನು ತನಗಾಗಿ ಕಟ್ಟಿಸಿಕೊಂಡಿದ್ದ ಮನೆಯನ್ನೂ ಮಾರಿ ಆ ಉತ್ಪತ್ತಿಯನ್ನೆಲ್ಲ ತಿರುವಾಯೂರಿನ ಕಾರ್ಯಕ್ಕಾಗಿ ವಿನಿಯೋಗಿಸಿದಳು. ಸುಮಾರು ಆ ಕಾಲದಲ್ಲಿ ಅದಕ್ಕೆ ಮೂವತ್ತು ಸಾವಿರ ರೂಪಾಯಿ ಬಂತೆಂದು ನನ್ನ ಜ್ಞಾಪಕ. ಅದರ ಜೊತೆಗೆ ತನ್ನಲ್ಲಿದ್ದ ಚಿನ್ನ, ಬೆಳ್ಳಿ, ರತ್ನಾಭರಣಗಳನ್ನೆಲ್ಲ ಮಾರಿದಳು ಈ ಉದ್ದೇಶಕ್ಕಾಗಿ.

ಬೆಂಗಳೂರು ನಾಗರತ್ನಮ್ಮನು ಮದರಾಸಿನಲ್ಲಿ ಸಾಹುಕಾರಪೇಟೆಯಲ್ಲಿ ಮನೆ ಕಟ್ಟಿಸಿದಾಗ ಗೃಹಪ್ರವೇಶೋತ್ಸವದ ದಿವಸ ಹಾಡಿಕೆಗಾಗಿ ಮೈಸೂರಿನಿಂದ ಬಿಡಾರಂ ಕೃಷ್ಣಪ್ಪನವರನ್ನು ಕರೆಯಿಸಿದ್ದಳು. ಆ

ಸಂಗೀತ ಕಛೇರಿಗೆ ಮದರಾಸಿನ ರಸಿಕ ಪ್ರಮುಖರು ಬಂದಿದ್ದರು. ಅವರಲ್ಲೊಬ್ಬರು "ಹಿಂದೂ" ಪತ್ರಿಕೆಯ ಸಂಪಾದಕರಾದ ಕಸ್ತೂರಿರಂಗಯ್ಯಂಗ್ಯಾರು. ಕಚೇರಿ ಬಲು ಸೊಗಸಾಗಿತ್ತು. ಅದು ಮುಕ್ತಾಯವಾದ ಮೇಲೆ ಕಸ್ತೂರಿ ರಂಗಯ್ಯಂಗಾರ್ಯರು ಕೇಳಿದರು :

"ಈ ಗಾಯಕರು ಬೇರೆ ಇನ್ನೆಲ್ಲಿಯಾದರೂ ಹಾಡಿಯಾರೆ? ನಮ್ಮ ಮನೆಗೆ ಬಂದಾರೆ?"

"ಸಂತೋಷವಾಗಿ ಬಂದಾರು."

ಈ ಉತ್ತರ ಬಂದಮೇಲೆ ಕಸ್ತೂರಿರಂಗಯ್ಯಂಗಾರ್ಯರು ಹೇಳಿದರು :

"ನಮಗೆ ವಿಶೇಷವಾಗಿ ಬೇಕಾದದ್ದು ಕನ್ನಡ ದೇವರನಾಮಗಳ ಹಾಡಿಕೆ. ತ್ಯಾಗರಾಜರ ಕೃತಿಗಳನ್ನು ಹಾಡುವವರು ನಮಗೆ ಇಲ್ಲಿ ಬೇರೆ ಸಿಗುತ್ತಾರೆ. ದೇವರನಾಮಗಳನ್ನು ಕೇಳಬೇಕೆಂದು ಇಷ್ಟವಾಗಿದೆ."

ಕೃಷ್ಣಪ್ಪನವರು ಬಹುಸಂತೋಷದಿಂದ ಒಪ್ಪಿಕೊಂಡರು. ಅದರಂತೆ ಮದರಾಸಿನಲ್ಲಿ ಕನ್ನಡ ದೇವರನಾಮಗಳ ಸಂಗೀತ ಕಛೇರಿ ನಡೆಯಿತು. ಕೃಷ್ಣಪ್ಪನವರಿಗೆ ಕಾಲಕ್ರಮದಲ್ಲಿ ಬಂದ ಅತಿಶಯವಾದ ತಮಿಳುನಾಡು ಪ್ರಖ್ಯಾತಿಗೆ ಇದೇ ಪ್ರಾರಂಭವೆಂದು ತೋರುತ್ತದೆ.

ಮೈಸೂರು ಸತ್ರ

ನಾಗರತ್ನಮ್ಮ ಸ್ವಾಭಾವಿಕವಾಗಿ ಉದಾರಿ, ಅಸೂಯೆಯನ್ನರಿಯದವಳು. ಆಕೆಯ ಮನಸ್ಸಿನಲ್ಲಿ ಒಂದು ಕೊರತೆಯಿತ್ತು. ತಿರುವಾಯೂರಿನಲ್ಲಿ ತನ್ನ ಹುಟ್ಟೂರಾದ ಮೈಸೂರಿನ ಹೆಸರಿನಲ್ಲಿ ಒಂದು ಸತ್ರವಿರಬೇಕೆಂದು, ಆಕೆ ಹೇಳಿದಳು:

"ನನಗೆ ದೇವರು ಕೊಟ್ಟಿದ್ದನ್ನೆಲ್ಲ ಗುಡಿಗೂ ಪೂಜೆಗಳಿಗೂ ವೆಚ್ಚಮಾಡಿದೆ. ಈಗ ನನ್ನಲ್ಲಿ ಒಂದು ಬಿಡಿಗಾಸೂ ಇಲ್ಲ. ತಮಿಳು ದೇಶದಲ್ಲಿ ನಾನು ಕೇಳಿದರೆ ಹಣ ಕೊಡುವವರು ಎಷ್ಟೋ ಜನ ಇದ್ದಾರೆ. ನಾಟುಕೋಡಿ ಚೆಟ್ಟಿಗಳಲ್ಲಿ ನನಗೆ ಬೇಕಾದವರು ಒಬ್ಬೊಬ್ಬರೇ ಸತ್ರ ಕಟ್ಟಿಸಿಕೊಡಬಲ್ಲವರಿದ್ದಾರೆ. ಆದರೆ ಅವರು ತಮಗೆ ಬೇಕಾದ ಹೆಸರುಗಳನ್ನು ಸತ್ರಕ್ಕೆ ಕೊಟ್ಟಾರು. ಅದರಿಂದ ಮೈಸೂರಿಗೇನು ಕೀರ್ತಿ? ನಮ್ಮ ಕನ್ನಡ ಜನದ ಹೆಸರು ತ್ಯಾಗರಾಜ ಸನ್ನಿಧಿಯಲ್ಲಿಯೂ ಬೆಳಗಬೇಕು. ಮೈಸೂರಿನಿಂದ ಬಂದವರು ಇಳಿದುಕೊಳ್ಳುವುದಕ್ಕೂ ಒಂದು ಕರ್ನಾಟಕ ಸಂಗೀತದ ಪಾಠಶಾಲೆಗೂ ಅನುಕೂಲಿಸುವಂತೆ ಒಂದು ಮೈಸೂರು ಸತ್ರವನ್ನು ತಿರುವಾಯೂರಿನಲ್ಲಿ ಕಟ್ಟಿಸಬೇಕು. ಅದಕ್ಕಾಗಿ ಚಂದಾಹಣ ಬೇಡಲು ಈಗ ಬಂದಿದ್ದೇನೆ."

ನಾನು ಈ ಸಂಗತಿಯನ್ನು ನನ್ನ ಸ್ನೇಹಿತರಾದ ಕೆಲಮಂದಿ ಮಂತ್ರಿಗಳಲ್ಲಿಯೂ ಹೇಳಿದೆ. ಯಾವುದೂ ಫಲಕ್ಕೆ ಬರಲಿಲ್ಲ. ಕಡೆಗೆ, ರಾಜಕೀಯದಲ್ಲಿ ನನಗೆ ಪ್ರತಿಕಕ್ಷಿ ಸ್ಥಾನದಲ್ಲಿದ್ದ ದಿವಾನ್ ರಾಮಸ್ವಾಮಿ ಮೊದಲಿಯಾರ್ ಅವರಿಗೆ ಹೇಳಿದೆ. ಅವರು ಆದರಿಸಿ ತಮ್ಮ ಕಾರು ಕಳುಹಿಸಿ ನಾಗರತ್ನಮ್ಮನವರನ್ನು ತಮ್ಮ ಮನೆಗೆ ಕರೆಯಿಸಿಕೊಂಡು ತಮ್ಮ ಧರ್ಮಪತ್ನಿಯವರ ಮೂಲಕ ಐದುನೂರು ರೂಪಾಯಿಗಳಷ್ಟನ್ನು ಕೊಡಿಸಿ ಬಳಿಕ ಮೊದಲಿಯಾರ್ ಸಂಘದಲ್ಲಿ ಕಛೇರಿ ನಡೆಸಿ ಒಂದು ಘನವಾದ ಸಂಭಾವನೆಯನ್ನು ಕೊಡಿಸಿದರು. ಮತ್ತು ಪುಟ್ಟಣ್ಣಶೆಟ್ಟಿ ಪುರಭವನದಲ್ಲಿ ಒಂದು ಸಹಾಯಾರ್ಥ ಕಛೇರಿ ಏರ್ಪಾಡು ಮಾಡುವಂತೆ ಸಲಹೆ ಕೊಟ್ಟು ತಾವೇ ಖುದ್ದು ಆ ಕಛೇರಿಗೂ ಬಂದು ಪ್ರೋತ್ಸಾಹಿಸಿದರು. ಹೀಗೆ ನಾಗರತ್ನಮ್ಮನವರ ಉದ್ದೇಶ ಸಂಪೂರ್ಣ ನಿಷ್ಫಲವಾಗಲಿಲ್ಲ.

ಸಂಗೀತ ಶಿಕ್ಷಣ ರೀತಿ

ನಾಗರತ್ನಮ್ಮ ಕಡೆಯ ಸಾರಿ ಬೆಂಗಳೂರಿಗೆ ಬಂದಾಗ ಬಸವನಗುಡಿಯಲ್ಲಿ ತಾರಾಬಾಯಮ್ಮನವರ ಮನೆಯಲ್ಲಿ ಇಳಿದುಕೊಂಡಿದ್ದರು. ನಾಗರತ್ನಮ್ಮನವರು ಶನಿವಾರ ಸಂಜೆ ದೇವರ ಪೂಜೆ ಮಾಡಿಸಿ ಭಜನೆ ಮಾಡುವುದು ವಾಡಿಕೆ. ಇಂಥ ಒಂದು ಸಂದರ್ಭಕ್ಕೆ ನಾನು ಹೋಗಿದ್ದೆ. ಭಜನೆಯಾದ ನಂತರ ಸದಾಶಿವರಾಯರ ಒಂದು ಕೀರ್ತನೆಯನ್ನು ಆಕೆ ಒಬ್ಬ ಶಿಷ್ಯಳಿಗೆ ಪಾಠ ಹೇಳಿಕೊಟ್ಟರು. ರಾಗ ಹರಿಕಾಂಬೋಧಿ ಎಂದು ನನ್ನ ಜ್ಞಾಪಕ.

ರಾಮಕಥಾಸುಧಾಸಾಗರಮೀಜೇ........

ಇದು ಬಹು ಕಷ್ಟವಾದ ಕೀರ್ತನೆ. ಮೊದಲು ಹರಿಕಾಂಬೋಧಿ ರಾಗವೇ ಕೊಂಚ ಕಷ್ಟದ್ದು. ಕಳೆದ ಮೂವತ್ತು ವರ್ಷಗಳಲ್ಲಿ ಯಾವ ಪ್ರಸಿದ್ಧ ವಿದ್ವಾಂಸನೂ ಆ ರಾಗವನ್ನು ಆಲಾಪನೆ ಮಾಡಿ ಪಲ್ಲವಿ ಹಾಡಿದ್ದನ್ನು ನಾನು ಕೇಳಿಲ್ಲ. ಬಹು ಸೊಗಸಾದ ಒಂದು ರಾಗ ಯಾವ ಕಾರಣದಿಂದಲೋ ಮೂಲೆಗೆ ಬಿದ್ದಿದೆ. ಈ ರಾಗದಲ್ಲಿ ಸದಾಶಿವರಾಯರ ಕೀರ್ತನೆಯೆಂದರೆ ಕಬ್ಬಿಣದ ಕಡಲೆ. ಅಂಥ ಕೃತಿಯನ್ನು ನಾಗರತ್ನಮ್ಮ ಆರಿಸಿಕೊಂಡು

ಗಮಕಗಳನ್ನು ಸೇರಿಸುತ್ತಿದ್ದುದ್ದು ನನಗೆ ಅದ್ಭುತವೆನಿಸಿತು. ಆಕೆ ತನ್ನ ಕಂಠದಿಂದ ಸ್ವರಗಳನ್ನೂ ಜಾರುಗಳನ್ನೂ ನುಡಿದದ್ದಲ್ಲದೆ ಶಿಷ್ಯೆಗೂ ಆ ರೀತಿಯಲ್ಲಿ ಪಲುಕುಬಡಿ ಬರುವಂತೆ ಅಕ್ಷರ ಅಕ್ಷರಕ್ಕೂ ಸ್ವರಸ್ವರಕ್ಕೂ ತಿದ್ದುತ್ತಿದ್ದದ್ದು ಸೋಜಿಗವೆನಿಸಿತು. ವೇದಾಕ್ಷರಗಳನ್ನು ಅಧ್ಯಯನ ಮಾಡುವುದರಲ್ಲಿ ಹೇಗೆ ಸ್ವರಕ್ರಮಕ್ಕೆ ಪ್ರಾಧಾನ್ಯಕೊಟ್ಟು ಅಧ್ಯಾಪಕರು ಗಮನವಿರಿಸಿರುತ್ತಾರೋ ಹಾಗೆ ನಾಗರತ್ನಮ್ಮನವರು ಸ್ವರವಿನ್ಯಾಸದ ಮೇಲೆ ಗಮನವಿರಿಸಿರುತ್ತಿದ್ದರು.

ನಾನು "ಇಷ್ಟು ಕಷ್ಟವಾದ ಕೀರ್ತನೆಯನ್ನು ಯಾಕಮ್ಮ ಆರಿಸಿಕೊಂಡಿರಿ ಈ ವಯಸ್ಸಿನಲ್ಲಿ?" ಎಂದು ಕೇಳಿದೆ. ಆಕೆ "ಸುಲಭವಾದದ್ದನ್ನು ಹೇಳಿಕೊಡುವುದಕ್ಕೆ ಎಷ್ಟೋ ಮಂದಿ ಸಿಕ್ಕಿಯಾರು. ಕಷ್ಟವಾದದ್ದನ್ನು ಕಲಿಸುವ ವಿದ್ವಾಂಸರು ಪೂರ್ವಕಾಲದಲ್ಲಿದ್ದರು. ಅಂಥವರು ನನ್ನ ಗುರುಗಳು. ಅವರು ಹಾಕಿಕೊಟ್ಟ ದಾರಿಯನ್ನು ನಾನು ಹಿಡಿದಿದ್ದೇನೆ" ಎಂದರು.

ಸಂಪ್ರದಾಯ

ಐದಾರು ದಿನಗಳಾದ ಮೇಲೆ ಒಂದು ಮಧ್ಯಾಹ್ನ ಸುಮಾರು ಮೂರೂವರೆ ಘಂಟೆಗೆ ನಾನು ಅವರಲ್ಲಿಗೆ ಹೋದೆ. ಆಕೆ ಹಾಸಿಗೆಯ ಮೇಲೆ ಮಲಗಿ ಮುಲುಗುತ್ತಿದ್ದರು. ನಾನು ಹೋಗಿ "ಏನಮ್ಮಾ" ಎಂದು ಕೂಗುತ್ತಲೇ ಕಣ್ಣು ಬಿಟ್ಟು ನೋಡಿ "ಮೈಯಲ್ಲಿ ಸ್ವಸ್ಥವಿಲ್ಲಪ್ಪಾ" ಎಂದು ಹೇಳುತ್ತ ಅಲ್ಲಿಯೇ ಎದ್ದು ಕುಳಿತರು. ನಾನು ಹೊರಡುತ್ತೇನೆಂದೆ. "ಬೇಡ, ನಿಮ್ಮೊಡನೆ ಕೊಂಚ ಮಾತನಾಡುತ್ತಿದ್ದರೆ ಈ ಜಾಡ್ಯ ಮರೆಯುತ್ತದೆ" ಎಂದರು.

ಮಾತು ನಾಟ್ಯಕಲೆಯ ಕಡೆಗೆ ತಿರುಗಿತು. ಪ್ರಾಸ್ತಾವಿಕವಾಗಿ ಹಳೆಯ ಸಂಪ್ರದಾಯದ ನಾಟ್ಯವನ್ನು ಕುರಿತು ಪ್ರಶ್ನೆಯೆತ್ತಿದೆ. ಆಕೆ–"ಈ ಮುದುಕಿ ಅದನ್ನು ಹೇಗೆ ತೋರಿಸುವುದು? ಕೂತ ಹಾಗೆಯೇ ಆದಷ್ಟು ತೋರಿಸುತ್ತೇನೆ" ಎಂದು ಹೇಳಿ ತಲೆಗೆ ಸುತ್ತಿದ್ದ ಬಟ್ಟೆಯನ್ನು ತೆಗೆದು ಹೊದ್ದಿದ್ದ ಕಂಬಳಿಯನ್ನು ದೂರ ತಳ್ಳಿ ಕೈಮುಗಿದು ಕುಳಿತು ರಾಗಾಲಾಪನೆಗೆ ಆರಂಭಿಸಿದರು.

ಸಭಾಕಲ್ಪತರುಂ ವಂದೇ
ವೇದಶಾಖೋಪಜೀವಿನಮ್ ।
ಶಾಸ್ತ್ರಪುಷ್ಪಸಮಾಯುಕ್ತಂ
ವಿದ್ವದ್‌ಭ್ರಮರಶೋಭಿತಮ್ ॥

ಷಡ್ದರ್ಶನೀಪರಿಜ್ಞಾನ–
ಪಂಡಿತೈರಿವ ಮಂಡಿತೈಃ।

ಸ್ತಂಭೈಶ್ಚಿತ್ರೈರ್ವಿತಾನೈಶ್ಚ
ಸಭಾ ಕಿಮವಭಾಸತೇ ॥

"ಹೀಗೆ ಸಭಾವಂದನ ಮಾಡತಕ್ಕದ್ದು. ನಾಟರಾಗದಲ್ಲಿ ಪ್ರಾರಂಭಿಸುವುದು ಪದ್ಧತಿ. ಅನಂತರ ವಸಂತರಾಗಕ್ಕೆ ಬರತಕ್ಕದ್ದು. ಅದರಲ್ಲಿ ಪದಮಟ್ಟು ವರ್ಣ ಹಾಡತಕ್ಕದ್ದು."

ಇದನ್ನು ಹೇಳಿ ಒಂದು ಹತ್ತು ನಿಮಿಷ ಅದನ್ನು ಪ್ರದರ್ಶನ ಮಾಡಿದರು. ನರ್ತನದಲ್ಲಿ ಪೀಠಿಕಾಭಾಗಕ್ಕೆ ಅಲರಿಪು ಎಂದು ಹೆಸರು. ಹಾಗೆಂದರೆ "ಹೂವು ಅರಳುವುದು" ಎಂದರ್ಥ. ಹೂ ಅರಳಿದಂತೆ ಸಭಿಕರ ಮನಸ್ಸು ಅರಳಬೇಕು. ಪದವನ್ನು ಹಾಡಿ ಅಭಿನಯಿಸಿದರೆ ಕಲಾವಂತೆಯ ಮನಸ್ಸೂ ಅರಳಬೇಕು; ಕೇಳುವವರ ಮತ್ತು ನೋಡುವವರ ಮನಸ್ಸೂ ಅರಳಬೇಕು.

ಈ ವಿವರಣೆಯಾದ ಮೇಲೆ ನಾನು ಹಿಂದೆ ಉದಾಹರಿಸಿದ (ಪುಟ ೧೮೮) "ಯಾಹಿ ಮಾಧವ" ಎಂಬ ಅಷ್ಟಪದಿಯನ್ನು ಪ್ರಶಂಸೆ ಮಾಡಿದೆ. ನಾಗರತ್ನಮ್ಮ ಆ ಭಾಗವನ್ನು ಹಿಡಿದು ಅಷ್ಟಪದಿಯನ್ನು ಅಭಿನಯಿಸಿದರು. "ಯಾಹಿ" ಎಂಬ ಸಣ್ಣ ಮಾತಿನಲ್ಲಿ ಅಷ್ಟೊಂದು ಭಾವವಿಶೇಷಗಳು ಅಡಗಿವೆಯೆಂಬುದು ಆಗಲೇ ನನಗೆ ಸ್ಪಷ್ಟವಾದದ್ದು. ಮಹಾಕವಿಯು ಹೇಗೆ ನೂತನ ನಿರ್ಮಾಪಕನೋ (Creative), ಮಹಾ ಅಭಿನಯವೇತ್ತಳು ಹಾಗೆ ನಿರ್ಮಾಪಕಳಾಗುತ್ತಾಳೆ. ಅಭಿನಯವೂ ಒಂದು ರೀತಿಯ ಭಾಷ್ಯ.

* * *

ನಾಗರತ್ನಮ್ಮನವರಲ್ಲಿ ಹಾಸ್ಯ ಪರಿಪಾಟ ತುಂಬಿತ್ತು. ಆಕೆ ಸ್ವವಿಷಯವನ್ನು ಹೇಳಿಕೊಳ್ಳುತ್ತಾ "ಹುಟ್ಟಿನಲ್ಲಿ ನಾಗರತ್ನ, ಆಮೇಲೆ ಭೋಗರತ್ನ. ಈಗ ರೋಗರತ್ನ" ಎಂದು ಮಾತು ಮುಗಿಸಿದರು. ನಾನು "ಎರಡನ್ನು

ಮರೆತುಬಿಟ್ಟರಿ" ಎಂದೆ. "ಅದೇನು?" ಎಂದರು. "ಒಂದು ರಾಗರತ್ನ : ಇನ್ನೊಂದು ತ್ಯಾಗರತ್ನ. ಭೋಗ-ರೋಗಗಳು ಕ್ಷಣಿಕವಾದವು. ನಿಮ್ಮ ರಾಗ ಅದನ್ನು ಕೇಳಿದವರ ಮನಸ್ಸಿನಲ್ಲಿ ಪರಿಣಾಮ ಮಾಡಿ ಅವರ ಜೀವನೋಲ್ಲಾಸದಲ್ಲಿಯೂ ಜೀವನೋನ್ನತಿಯಲ್ಲಿಯೂ ಚಿರಕಾಲ ಉಳಿದುಕೊಂಡಿರುತ್ತದೆ. ನಿಮ್ಮ ತ್ಯಾಗದ ಪ್ರತ್ಯಕ್ಷ ರೂಪವಾದ ತಿರುವಾಯೂರು ಕ್ಷೇತ್ರದ ದೇವತಾ ಮಂದಿರಗಳು ಶಾಶ್ವತವಾಗಿ ನಿಂತಿರುತ್ತವೆ."

ಇದನ್ನು ನಾನು ಹೇಳುತ್ತಿದ್ದಂತೆ ನಾಗರತ್ನಮ್ಮನವರು ಕೈ ಮುಗಿದು "ನಿಮ್ಮ ಈ ಮಾತನ್ನು ನೀವೇ ಇಟ್ಟುಕೊಳ್ಳಿ" ಎಂದರು.

ಅನುಬಂಧ

೧೯೪೯ರ ಮಾರ್ಚಿ ತಿಂಗಳಲ್ಲಿ ಮದರಾಸಿನ "ಗೃಹಲಕ್ಷ್ಮಿ" ಎಂಬ ಆಂಧ್ರ ಮಾಸಪತ್ರಿಕೆಯ ಸಂಪಾದಕರೂ ಕೇಸರೀಕುಟೀರಂ ಎಂಬ ಆಯುರ್ವೇದ ಔಷಧ ಶಾಲೆಯ ವ್ಯವಸ್ಥಾಪಕರೂ ಆದ ಡಾ। ಕೆ.ಎನ್. ಕೇಸರಿ ಎಂಬ ಮಹನೀಯರು ನಾಗರತ್ನಮ್ಮನವರಿಗೆ ಒಂದು ಸ್ವರ್ಣಕಂಕಣವನ್ನು ಕೊಟ್ಟು ಬಹುಮಾನಿಸಿದರು. ಆ ಸಮಾರಂಭಕ್ಕಾಗಿ ಸೇರಿದ್ದ ಮಹಾಸಭೆಯಲ್ಲಿ ಮದರಾಸ್ ಮಹಿಳಾ ಮಂಡಲಿಯವರು ಆಕೆಗೆ "ತ್ಯಾಗ ಸೇವಾಸಕ್ತ" ಎಂಬ ಪ್ರಶಸ್ತಿಯನ್ನಿತ್ತರು. ಈ ಸಮಾರಂಭಗಳ ವೃತ್ತಾಂತವು "ಗೃಹಲಕ್ಷ್ಮಿ" ಪತ್ರಿಕೆಯ ೧೯೪೯ರ ಮಾರ್ಚಿ ತಿಂಗಳ ಸಂಚಿಕೆಯಲ್ಲಿ ಪ್ರಕಟವಾಗಿದೆ. ಆ ವೇಳೆಗೆ ಮುಂಚೆಯೇ ನಾಗರತ್ನಮ್ಮನವರಿಗೆ "ವಿದ್ಯಾಸುಂದರಿ", "ಗಾನಕಲಾ ವಿಶಾರದಾ" ಮೊದಲಾದ ಬಿರುದುಗಳು ಬಂದಿದ್ದವು. ಆಕೆಯ ಜೀವಿತ ಚರಿತ್ರೆಯನ್ನು ಕುರಿತ ಕೆಲವು ಸಂಗತಿಗಳು "ಗೃಹಲಕ್ಷ್ಮಿ" ಪತ್ರಿಕೆಯಲ್ಲಿ ಪ್ರಕಟವಾಗಿವೆ :

(೧) ಆಕೆಯ ಜನನ ಕ್ರಿಸ್ತವರ್ಷ ೧೮೭೮ಕ್ಕೆ ಸರಿಯಾದ ಬಹುಧಾನ್ಯ ಸಂವತ್ಸರದಲ್ಲಿ.

(೨) ಆಕೆಯ ತಾಯಿ ಪುಟ್ಟಲಕ್ಷ್ಮಮ್ಮನವರು

(೩) ನಾಗರತ್ನಮ್ಮ ಬೆಂಗಳೂರಿನಲ್ಲಿ ವಾಸವಾಗಿದ್ದು ವಿದ್ಯಾಭ್ಯಾಸ ಮಾಡುತ್ತಿದ್ದದ್ದು ಮುನಿಸ್ವಾಮಪ್ಪನವರ ಮನೆಯಲ್ಲಿ.

(೪) ಆಕೆಗೆ ಭರತಶಾಸ್ತ್ರ ಶಿಕ್ಷಣ ಮದರಾಸಿನ ತಿರುವೆಂಕಟಾಚಾರ್ಯರು, ಬೆಂಗಳೂರು ಕಿಟ್ಟಣ್ಣ-ಇವರಲ್ಲಿ.

(೫) ಆಕೆಯ ಸಂಗೀತ ಗುರುಗಳಲ್ಲಿ ಬಿಡಾರಂ ಕೃಷ್ಣಪ್ಪನವರು, ರಾಮನಾಡ್ ಶ್ರೀನಿವಾಸಯ್ಯಂಗಾರ್ಯರು, (ಬೂಚಿ) ಪೂಚಿ ಅಯ್ಯಂಗಾರ್ಯರು-ಇವರು ಮುಖ್ಯರು.

ಕೃಪೆ : ಡಿವಿಜಿ ಕೃತಿ ಶ್ರೇಣಿ, ಸಂಪುಟ ೬ ; ನೆನಪಿನ ಚಿತ್ರಗಳು ೧ ; ಪ್ರಕಾಶಕರು : ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು ❑

೪

ವೇಶ್ಯೆ, ಜಾರಿಣಿ; ಸ್ತ್ರೀ, ಪುರುಷ ಸಾಹಿತ್ಯ : ವಿವಾದ

ಬೆಂಗಳೂರು ನಾಗರತ್ನಮ್ಮ

ಅನು : ಸಾತವಲ್ಲಿ ವೆಂಕಟವಿಶ್ವನಾಥ

೧೯೧೦. ತಮಿಳು ನೆಲದಲ್ಲಿ ನಿಂತು, ಕನ್ನಡದ ಹೆಣ್ಣುಮಗಳು, ತೆಲುಗಿನ ಕಾವ್ಯವೊಂದಕ್ಕೆ ಬರೆದ ಮುನ್ನುಡಿ. ಬಹುಶಃ ಭಾರತದಲ್ಲಿಯೇ ಮೊದಲ ಆಧುನಿಕ ಸ್ತ್ರೀವಾದಿ ಚರ್ಚೆಗೆ ಅಂಕುರವಾಯಿತು. ಕಾವ್ಯವೇನೋ ೧೫೦ ವರುಷಗಳ ಹಿಂದೆಯೇ ರಚಿಸಿದ್ದು. ಅದೂ ಒಬ್ಬ ಹೆಣ್ಣುಮಗಳು. ಇಷ್ಟಾಗಿ ಆಕೆ ಒಬ್ಬ ವೇಶ್ಯೆ. ಮೊದಲ ಮುದ್ರಣ ಕಂಡು ಕಾಲು ಶತಮಾನವೇ ಆಗಿತ್ತು. ಆದರೆ ಇನ್ನೊಬ್ಬ ಹೆಣ್ಣುಮಗಳು, ಆಕೆಯೂ ಒಬ್ಬ ವೇಶ್ಯೆಯೇ. ಅದನ್ನು ಸಮಗ್ರವಾಗಿ, ಶುದ್ಧವಾಗಿ ಸಂಪಾದಿಸಿ, ಬರೆದ ಕೇವಲ ಮೂರುವರೆ ಪುಟದ ಮುನ್ನುಡಿ. ಪುರುಷರ ಕಾವ್ಯಗಳನ್ನು, ಕವಿಚರಿತ್ರೆಯನ್ನು ಪ್ರಶ್ನಿಸುವ ಮೂಲಕವೇ ಎತ್ತಿದ ತಾತ್ವಿಕ ಚರ್ಚೆ; ಸಾಮಾಜಿಕ, ಸಾಂಸ್ಕೃತಿಕ ಲೋಕವೇ ಬಂಡಾಯವೆದ್ದು ಕೃತಿಯನ್ನು ಅಲ್ಲ ಮುನ್ನುಡಿಯನ್ನು ಬಹಿಷ್ಕರಿಸಿಯೇ ಬಿಟ್ಟಿತು. ಸಾಲದು ಎಂಬಂತೆ ಮುಟ್ಟುಗೋಲು ಹಾಕ

ಹಾಕಿಕೊಂಡಿತು. ಆದರೆ ಐತಿಹಾಸಿಕವಾಗಿ ೧೦೦ ವರ್ಷಗಳಾಗುತ್ತ ಬಂದರೂ ಆ ಪ್ರಶ್ನೆ, ಆ ಚರ್ಚೆಯ ನೆಲೆಗಟ್ಟು ವಿಶ್ವದ ಸ್ತ್ರೀವಾದದಲ್ಲಿಯೂ ಪ್ರತಿಧ್ವನಿಸುವಂಥದ್ದಾಗಿದೆ. ಹೀಗಾಗಿ ಅಂದಿನಿಂದ ಇಂದಿನವರೆಗೂ ಬೆಂಗಳೂರು ನಾಗರತ್ನಮ್ಮ ಅವರು ಗೊತ್ತಿರಲಿ ಗೊತ್ತಿಲ್ಲದೆ ಇರಲಿ; ಯುಗವಾಣಿಯಾಗಿದ್ದರೆ, ಯುಗದ ಸವಾಲಾಗಿದ್ದಾರೆ.

ಸಂಪಾದಕ

ಸೀಸಪದ್ಯ : ಶ್ರೀ ಪರಿಪೂರ್ಣ ಮೌ । ಕ್ತೇಪಲ್ಲವಾಡಲೋ,
ನಂದಗೋಪಾಲುನಿ । ಮಂದಿರಮುನ
ನವತೀರ್ಚುಡ್ಡೈ ಮೇನ । ಯತ್ತಯೌರಾಧಿಕಾ,
ವಿಧುಮುಖಿಚೇ ಬ್ರೇಮ । ಬೆಂಪುಗನುಚು
ದನಮೇನಮಾಮಕೂ । ತು ನಿಳಾಲತಾಂಗಿನಿ,
ಬೆಂಡ್ಲಾಡಿಯಾಮೆತೋ । ವೇಡ್ಕನುಂಡ
ದನವಿಯೋಗಮಚೇತ । ದಾಳ ಜಾಲಕ ಚಾಲ,
ಜಿಂತಿಲ್ಲುಚುಂಡುಟ । ಜಿಲ್ಕವಲನ

ತೇಟಗೀತಿ : ವಿನಿ ಮಿಥಿಲನುಂಡಿ ಯಿಂಟಿಕಿ । ವೇಗ ವಚ್ಚಿ
ಚತುರಗತುಲನು ರಾಧಿಕಾ । ಸಾಂತ್ವನಮ್ಮು
ಜೇಸಿ ದಕ್ಷಿಣನೇತ ನಾ । ವಾಸಿಗನ್ನ
ಚೆನ್ನಿಕೃಷ್ಣನುನಿ ಮನಸುಲೋ । ನೆನ್ನುಚುಂದು.

ನಾನು ಚಿಕ್ಕಂದಿನಿಂದಲೂ ಸಂಗೀತ ವಿದ್ಯೆಯೊಂದಿಗೆ. ಸಾಹಿತ್ಯ ವಿದ್ಯೆ ಕೂಡ ಸ್ವಲ್ಪ ಆಳವಾಗಿ ಪರಿಶ್ರಮ ಕೈಗೊಂಡು ನಮ್ಮ ನಾಡಿನ ಭಾಷೆಯಾದ ಕನ್ನಡದಲ್ಲಿಯೂ ತೆಲುಗಿನಲ್ಲಿಯೂ ಹೆಚ್ಚು ಪುಸ್ತಕಗಳನ್ನು ಓದಿದೆನು. ನಂತರ ಬೆಂಗಳೂರಿನಿಂದ ಈ ಚೆನ್ನಪಟ್ಟಣಕೆ ಬಂದಾಗಿನಿಂದ ಅರವದಲ್ಲಿ ಕೂಡ ಅನೇಕ ಪುಸ್ತಕಗಳನ್ನು ಓದುತ್ತಿದ್ದೆ. ಆದರೂ ನನಗೆ ಆಂಧ್ರಭಾಷೆಯ ಪುಸ್ತಕಗಳ ಬಗ್ಗೆ ಇರುವ ಅಭಿರುಚಿ, ಮೇಲಿನ ಭಾಷೆಗಳಲ್ಲಿ ಅಷ್ಟಾಗಿ ಇಲ್ಲವಾಯಿತು. ಹೀಗಿರಲಾಗಿ 'ಸಮೂಹ ಸನ್ನಿ' ಎಂಬ ಆಡುಮಾತಿನಂತೆ, ತುಂಬಾ ದಿನಗಳಿಂದ ತೆಲುಗು ಭಾಸೆಯಲ್ಲಿ ಕವಿತ್ವ ಮಾಡಬೇಕೆಂಬ ಕುತೂಹಲ ಹುಟ್ಟಿ, ಜಿತವಾಗಿ ಮತ್ತೆ ಭಾರತ ಮೊದಲುಗೊಂಡು ಆಂಧ್ರಗ್ರಂಥಗಳನ್ನು ಓದಿದೆನು. ಆತರುವಾಯ, ಬ್ರಹ್ಮಶ್ರೀ, ಶತಾವಧಾನಿಗಳಾದ ತಿರುಪತಿ ವೇಂಕಟೇಶ್ವರ ಕವಿಗಳು ವಿರಚಿಸಿದ 'ಶ್ರವಣಾನಂದಮು' ಮೊದಲಾದ ಪುಸ್ತಕಗಳನ್ನು ಓದುತ್ತಿರಲಾಗಿ, ಅವರ 'ಪಾಣಿಗೃಹೀತ' ಎಂಬ ಪ್ರಬಂಧ (ಕಾವ್ಯ)ದಲ್ಲಿನ

ತೇಟಗೀತಿ : ರಾಧಿಕಾ ಸಾಂತ್ವನಮ್ಮುನು । ರಚನ ಜೇಸಿ
ಪೇರುಗನುಮುದ್ದುಪಳನಿತೆ । ಲ್ವಿಯುನು ವಿಜಯ
ನಗರ ಭೂಪಾಲುಡುಂಚಿನ । ನಾತಿಚಾಟು
ಪದ್ಯಮುಲುಗಾಂಚಿ ಯಾಕೀರ್ತಿ । ಪಡಯನೆಂಚಿ.

ಎಂಬ ಪದ್ಯವನ್ನು ಓದಿ 'ರಾಧಿಕಾಸಾಂತ್ವನಮು'ವನ್ನು ತೀವ್ರಕುತೂಹಲಗೊಂಡು ಓದಲಾಗಿ, ಅಲ್ಲಿ ಸಾಕಷ್ಟು ಮುದ್ರಣ ದೋಷಗಳು ಕಣ್ಣಿಗೆ ಎದುರಾದವು. ಅಯ್ಯಯ್ಯೋ! ಇದರ ಒಳ್ಳೆಯ ಪ್ರತಿ ದೊರಕಲಿಲ್ಲವೇ ಎಂದು ಚಿಂತಿಸುತ್ತಿರಲು, ದೈವವಶದಿಂದ ನನ್ನ ಮಿತ್ರರೊಬ್ಬರು ತುಂಬಾ ಒಂದೆಯ ಬರೆದುಕೊಂಡಿದ್ದ, ವ್ಯಾಖ್ಯಾನ ಸಹಿತವಾದ ಒಂದು ಕೈಬರಹದ ಪ್ರತಿಯನ್ನು ನನಗೆ ಕಳಿಸಿಕೊಟ್ಟರು. ಅದನ್ನೂ ಮುದ್ರಣ ಪ್ರತಿಯನ್ನೂ ಹೋಲಿಸಿ ನೋಡಲಾಗಿ ತುಂಬಾ ವ್ಯತ್ಯಾಸ ಕಾಣಿಸಿತು. ಮಂಗಳಾಚರಣೆ ಮೊದಲುಗೊಂಡು ಷಷ್ಠ್ಯಂತದವರೆಗೆ ಇರಬೇಕಾಗಿದ್ದ ಪೀಠಿಕೆ ಇಲ್ಲದೆ ಹೋದದ್ದಲ್ಲದೆ ಮಧ್ಯೆ ಮಧ್ಯೆಯು ಕೆಲವು ಪದ್ಯಗಳು ಕೂಡಇರಲಿಲ್ಲ. ಮತ್ತೆ ಕೆಲವು ಕಡೆ ಪದ್ಯಗಳ ಚರಣಗಳೇ ಬಿಟ್ಟುಹೋಗಿದ್ದವು. ಹೀಗಿದ್ದರೂ ಮುದ್ದಿನ ಮೂಟೆಗಟ್ಟಿದ 'ರಾಧಿಕಾಸಾಂತ್ವನಮು'ವನ್ನು ರಚಿಸಿದ್ದಾಳೆ.

ಮುದ್ದು, ಪಳನಿ

ಈಕೆಯನ್ನು ಕುರಿತು ಮ.ರಾ.ಶ್ರೀ ಕಂದುಕೂರಿ ವೀರೇಶಲಿಂಗಮು ಪಂತುಲರು ತಮ್ಮ 'ಆಂಧ್ರ ಕವುಲ ಚರಿತ್ರಮು'ದಲ್ಲಿ ಬರೆಸಿದ ಪಂಕ್ತಿಗಳು ಕೆಲವು, ಅವಶ್ಯಕವಾದವನ್ನು ಉದಾಹರಿಸುತ್ತಿದ್ದೇನೆ :

> "ಮುದ್ದುಪಳನಿ ಪದ್ಯಕಾವ್ಯಗಳನ್ನು ಮಾಡಿದ ಸ್ತ್ರೀಯರಲ್ಲಿ ಒಬ್ಬಳು. ಈ ಮುದ್ದುಪಳನಿ ವೇಶ್ಯಾಂಗನೆ. ಇವಳು 'ರಾಧಿಕಾಸಾಂತ್ವನಮು' ಎಂಬ ನಾಲ್ಕು ಆಶ್ವಾಸಗಳ ಶೃಂಗಾರ ಪ್ರಬಂಧವನ್ನು ರಚಿಸಿದ್ದಾಳೆ. ಇವಳ ತಾಯಿ ಹೆಸರು ಮುತ್ಯಾಲು. ಅವಳು ತಂಜಾವೂರು ಸಂಸ್ಥಾನ ಪ್ರಭುವಾದ ಪ್ರತಾಪಸಿಂಹನು ಇಟ್ಟುಕೊಂಡ ಚೆಲುವೆ ಎಂದು.... ಗದ್ಯದಲ್ಲಿ ಬರೆದುದನ್ನು ಹಿಡಿದು ಊಹಿಸಬಹುದಾಗಿದೆ. ಇದಕ್ಕೇ 'ಇಲಾದೇವೀಯಮು' ಎಂಬ ನಾಮಾಂತರವೂ ಉಂಟು."

ಇದರಲ್ಲಿ 'ತಾಯಿ ಹೆಸರು ಮುತ್ಯಾಲು ಎಂದೂ ಗದ್ಯದಲ್ಲಿ ಬರೆದುದನ್ನು ಊಹಿಸಬಹುದಾಗಿದೆ' ಎಂದು ಬರೆದಿರುವುದರಿಂದ ಶ್ರೀ ಪಂತುಲರು ಕೂಡ ಪೀಠಿಕೆಯನ್ನು ನೋಡಿದಂತೆ ಕಂಡುಬರುವುದಿಲ್ಲ. ಪೀಠಿಕೆಯಲ್ಲಿ ಕವಿವಂಶ ವರ್ಣನೆ ಇದೆ. ಮುತ್ಯಾಲ ಎಂಬಾತ ಪಳನಿಗೆ ತಂದೆ. 'ಮುದ್ದು' ಎಂಬುದು ಉಪನಾಮ. ಪಳನಿ ಎಂದರೆ ದಕ್ಷಿಣ ದೇಶದ ಸುಬ್ರಹ್ಮಣ್ಯಸ್ವಾಮಿ ನೆಲೆನಿಂತ ದಿವ್ಯಸ್ಥಳಕ್ಕೆ ಹೆಸರು. ಹಲವು ಕಡೆ ಮಕ್ಕಳಿಗೆ ದೇವಸ್ಥಾನಗಳ ಹೆಸರುಗಳನ್ನು ಇಡುವಂತಹುದು ಬಳಕೆಯಲ್ಲಿದೆ. ಈ ಪ್ರಬಂಧದಲ್ಲಿ ಯಶೋದೆಗೆ ಸೋದರ ಸೊಸೆಯು ಶ್ರೀಕೃಷ್ಣನ ಹೆಂಡತಿಯು ಆದ ಇಳಾದೇವಿ ಚರಿತ್ರೆ ಇರುವುದರಿಂದ ಇದಕ್ಕೆ 'ಇಲಾದೇವೀಯಮು' ಎಂಬ ನಾಮಾಂತರವು ಬಂದಿದೆ.

> "ಈಕೆ ಸಂಗೀತ ಸಾಹಿತ್ಯ ಭರತಶಾಸ್ತ್ರಗಳಲ್ಲಿ ಪ್ರವೀಣೆಯಾದಂತೆ ತಾನೇ ಹೇಳಿಕೊಂಡಿದ್ದಾಳೆ. ಇವಳ ಕವಿತ್ವವು ಅತಿ ಸುಲಲಿತವಾಗಿಯೂ ಮೃದುವಾಗಿಯೂ ಇರುವುದರಲ್ಲಿ ಸಂದೇಹವಿಲ್ಲ. ಇವಳಿಗೆ ಒಳ್ಳೆಯ ಸಂಸ್ಕೃತ ಆಂಧ್ರಸಾಹಿತ್ಯ ಹಿನ್ನೆಲೆಯುಂಟು. ಅಲ್ಲಲ್ಲಿ ತಪ್ಪುಗಳು ಇದ್ದರೂ ಅಂತಹ ತಪ್ಪುಗಳು ಪುರುಷರ ಕವಿತ್ವದಲ್ಲಿಯೂ ಕೂಡ ಅನೇಕ ಗ್ರಂಥಗಳಲ್ಲಿ ಕಂಡು ಬರುವಂಥವೇ."

ಎಂದೂ ಶ್ರೀ ಪಂತುಲವರೇ ಒಪ್ಪಿಕೊಂಡಿದ್ದಾರೆ. ಚೆನ್ನಾಗಿ ಆಲೋಚಿಸಿದರೆ; ಶಬ್ದವನ್ನು ಹಿಡಿದೊ, ಅರ್ಥವನ್ನು ಹಿಡಿದೊ, ಭಾವವನ್ನು ಹಿಡಿದೊ, ರಸವನ್ನು ಹಿಡಿದೊ, ಔಚಿತ್ಯವನ್ನು ಹಿಡಿದೊ – ಯಾವುದರಿಂದಲಾದರೂ ಸರಿಯೇ, ತಪ್ಪುಗಳಿಲ್ಲದೆಯೇ ಭಾರತಾದಿ ಅನೇಕ ಗ್ರಂಥಗಳು ಇಲ್ಲ. ಹೀಗಿರುವಲ್ಲಿ ಸ್ತ್ರೀಯರು ಬರೆದ ಗ್ರಂಥಗಳಲ್ಲಿ ತಪ್ಪುಗಳು ಇರುವುದು ಒಂದು ತಪ್ಪಲ್ಲ.

> "ಆದರೂ ಗ್ರಂಥದ ಅನೇಕ ಭಾಗಗಳು ಸ್ತ್ರೀಯರು ಕೇಳದಂತಹವೂ,
> ಸ್ತ್ರೀಯರ ಬಾಯಿಯಲ್ಲಿ ಬರುವಂತಹವೂ ಅಲ್ಲದ ನಿಂದನೀಯವಾಗಿವೆ."

ಎಂದು ಶ್ರೀ ಪಂತುಲರು ಬರೆದರೇ ಹೊರತು, 'ತಾರಾಶಶಾಂಕ ವಿಜಯಮು, ಹಂಸವಿಂಶತಿ', 'ವೈಜಯನ್ತೀ ವಿಲಾಸಮು' ಮೊದಲಾದ ಗ್ರಂಥಗಳಲ್ಲಿರುವುದಕ್ಕಿಂತ ಹೆಚ್ಚು, ಇದರಲ್ಲಿ ನಿಂದನೀಯವಾದವು ಇದೆಯೆ? ಅಲ್ಲದೆ ಸ್ತ್ರೀಯರು ಪುರುಷರಿಂದ ಕೇಳಿಸಿಕೊಳ್ಳದೇ ಹೋದರು, ತಮ್ಮಲ್ಲಿ ತಾವು ಓದಿಸಿಕೊಳ್ಳುವುದಕ್ಕೆ ಬಾಧಕವೇನಿದೆ? ಇಷ್ಟಕ್ಕು ಇಂದು ಭಗವಚ್ಚರಿತ್ರೆ, ತಾರಾಶಶಾಂಕ ವಿಜಯಾದಿಗಳಂತೆ ಸ್ತ್ರೀಯರಿಗೆ ಕೆಡುವ ಬುದ್ಧಿಯನ್ನು ಅರುಹುವ ವಿಷಯಗಳಾವುವೂ ಇದರಲ್ಲಿ ಇಲ್ಲ.

> "ಇದು ಜಾರತ್ವವೇ ಕುಲವೃತ್ತಿಯಾಗಿರುವ ವೇಶ್ಯೆಯಾದ್ದರಿಂದ ಸ್ತ್ರೀಜನ ಸ್ವಾಭಾವಿಕವಾದ ನಾಚಿಕೆಬಿಟ್ಟು, ಶೃಂಗಾರ ರಸವೆಂಬ ಹೆಸರಿನಲ್ಲಿ ಸಂಭೋಗಾದಿ ವರ್ಣನೆಗಳನ್ನು ಪುಸ್ತಕದ ತುಂಬಾ ವಿಪರೀತ ಹಸಿಯಾಗಿಸಿದ್ದಾಳೆ."

ಎಂದೂ ಬರೆದಿದ್ದಾರೆ. ಅಗ್ನಿಸಾಕ್ಷಿಯಾಗಿ ಒಬ್ಬ ಗಂಡನನ್ನು ಕಟ್ಟಿಕೊಂಡು ಎರಡನೇ ಗಂಡನೊಂದಿಗೆ ಹೋಗುವುದು ಜಾರತ್ವ ಅನ್ನಿಸಿಕೊಳ್ಳುತ್ತದೆಯೇ ಹೊರತು, ವೇಶ್ಯೆ ಜಾರಿಣಿ ಅನ್ನಿಸಿಕೊಳ್ಳುವುದಿಲ್ಲ. ಬ್ರಹ್ಮಸೃಷ್ಟಿ ಪ್ರಾರಂಭವಾದಾಗಿನಿಂದ ನಡೆದು ಬರುತ್ತಿರುವ ಕುಲವೃತ್ತಿ ಎಂಥಾದ್ದೊ ಆ ಸಂಗತಿಯೆಲ್ಲಾ ವಾತ್ಸ್ಯಾಯನ ಕಾಮಸೂತ್ರಗಳನ್ನು ನೋಡುವವರಿಗೆ ಯಥಾರ್ಥ ತಿಳಿಯುತ್ತದೆ.

ನಾಚಿಕೆ ಎಂಬುದು ಸ್ತ್ರೀಜನರಿಗೆ ಮಾತ್ರವೇ ಹೊರತು, ಪುರುಷರಿಗೆ ಮಾತ್ರ ಸ್ವಾಭಾವಿಕ ಅಲ್ಲವಲ್ಲ. ಈ ಕವಿ ವೇಶ್ಯೆಯಾದ್ದರಿಂದ, ನಾಚಿಕೆ ಬಿಟ್ಟು ಸಂಭೋಗಾದಿ ವರ್ಣನೆಗಳನ್ನು ಹಸಿಯಾಗಿ ಬರೆದರೂ ಬರೆಯಬಹುದು. ಆದರೆ ಶಿಷ್ಟರು ಅನ್ನಿಸಿಕೊಂಡ ಪುರುಷರು, ಹಾಗೆ ಬರೆಯಬಾರದಲ್ಲವೆ? ಅಂತಹ ಮಹಾನುಭಾವರು ಮಾತ್ರ ತಮ್ಮ ತಮ್ಮ ಗ್ರಂಥಗಳಲ್ಲಿ ಇದಕ್ಕಿಂತಲೂ ಹೆಚ್ಚು ಹಸಿಯಾಗಿ ವರ್ಣನೆಗಳನ್ನು ಮಾಡಿಲ್ಲ ಅಲ್ಲವಲ್ಲ. ಸಾವಿರವೇಕೆ? ಶ್ರೀ ಪಂತುಲರೇ ತಮ್ಮ ಕವಿ ಚರಿತ್ರೆಯಲ್ಲಿ

> "ವೇಶ್ಯಾ ಸಂಪರ್ಕದಿಂದ ಎಂತಹ ದೃಢಮನಸ್ಸಿನವರು ಕೂಡ ಅನರ್ಥಗಳು ಬರುವಂತಹವು ಎಂಬುವನ್ನು ತೋರಿಸಲಿಕ್ಕಾಗಿ ಈವರೆಗೂ ಕಲ್ಪಿಸಲ್ಪಟ್ಟ ಕಥೆ ನೀತಿ ಬೋಧಕವಾಗಿಯೇ ಇದ್ದರೂ ಕೂಡ ಆನಂತರದ ಕಥೆ ಮಾತ್ರ ನೀತಿ ಬಾಹ್ಯವಾಗಿದೆ."

ಎಂದೂ,

"ಇಂತಹ ಸಿದ್ಧಾಂತಗಳೇ ನಮ್ಮ ದೇಶದಲ್ಲಿ ನೀತಿಗೂ ಧರ್ಮಕ್ಕೂ ಕೂಡ ಅಮಿತವಾದ ಕೆಡುಕನ್ನು ಉಂಟುಮಾಡುತ್ತಿವೆ. ನೀತಿಯನ್ನು ಬಿಟ್ಟ ಧರ್ಮ ಎಂದಿಗೂ ದೇವರಿಗೆ ಪ್ರೀತಿಕರವಾಗಲಾರದು."

ಎಂದೂ ನಿಂದಿಸಿ, ಆನಂತರ ತಮ್ಮ ಸ್ವಹಸ್ತದಿಂದ ಪರಿಶೀಲಿಸಿ ಮುದ್ರಿಸಲು ಕೊಟ್ಟ 'ವೈಜಯನ್ತೀ ವಿಲಾಸಮು'ದಲ್ಲಿನ ಮನ್ಮಥನ ಲೀಲಾವಿಲಾಸಕ್ಕಿಂತಲೂ ಹಸಿಹಸಿ 'ರಾಧಿಕಾಸಾಂತ್ವನಮು'ನಲ್ಲಿದೆಯೆ?

ಈ ಗ್ರಂಥದಲ್ಲಿ ರಸ ಉಕ್ಕುತ್ತಿರುವುದರಿಂದ, ಇದನ್ನು ರಚಿಸಿದವಳು ಸ್ತ್ರೀಮಾತ್ರವೇ ಅಲ್ಲದೆ ನಮ್ಮ ಜಾತಿಯಲ್ಲಿ ಹುಟ್ಟಿದವಳಾದುದರಿಂದ ಇದರ ಒಳ್ಳೆಯ ಪ್ರತಿಯನ್ನು ಮುದ್ರಿಸಬೇಕೆಂಬ ಮನಸ್ಸಿನಿಂದ, ಕೈಬರಹವನ್ನು ಮುದ್ರಿತ ಪುಸ್ತಕವನ್ನು ಹೋಲಿಸಿ, ನನ್ನ ಮನಸ್ಸಿಗೆ ಒಪ್ಪಿತವಾದ ಪಾಠವನ್ನು ಉಳಿಸಿಕೊಂಡು, ಒಂದು ಪ್ರತಿಯನ್ನು ಕೈಗೊಂಡು ಸಿದ್ಧಪಡಿಸಿದೆ. ಇತ್ತೀಚೆಗೆ ಬ್ರಹ್ಮಶ್ರೀ, ಮಹಾರಾಜಶ್ರೀ, ವಾವಿಳ್ಲ ರಾಮಸ್ವಾಮಿ ಶಾಸ್ತ್ರುಲು ಅಂಡ್ ಸನ್ಸ್ ಅವರು, ಪ್ರಾಚೀನ ಪ್ರಬಂಧಗಳನ್ನು ಒಳ್ಳೆಯ ಸ್ಥಿತಿಗೆ ತರುತ್ತಿರುವುದರಿಂದ ಇದನ್ನು ಕೂಡ ಅವರೇ ಮುದ್ರಿಸಿದಲ್ಲಿ ತುಂಬಾ ಚೆನ್ನಾಗಿರುತ್ತದೆಂದು ತಿಳಿದು, ಈ ಪ್ರತಿಯನ್ನೇ ಅನೇಕ ವಂದನೆಗಳೊಂದಿಗೆ ಅವರ ಬಳಿಗೆ ಕಳಿಸಿಕೊಟ್ಟೆನು. ಇದನ್ನು ಬರೆದದ್ದು, ತಿದ್ದಿದ್ದು, ಸ್ತ್ರೀಯೇ ಆದುದರಿಂದ; ಇರುವ ತಪ್ಪುಗಳನ್ನು ಒಪ್ಪುಗಳಾಗಿ ಗಮನಿಸುತ್ತಾರೆಂದು ಸ್ತ್ರೀಯರ ಬಗ್ಗೆ ಗೌರವವುಳ್ಳವರನ್ನು ಪ್ರಾರ್ಥಿಸುತ್ತಿದ್ದೇನೆ.

ಸೌಮ್ಯ ಸಂವತ್ಸರದ ಮಹಾಶಿವರಾತ್ರಿ — ಇತಿ
ಚೆನ್ನಪಟ್ಟಣಮು, ೬-೩-೧೯೧೦ — ಸಹೃದಯ ವಿಧೇಯಳು

❑

೫

ಚಕ್ರಾಧಿಪತ್ಯ, ರಾಷ್ಟ್ರ ಮತ್ತು ಸಾಹಿತ್ಯಕ ಪಠ್ಯ

ಸೂಸಿಥಾರು ಮತ್ತು ಕೆ. ಲಲಿತಾ

ಕನ್ನಡ ರೂಪ : ಎಚ್.ಎಸ್. ರಾಘವೇಂದ್ರರಾವ್

೧೯೯೪ರಲ್ಲಿ ಪ್ರಕಟವಾದ, 'ಸ್ತ್ರೀವಾದಿ ಸಾಹಿತ್ಯ ವಿಮರ್ಶೆ' ಈವರೆಗೆ ಬಂದ ಸ್ತ್ರೀವಾದಿ ಕೃತಿಗಳಲ್ಲಿ ಮುಖ್ಯವಾದುದು. ಹಾಗೆ ನೋಡಿದರೆ, ಕನ್ನಡದ ವಿಮರ್ಶೆ ಪ್ರಕಾರದಲ್ಲಿ ಇತ್ತೀಚೆಗೆ ಬಂದ, ಗಂಭೀರ ಚರ್ಚೆ ಎತ್ತ ಬಯಸುವ ಕೃತಿಗಳಲ್ಲಿಯೂ ಇದು ಒಂದಾಗಿದೆ. ಸಂಸ್ಕೃತಿ, ಇತಿಹಾಸ, ರಾಜಕಾರಣಗಳನ್ನು ಭಾರತೀಯ ಸಂದರ್ಭದಲ್ಲಿ ಒಟ್ಟಾಗಿ ಇಟ್ಟು ನೋಡುವ ಈ ಕೃತಿ, ಓದು ಬರಹಗಳ ಘನತೆಯನ್ನು ಎತ್ತರಿಸುವಂಥಾದ್ದು. ಸೂಸಿಥಾರು ಮತ್ತು ಕೆ. ಲಲಿತಾ ಅವರ ಅಪಾರ ಅಧ್ಯಯನ ಹಾಗೂ ಒಳನೋಟಗಳಿಂದ ಕೂಡಿದ ಮುಖ್ಯ ಲೇಖನವು ಈ ಕೃತಿಯಲ್ಲಿದ್ದು, ಎಚ್.ಎಸ್. ರಾಘವೇಂದ್ರರಾವ್ ಅವರು ಅನುವಾದಿಸುವ ಮೂಲಕ ತಮ್ಮನ್ನು ಒಳಗೊಂಡಿರುವುದೂ ಈ ಸಂದರ್ಭದ ವಿಶೇಷ. ಆ ಲೇಖನದ ಪೂರ್ಣಪಠ್ಯವನ್ನು, ಬೆಂಗಳೂರು ನಾಗರತ್ನಮ್ಮನವರ ಕೊಡುಗೆಯ ಮಹತ್ತ್ವವನ್ನು ಪ್ರಸ್ತುತಗೊಳಿಸಲು, ಕೃತಿ ವಿಮರ್ಶೆಯ ಮಾದರಿಗಾಗಿಯು ಇಲ್ಲಿ ನೀಡಲಾಗಿದೆ. ಸಂಪಾದಕ

೧೯೧೦ರಲ್ಲಿ ಬೆಂಗಳೂರು ನಾಗರತ್ನಮ್ಮನವರು 'ರಾಧಿಕಾ ಸಾಂತ್ವನಂ' ಎಂಬ ಅಭಿಜಾತ ಕೃತಿಯನ್ನು ಮರುಮುದ್ರಿಸಿ ಹೊರತಂದರು. ಹದಿನೆಂಟನೆಯ ಶತಮಾನದ ತೆಲುಗು ಕವಿ ಮುದ್ದುಪಳನಿಯ ಈ ಕಾವ್ಯವನ್ನು ತಾನು ಮತ್ತೆ ಓದುಗರ ಗಮನಕ್ಕೆ ತರುತ್ತಿರುವುದು ಏಕೆ ಎನ್ನುವುದು ಅವರಿಗೆ ಸ್ಪಷ್ಟವಾಗಿ ತಿಳಿದಿತ್ತು. ಹೊಸ ಆವೃತ್ತಿಯ ಮುನ್ನುಡಿಯಲ್ಲಿ ಅವರು ಹೀಗೆ ಬರೆಯುತ್ತಾರೆ: "ನಾನು ಈ ಪುಸ್ತಕವನ್ನು ಎಷ್ಟು ಬಾರಿ ಓದಿದರೂ ಮತ್ತೊಮ್ಮೆ ಮೊದಲಿನಿಂದ ಓದೋಣ ಎನ್ನಿಸುತ್ತದೆ. ಈ ಕಾವ್ಯವನ್ನು ಬರೆದವಳು ಹೆಣ್ಣು ಮಾತ್ರವಲ್ಲ. ನಮ್ಮ ಜಾತಿಯಲ್ಲಿಯೇ ಹುಟ್ಟಿದವಳು. ಆದ್ದರಿಂದ ಈ ರಸಭರಿತವಾದ ಕೃತಿಯನ್ನು ಸರಿಯಾದ ರೂಪದಲ್ಲಿ ಹೊರತರುವುದು ಅಗತ್ಯವೆನಿಸಿತು."[೧] ಸ್ವತಃ ಸಹೃದಯ ರಸಿಕರಾದ ನಾಗರತ್ನಮ್ಮನವರು, "ರಾಧಿಕ ಸಾಂತ್ವನಂ ಸಂವೇದನ ಮತ್ತು ರೂಪಗಳ ನಡುವೆ ಪರಿಪೂರ್ಣ ಸಮತೋಲನವನ್ನು ಸಾಧಿಸಿಕೊಂಡಿದೆಯೆಂದು ತಿಳಿದಿದ್ದರು.

ಅದು ಕಂಠಪೂರ್ತಿ ರಸಭರಿತವಾಗಿದ್ದರೂ ಒಂದೇ ಒಂದು ಹನಿಯೂ ಅತಿಯೆನಿಸಿ ಹೊರಚೆಲ್ಲುತ್ತಿರಲಿಲ್ಲ. ಅಷ್ಟೇಕೆ, ಮುದ್ದುಪಳನಿಯ ಅತ್ಯಂತ ಕಟು ವಿಮರ್ಶಕರಾದ, ಆಕೆಯ ಚಾರಿತ್ರ್ಯದ ಬಗ್ಗೆ ತೀವ್ರವಾದ ಅನುಮಾನಗಳನ್ನು ಹೊಂದಿದ್ದ ಕಂದಕೂರಿ ವೀರೇಶಲಿಂಗಂ (೧೮೪೮-೧೯೧೯) ಅವರು ಕೂಡ ಕೃತಿಯ ಗುಣಗಳನ್ನು ಒಪ್ಪಿಕೊಳ್ಳುತ್ತಾರೆ. "ಈ ಹೆಂಗಸಿನ ಕವಿತೆಯು ಮೃದುವೂ, ಮಧುರವೂ ಆಗಿದೆಯೆನ್ನುವುದರಲ್ಲಿ ಯಾವ ಅನುಮಾನವೂ ಇಲ್ಲ. ಆಕೆಯು ಸಂಸ್ಕೃತ ಹಾಗೂ ತೆಲುಗು ಭಾಷೆಗಳ ಸಾಹಿತ್ಯದಲ್ಲಿ ಪರಿಣತಳಾದ ವಿದ್ವಾಂಸಳೆನ್ನುವುದು ಕೂಡ ನಿಸ್ಸಂದೇಹವಾದುದು."[೨]

ನಾಗರತ್ನಮ್ಮನವರು ಮುದ್ದುಪಳನಿಯ ಹೆಸರನ್ನು ಮೊದಲಬಾರಿ ಕೇಳಿದ್ದು, ಹದಿನೆಂಟನೆಯ ಶತಮಾನದ ತೆಲುಗು ಸಾಹಿತ್ಯಕ್ಕೆ (ತಂಜಾವೂರು ಯುಗ) ಬರೆದ ಭಾಷ್ಯವೊಂದರಲ್ಲಿ. ತಂಜಾವೂರು ಸಂಸ್ಥಾನದ ರಾಜಾಸ್ಥಾನದ ಪ್ರಸಿದ್ಧ ಗಣಿಕೆಯೆಂದು ಅವಳನ್ನು ಹೆಸರಿಸಿದ ಲೇಖಕರು ಅವಳ ಪ್ರಸಿದ್ಧ ರೀತಿಯಾದ 'ರಾಧಿಕಾಸಾಂತ್ವನಂ' ಇಂದ ಕೆಲವು ಭಾಗಗಳನ್ನು ಉದ್ಧರಿಸಿದರು. ತಕ್ಷಣ ಆ ಬಗ್ಗೆ ಕುತೂಹಲ ತಳೆದ ನಾಗರತ್ನಮ್ಮನವರು ಬಹಳ ಕಷ್ಟಪಟ್ಟು ಸಮಗ್ರ ರೀತಿಯ ಮುದ್ರಿತ ಪ್ರತಿಯೊಂದನ್ನು ಸಂಪಾದಿಸಿದರು. ಅದು ಬಹಳ ಕೆಟ್ಟದಾಗಿ ಅಚ್ಚಾದ, ಓದುವುದೇ ಕಷ್ಟವಾದ ಪ್ರತಿಯಾಗಿತ್ತು. ಅವರ ಈ ಹುಡುಕಾಟದ ಬಗ್ಗೆ ತಿಳಿದ ಮಿತ್ರರು ವ್ಯಾಖ್ಯಾನ ಸಹಿತವಾದ ಮತ್ತೊಂದು ಪ್ರತಿಯನ್ನು ಕಳಿಸಿದರು. ಕೊನೆಗೆ ಓಲೆಗರಿಯ ಹಸ್ತಪ್ರತಿಯೊಂದು ದೊರಕಿತು. ಅದು ಎಷ್ಟು ಅಮೂಲ್ಯ ಕೃತಿಯೆಂದು ಆಗ ಅವರಿಗೆ ಗೊತ್ತಾಯಿತು. "ಭಗವಾನ್ ಬಾಲಕೃಷ್ಣನ ಹಾಗೆಯೇ ಮುದ್ದಾದ, ಮನಸೆಳೆಯುವ ಕಾವ್ಯ" ಎಂದು ಅವರು ಬರೆಯುತ್ತಾರೆ.[೩]

ಕಾವ್ಯವು ನೀಡುತ್ತಿದ್ದ ಸಂತೋಷವೇ ಅದರ ಹೊಸ ಆವೃತ್ತಿಗೆ ಮುಖ್ಯ ಕಾರಣವಾಗಿತ್ತು. ಆದರೆ ೧೮೮೭ರಲ್ಲಿ ವೆಂಕಟನರಸು ಅವರ ಪ್ರಕಟಿಸಿದ ಆವೃತ್ತಿಯ ಸಂಪಾದನೆ ಹಾಗೂ ಮುದ್ರಣಗಳ ಬಗ್ಗೆ ನಾಗರತ್ನಮ್ಮನವರಿಗೆ ಅಸಮಾಧಾನವಿತ್ತು. ಸ್ವತಃ ಭಾಷಾಶಾಸ್ತ್ರಜ್ಞರೂ, ದಿಟ್ಟವಿದ್ವಾಂಸರೂ, ನಿಘಂಟು ರಚನಾಕಾರರೂ ಆಗಿದ್ದ ಸಿ.ಪಿ. ಬ್ರೌನ್ ಅವರ ನಿಕಟವರ್ತಿಯಾಗಿದ್ದರು. ವೆಂಕಟನರಸು ಅವರು 'ರಾಧಿಕ ಸಾಂತ್ವನಂ' ಕೃತಿಯ ಪೀಠಿಕಾಭಾಗವನ್ನು ತೆಗೆದುಹಾಕಿದ್ದರು–ಅದು ಆತ್ಮಕಥನಾತ್ಮಕ ಮುನ್ನುಡಿಯಾಗಿತ್ತು. ತನ್ನ ಅಜ್ಜಿ ಮತ್ತು ಚಿಕ್ಕಮ್ಮ ಕೂಡ ತನ್ನಂತೆಯೇ ಕವಿಗಳಾಗಿದ್ದು ತಾನು ಅವರ ಪರಂಪರೆಯ ಮುಂದುವರಿಕೆಯೆಂದು ಅದರಲ್ಲಿ ಮುದ್ದುಪಳನಿ ಹೇಳಿಕೊಂಡಿದ್ದಳು. ತನ್ನ ಕಾವ್ಯಶಕ್ತಿ ಹಾಗೂ ಪಾಂಡಿತ್ಯಗಳ ಬಗ್ಗೆ ವಿವರಗಳನ್ನು ನೀಡಿದ್ದಳು. ೧೭೩೯–೬೩ರ ಅವಧಿಯಲ್ಲಿ ತಂಜಾವೂರು ಸಂಸ್ಥಾನದ ದೊರೆಯಾಗಿದ್ದ ಪ್ರತಾಪಸಿಂಹನ ಆಸ್ಥಾನದಲ್ಲಿ ಅವಳಿಗೆ ಗೌರವದ ಸ್ಥಾನವಿತ್ತು ಅಷ್ಟೇ ಅಲ್ಲ, ಹತ್ತು ಹಲವು ಪದ್ಯಗಳಿಗೆ ಕತ್ತರೀ ಪ್ರಯೋಗವಾಗಿತ್ತು. ಬೇರೆ ಅನೇಕ ಪದ್ಯಗಳ 'ಚರಣ' ಅಥವಾ 'ಕೊನೆಯ ದ್ವಿಪದಿ'ಯನ್ನು ಕೈಬಿಡಲಾಗಿತ್ತು.[೪] ಇದಲ್ಲದೆ ಮುದ್ರಣವೂ ಕೆಳದರ್ಜೆಯದಾಗಿದ್ದು ಹಲವಾರು ಮುದ್ರಣದೋಷಗಳು ಉಳಿದುಕೊಂಡಿದ್ದವು.

ಸ್ವತಃ ಗಣಿಕೆಯಾಗಿದ್ದ ನಾಗರತ್ನಮ್ಮನವರು ಪ್ರಸಿದ್ಧ ಸಂಗೀತಗಾರ್ತಿಯೂ, ವಿದ್ವಾಂಸರೂ ಆಗಿದ್ದರು. ಹಲವು ಕಲಾವಿದರ ಪೋಷಕಿಯಾಗಿದ್ದರು. ಕೃತಿ ಸಂಪಾದನೆಯ ಕೆಲಸವನ್ನು ಸಮರ್ಥವಾಗಿ ನಿರ್ವಹಿಸಬಲ್ಲೆನೆಂಬ ಆತ್ಮವಿಶ್ವಾಸ ಅವರಲ್ಲಿತ್ತು. ಅವರು ಆ ಕೆಲಸದಲ್ಲಿ ಖಚಿತವಾದ ಸ್ತ್ರೀವಾದೀ ಒಲವಿನೊಂದಿಗೆ ಹಾಗೂ ಪಳಗಿದವರಿಗೆ ಮಾತ್ರ ಇರುವ ಧೈರ್ಯದೊಂದಿಗೆ ತೊಡಗಿಸಿಕೊಂಡರು.[೫] ಅವರು ಮುದ್ರಿತ ಆವೃತ್ತಿಯನ್ನು ಓಲೆಗರಿ ಪ್ರತಿಯೊಂದಿಗೆ ಹೋಲಿಸಿ ಹೊಸದೊಂದು ಆವೃತ್ತಿಯನ್ನು ಸಿದ್ಧಪಡಿಸಿದರು. ಆದರೆ ಆಕೆಯಾಗಲೀ, ಕೃತಿಯನ್ನು ಪ್ರಕಟಿಸಿದ ಸಂಸ್ಥೆ ವಾವಿಳ್ಲ ರಾಮಸ್ವಾಮಿ ಶಾಸ್ತ್ರುಲು ಮತ್ತು ಮಕ್ಕಳು ಆಗಲೀ ನಂತರ ಹುಟ್ಟಿಕೊಂಡ ತೀವ್ರ ವಾಗ್ವಾದಗಳನ್ನು, ಗದ್ದಲವನ್ನು ನಿರೀಕ್ಷಿಸಿರಲಿಲ್ಲ.[೬] (ಹಾಗೆ ನೋಡಿದರೆ ವಾವಿಳ್ಲ ರಾಮಸ್ವಾಮಿ ಅಯ್ಯರ್ ಅವರ ಸಂಸ್ಥೆಗೆ ತನ್ನದೇ ಆದ ಪ್ರಸಿದ್ಧಿ, ಒಳ್ಳೆಯ ಹೆಸರು ಇತ್ತು. ಮದ್ರಾಸಿನ ಅತಿ ಹಳೆಯ ಹಾಗೂ ಪ್ರಸಿದ್ಧ ಪ್ರಕಾಶನ ಸಂಸ್ಥೆಗಳಲ್ಲಿ ಒಂದಾದ ಈ ಸಂಘಟನೆಯು ತೆಲುಗು ಹಾಗೂ ಸಂಸ್ಕೃತ ಭಾಷೆಗಳ ನಿಖರ, ವಿಶ್ವಾಸಾರ್ಹ ಆವೃತ್ತಿಗಳನ್ನು ಹೊರತರುವ ತನ್ನ ಕೆಲಸಕ್ಕಾಗಿ ಮೆಚ್ಚುಗೆ ಪಡೆದಿತ್ತು. ಮದ್ರಾಸ್ ವಿಶ್ವವಿದ್ಯಾಲಯದ ಭಾರತೀಯ ಇತಿಹಾಸ ಮತ್ತು ಪುರಾತತ್ವ ಶಾಸ್ತ್ರಗಳ ವಿಭಾಗದಲ್ಲಿ ಪ್ರಾಧ್ಯಾಪಕರಾಗಿದ್ದ ಕೃಷ್ಣಸ್ವಾಮಿ ಅಯ್ಯಂಗಾರ್ ಅವರೂ ಈ ಸಂಸ್ಥೆಯ ಸೇವೆಯನ್ನು ಹೊಗಳಿದ್ದರು).

'ರಾಧಿಕಾ ಸಾಂತ್ವನಂ' ಆ ವೇಳೆಗಾಗಲೇ ಸ್ವಲ್ಪ ವಾಗ್ವಾದಕ್ಕೆ ಕಾರಣವಾಗಿತ್ತು. ಆಂಧ್ರಪ್ರದೇಶದಲ್ಲಿ ಸಮಾಜ ಸುಧಾರಣಾ ಚಳುವಳಿಯ ನಾಯಕರೂ, ಸ್ವತಃ ಕಾದಂಬರಿಕಾರರೂ ಆಗಿದ್ದ ಕಂದಕೂರಿ ವೀರೇಶಲಿಂಗಂ ಅವರು, ತಾವು ಬರೆದ, ತೆಲುಗು ಕಾವ್ಯದ ಅಧಿಕೃತ ಇತಿಹಾಸದಲ್ಲಿ ಮುದ್ದುಪಳನಿಯ ಈ ಕೃತಿಯನ್ನು

ತಿರಸ್ಕಾರಯುತವಾಗಿ ಕಡೆಗಣಿಸಿದ್ದರು. ಅವರು ಆಕೆಯನ್ನು "ತನ್ನನ್ನು ತಾನೇ ಸಂಗೀತ, ಅಭಿಜಾತ ಕಾವ್ಯ ಮತ್ತು ನೃತ್ಯದಲ್ಲಿ ತಜ್ಞಳೆಂದು ಕರೆದುಕೊಳ್ಳುವಳು" ಎಂದು ವರ್ಣಿಸಿ, ಲೇಖಕಿ ಮತ್ತು ಕೃತಿಗಳನ್ನು ಅಸಭ್ಯವೆಂದು ಘೋಷಿಸಿದ್ದರು. ಅವರು ಹೀಗೆ ಬರೆದಿದ್ದಾರೆ: "ಈ ಮುದ್ದುಪಳನಿ ಒಬ್ಬ ವ್ಯಭಿಚಾರಿಣಿ. ಈ ಪುಸ್ತಕದ ಅನೇಕ ಭಾಗಗಳು ಅದೆಷ್ಟು ಹೊಲಸಾಗಿವೆಯೆಂದರೆ, ಅವನ್ನು ಒಬ್ಬ ಹೆಂಗಸು ಗಟ್ಟಿಯಾಗಿ ಓದುವ ಮಾತು ಹಾಗಿರಲಿ, ಕಿವಿಗಳಿಂದ ಕೇಳಲೂ ಕೂಡದು. ಅವಳು ಶೃಂಗಾರ ರಸವನ್ನು ಒಂದು ನೆಪವಾಗಿ ಇಟ್ಟುಕೊಂಡು ಲೈಂಗಿಕತೆಯ ಹಸಿ ಹಸಿ ವಿವರಗಳನ್ನು ತನ್ನ ಶೈಲಿಯಲ್ಲಿ ತುಂಬಿದ್ದಾಳೆ".... "ಇದರಲ್ಲಿ ಆಶ್ಚರ್ಯಪಡುವಂತಹುದೇನೂ ಇಲ್ಲ. ಏಕೆಂದರೆ ಅವಳು ಸೂಳೆಯಾದ ಮನೆತನದಲ್ಲಿ ಹುಟ್ಟಿದವಳು. ಹೆಣ್ಣುಮಕ್ಕಳಿಗೆ ಸಹಜವಾದ ಶಾಲೀನತೆಯು ಅವಳಲ್ಲಿ ಇಲ್ಲ". ಆ ಕಾವ್ಯವು ಲೈಂಗಿಕ ಅತಿರೇಕದ ಚಿತ್ರಣವೆನ್ನುವುದರಲ್ಲಿ ಅವರಿಗೆ ಯಾವ ಅನುಮಾನವು ಇರಲಿಲ್ಲ.

ನಾಗರತ್ನಮ್ಮನವರು ಈ ಟೀಕೆಗೆ ಅಷ್ಟೇ ಕಟುವಾದ ಪ್ರತಿಕ್ರಿಯೆ ತೋರಿಸಲು ತೀರ್ಮಾನಿಸಿದರು. 'ವೀರೇಶಲಿಂಗಂ ಅವರ ಪ್ರಕಾರ ಶಾಲೀನತೆಯು ಹೆಂಗಸರಿಗೆ ಮಾತ್ರ ಸಹಜವಾದ ಗುಣವೆಂದು ತೋರುತ್ತದೆ' ಎಂದು ಅವರು ಬರೆದರು. "ಆತ ಒಬ್ಬ ಕವಿಯನ್ನು 'ಸೂಳೆ' ಎಂದು ಕರೆದು ತಿರಸ್ಕರಿಸುತ್ತಾನೆ. ಆಕೆ ತನ್ನ ಕೃತಿಗಳಲ್ಲಿ ಹಸಿ ಹಸಿಯಾದ ಲೈಂಗಿಕ ವಿವರಗಳನ್ನು ತುಂಬಿದ್ದಾಳೆ ಎಂದು ಆಪಾದಿಸುತ್ತಾನೆ. ಆ ಮಾತು ಸರಿಯಾದರೆ, ಗೌರವಸ್ಥರೆಂದು ಹೆಸರಾದ ಪುರುಷರಿಗೂ ಅದು ಅನ್ವಯಸಬೇಕು. ಗಂಡಸರು ಕೂಡ ಹಾಗೆ ಬರೆಯಬಾರದು. ಆದರೆ ಎಲ್ಲರಿಗೂ ತಿಳಿದಿರುವಂತೆ ಅನೇಕ ಮಹಾಪುರುಷರು ಇದಕ್ಕಿಂತ ಹೊಲಸಾಗಿ ಬರೆದಿದ್ದಾರೆ."[೮] ಆಕೆಯ ಧೀರ ಪ್ರತಿಭಟನೆಯಿಂದ ಯಾವ ಪ್ರಯೋಜನವೂ ಆಗಲಿಲ್ಲ. ಸರ್ಕಾರೀ ಭಾಷಾಂತರಕಾರರಾದ ಗೋಟೀಟಿ ಕನಕರಾಜು ಪಂತುಲು ಅವರಿಗೆ ಕೆಂಡದಂಥ ಕೋಪ ಬಂದಿತ್ತು. ಅದಕ್ಕೆ ಕಾರಣವನ್ನು 'ರಾಧಿಕ ಸಾಂತ್ವನಂ'ದ, ಆಮೇಲಿನ ಆವೃತ್ತಿಯೊಂದರ ಅನುಬಂಧದಲ್ಲಿ ಹೇಳಲಾಗಿದೆ. ಮಾನ್ಯ ಪಂತುಲು ಅವರ ಹೆಂಡತಿಯು ವಾವಿಳ್ಲ ರಾಮಸ್ವಾಮಿ ಅಯ್ಯರ್ ಅವರ ಪ್ರಕಟಣೆಯೊಂದನ್ನು ಓದುತ್ತಿದ್ದರಂತೆ. ಸರಿ, ಕೋಪಕ್ಕೆ ಅದಕ್ಕಿಂತ ಬೇರೆ ಕಾರಣ ಬೇಕೆ? ಅವರು 'ರಾಧಿಕ ಸಾಂತ್ವನಂ' ಅನೇಕ ಭಾಗಗಳು ಆಕ್ಷೇಪಣಾರ್ಹವಾಗಿವೆಯೆಂದು ಘೋಷಿಸಿದರು. ಅಷ್ಟೇ ಅಲ್ಲ ತಮಗೆ ಹಾಗೆ ತೋರಿದ ಭಾಗಗಳನ್ನು ಇಂಗ್ಲಿಷ್‌ಗೆ ಅನುವಾದಿಸಿದರು. ಅವನ್ನು ಓದಿದ ಬ್ರಿಟಿಷ್ ಸರ್ಕಾರಕ್ಕೆ ಆ ಪುಸ್ತಕವು ತನ್ನ ಭಾರತೀಯ ಪ್ರಜೆಗಳ ನೈತಿಕ ಆರೋಗ್ಯವನ್ನು ಹಾಳುಮಾಡುವುದೆಂದು ಖಚಿತವಾಯಿತು. ೧೯೧೧ರಲ್ಲಿ ಪೊಲೀಸ್ ಕಮಿಶನರ್ ಕನ್ನಿಂಗ್ ಹ್ಯಾಂ ಅವರು ಆ ಪುಸ್ತಕದ ಎಲ್ಲ ಪ್ರತಿಗಳನ್ನು ಮುಟ್ಟುಗೋಲು ಹಾಕಿಕೊಂಡರು. ಅದರ ಪ್ರಕಾಶಕರು ಅಶ್ಲೀಲ ಪುಸ್ತಕವೊಂದನ್ನು ಸಿದ್ಧಪಡಿಸಿರುವರೆಂದು ಆಪಾದಿಸಿದರು.

ಆ ಆಜ್ಞೆಯು ಸಾಕಷ್ಟು ವಿರೋಧವನ್ನು ಎದುರಿಸಿತು. ಬೇರೆ ಎಂಟು ಅಭಿಜಾತ ಕಾವ್ಯಗಳು ಇದೇ ಆಪಾದನೆಗೆ ಗುರಿಯಾಗಿದ್ದರೂ, ಅವುಗಳ ಪೈಕಿ ಎಲ್ಲಕ್ಕಿಂತ ಹೆಚ್ಚು ಆಕ್ಷೇಪಣಾರ್ಹವಾದ ಕೃತಿಯೆಂದರೆ 'ರಾಧಿಕ ಸಾಂತ್ವನಂ' ಎನ್ನುವುದು ಕಾನೂನಿನ ನಿಲುವು ಆಗಿತ್ತು. ಪ್ರಕಾಶಕರು ಈ ಆಪಾದನೆಗಳನ್ನು ನಿರಾಕರಿಸಿ ಒಂದು ದೂರು ಸಲ್ಲಿಸಿದರು. ವಾವಿಳ್ಲ ವೆಂಕಟೇಶ್ವರ ಶಾಸ್ತ್ರುಲು ಅವರಂತೆಯೇ ರಾಷ್ಟ್ರೀಯವಾದೀ ರಾಜಕಾರಣದಲ್ಲಿ ತೊಡಗಿಸಿಕೊಂಡಿದ್ದವರೂ ಪ್ರಸಿದ್ಧ ವಕೀಲರೂ ಆದ. ಪೆರಿ ನಾರಾಯಣ ಮೂರ್ತಿಯವರು ಪ್ರಕಾಶಕರ ಪರವಾಗಿ ವಾದಿಸಿದರು. ಅವರ ವಾದ ಮಂಡನೆ ಈ ರೀತಿ ಇತ್ತು : "ಶತಮಾನಗಳ ಹಿಂದೆಯೇ ರಚಿತವಾದ ಅಂದಿನಿಂದ ಇಂದಿನವರೆಗೆ ಪ್ರಚಲಿತವಾಗಿರುವ ಪ್ರಾಚೀನ ಕೃತಿಗಳನ್ನು ಇಂದಿನ 'ಭಾರತೀಯ ಅಪರಾಧ ಸಂಹಿತೆ'ಯ ವ್ಯಾಪ್ತಿಯೊಳಗೆ ತರುವುದು ಉಚಿತವಲ್ಲ. ಹಾಗೆ ಮಾಡುವುದರಿಂದ ಆ ಕಾನೂನಿನ ೨೯೨ ಕಲಮನ್ನು ಅನುಚಿತವೆನ್ನುವಷ್ಟು ಹಿಂಜಿದ ಹಾಗೆ ಆಗುತ್ತದೆ. ಎಲ್ಲ ದೇಶಗಳ, ಎಲ್ಲ ಭಾಷೆಗಳ ಪ್ರಾಚೀನ ರೀತಿಗಳಲ್ಲಿಯೂ ಈಗ ಆಕ್ಷೇಪಣೆ ಮಾಡಿರುವ ಭಾಗಗಳಿಗೆ ಸಂವಾದಿಯಾದ ಭಾಗಗಳು ಇದ್ದೇ ಇರುತ್ತವೆ. ಕಾನೂನನ್ನು ಈ ರೀತಿ ಅರ್ಥೈಸುವುದಾದರೆ, ಆ ಕೃತಿಗಳೆಲ್ಲವನ್ನು ಇದೇ ರೀತಿಯಲ್ಲಿ ಬಹಿಷ್ಕರಿಸಬೇಕಾಗುತ್ತದೆ."[೯] ಸರ್ಕಾರದ ಮೇಲೆ ಬೇರೆ ಬಗೆಯ ಒತ್ತಡಗಳನ್ನು ತರಲಾಯಿತು. ತೆಲುಗು ಅಕಾಡೆಮಿಯ ಆಶ್ರಯದಲ್ಲಿ ನಡೆದ ಪಂಡಿತರ ಹಾಗೂ ವಿದ್ವಾಂಸರ ಸಮಾವೇಶವೊಂದು ಕೆಳಗೆ ನೀಡಲಾಗಿರುವ ತನ್ನ ನಿರ್ಣಯವನ್ನು ಸರ್ಕಾರಕ್ಕೆ ಸಲ್ಲಿಸಿತು; "ಈ ರೀತಿಯ ಕ್ರಮಗಳು ಅನಗತ್ಯ ಅನಪೇಕ್ಷಣೀಯವೂ ಆಗಿವೆ. ತೆಲುಗು ಸಂಸ್ಕೃತಿಯ ಉಳಿವು ಮತ್ತು ಪ್ರಗತಿಗೆ ಇಂಥ ಕ್ರಮಗಳು ಖಂಡಿತವಾಗಿಯೂ ಬಹಳ ಅಪಾಯಕಾರಿಯಾಗಿವೆ".[೧೦]

ಈ ಪ್ರಯತ್ನಗಳೆಲ್ಲ ವಿಫಲವಾದವು. ಅರ್ಜಿಯನ್ನು ತಳ್ಳಿಹಾಕಲಾಯಿತು. ಈ ಕಾವ್ಯಗಳನ್ನು ಸ್ವತಃ ಓದಬಲ್ಲ,

ತೆಲುಗು ಬರುವ ನ್ಯಾಯಾಧೀಶರೊಬ್ಬರನ್ನು ನೇಮಿಸಬೇಕೆಂಬ ಮನವಿ ಕೂಡ ಸ್ವೀಕೃತವಾಗಲಿಲ್ಲ. ಬ್ರಿಟಿಷ್ ಸರ್ಕಾರ ಆ ಪುಸ್ತಕಗಳನ್ನು ಬಹಿಷ್ಕರಿಸಿತು. ಒಂದೇ ಒಂದು ರಿಯಾಯಿತಿಯೆಂದರೆ, ಅವುಗಳಲ್ಲಿ ಕೆಲವು ಕಾವ್ಯಗಳನ್ನು ಮಾತ್ರ, ನಿಷಿದ್ಧವಾದ ಭಾಗಗಳನ್ನು ಕತ್ತರಿಸಿದ ನಂತರ ಪ್ರಕಟಿಸಲು ಅನುಮತಿ ದೊರಕಿತು. ಉಳಿದ ಕಾವ್ಯಗಳಿಗೆ ಆ ರಿಯಾಯಿತಿಯೂ ದೊರೆಯಲಿಲ್ಲ. ಆದರೆ, 'ರಾಧಿಕಾ ಸಾಂತ್ವನಂ'ದ ಎಲ್ಲ ಪ್ರತಿಗಳನ್ನು ಯಾವುದೇ ದಯ-ದಾಕ್ಷಿಣ್ಯ ತೋರಿಸದೆ ನಾಶಮಾಡಲಾಯಿತು. ತೆಲುಗು ಸಾಹಿತ್ಯ ವೃಕ್ಷಕ್ಕೆ ಕೊಡಲಿಪೆಟ್ಟು ಬಿದ್ದಿತೆಂದು ಪ್ರಕಾಶಕರು ವಿಷಾದ ವ್ಯಕ್ತಪಡಿಸಿದರು.

ಆದರೆ ಸರ್ಕಾರಕ್ಕೆ ಆಘಾತವಾಗುವಂತೆ ಎಲ್ಲ ಪುಸ್ತಕಗಳೂ ಚಲಾವಣೆಯಲ್ಲಿ ಮುಂದುವರಿದವು. ಪ್ರತಿಗಳು ಗುಟ್ಟಾಗಿ ಮಾರಾಟವಾಗುತ್ತಿದ್ದವು. ೧೯೨೭ರ ಮಾರ್ಚ್ ೩ರಂದು ತೋಂಡಿಯಾರ ಪೇಟೆಯಲ್ಲಿದ್ದ ವಾವಿಳ್ಲ ಮುದ್ರಣಾಲಯ ಮತ್ತು ಎಸ್ಲನೇಡ್‌ನಲ್ಲಿದ್ದ ಪುಸ್ತಕದಂಗಡಿಯ ಮೇಲೆ ದಾಳಿ ನಡೆಸಲಾಯಿತು. ಅಷ್ಟೇ ಅಲ್ಲ, ಪೊಲೀಸರು ರಾಜಮಂಡ್ರಿಯಲ್ಲಿದ್ದ ಅಂಗಡಿಯ ಮೇಲೂ ದಾಳಿ ಮಾಡಿದರು. 'ರಾಧಿಕಾ ಸಾಂತ್ವನಂ'ದ ಪ್ರತಿಗಳನ್ನು ಅಂಚೆಯ ಮೂಲಕ ಪಡೆಯಬಯಸಿದ್ದ ಇಬ್ಬರು ಓದುಗರನ್ನು ಶ್ರೀಕಾಕುಳಂನಲ್ಲಿ ಹುಡುಕಿ ತೆಗೆದರು. ಆ ದಾಳಿಗಳ ನಂತರ, ಪತ್ರಿಕೆಗಳಿಗೆ ಬರೆದ ಆಕ್ರೋಶಭರಿತ ಪ್ರತಿಭಟನಾ ಪತ್ರದಲ್ಲಿ ವಾವಿಳ್ಲ ವೆಂಕಟೇಶ್ವರ ಶಾಸ್ತ್ರಿಗಳು ಪ್ರತಿಗಳು ಚಲಾವಣೆಯಲ್ಲಿರುವುದನ್ನು ಒಪ್ಪಿಕೊಂಡರು. ಆದರೆ ಪುಸ್ತಕದ ಸೆನ್ಸಾರ್ ಆಗದ ಪ್ರತಿಗಳು ಕೇವಲ ವಿದ್ವಾಂಸರಿಗೆ ಮಾತ್ರ ತಲುಪುವಂತೆ ಎಚ್ಚರವಹಿಸಲಾಗಿತ್ತೆಂದು ಅವರು ಹೇಳಿದರು. ಮಾರುಕಟ್ಟೆಯಲ್ಲಿ ದೊರೆಯುವ ಪ್ರತಿಗಳನ್ನು ಸರ್ಕಾರಿ ಆದೇಶಕ್ಕೆ ಅನುಗುಣವಾಗಿ ಸಂಗ್ರಹಗೊಳಿಸಲಾಗಿತ್ತು. ಶತಮಾನಗಳ ಹಿಂದೆ ಬರೆಯಲಾದ ಈ ಕೃತಿಗಳು ಸಂವಿಧಾನದ ಅಪರಾಧ ಸಂಹಿತೆಯ ೨೯೨ನೆಯ ಕಲಮಿನ ವ್ಯಾಪ್ತಿಯೊಳಗೆ ಬರುತ್ತವೆಂದು ತೀರ್ಮಾನಿಸುವುದು ತಪ್ಪಾಗುವುದೆಂದು ಅವರು ವಾದಿಸಿದರು. ಪ್ರೊ॥ ಕೃಷ್ಣಸ್ವಾಮಿ ಅಯ್ಯಂಗಾರ್ ಅವರು ಈ ವಾದವನ್ನು ಸಮರ್ಥಿಸಿದರು. "ಅತ್ಯಂತ ಮಡಿ ಮನೋಭಾವ ಉಳ್ಳವರಿಗೆ ಅಲ್ಲೊಂದು ಪದ್ಯ, ಇಲ್ಲೊಂದು ಪದ್ಯ ಆಕ್ಷೇಪಣೀಯವೆಂದು ತೋರಬಹುದು. ಆದರೆ ಆ ಪದ್ಯಗಳನ್ನು ಬಿಟ್ಟುಬಿಡುವುದು ಸಾಧ್ಯವಿಲ್ಲ. ಹಾಗೆ ಮಾಡುವುದರಿಂದ ಒಟ್ಟು ಕಾವ್ಯದ ಮೌಲ್ಯವೇ ಕಡಿಮೆಯಾಗುತ್ತದೆ.... ಅದೂ ಅಲ್ಲದೆ ಇಂಥ ಪದ್ಯಗಳು ಭಾರತೀಯರ ಭಾವನೆಗಳು ಮತ್ತು ಸಂವೇದನೆಗಳಿಗೆ ಅಷ್ಟೊಂದು ಕರ್ಕಶವೇನೂ ಅಲ್ಲ."[೧೧] ಇಷ್ಟೆಲ್ಲ ಪ್ರತಿರೋಧದ ನಡುವೆಯೂ, ಬ್ರಿಟಿಷ್ ಸರ್ಕಾರವು ಆ ಪುಸ್ತಕಗಳನ್ನು ಬಹಿಷ್ಕರಿಸಿತು. ಇದಕ್ಕೆ ಪ್ರತಿಯಾಗಿ ಪ್ರಕಾಶಕರು ಮಾಡಿಕೊಂಡ ಮನವಿಯಲ್ಲಿ 'ರಾಧಿಕ ಸಾಂತ್ವನಂ'ವನ್ನು ಹೆಸರಿಸುವುದಿಲ್ಲವೆನ್ನುವುದು ಕುತೂಹಲಕಾರಿಯಾದ ಸಂಗತಿ. ಅವರು ಇತರ ಪುಸ್ತಕಗಳನ್ನು ಮುಟ್ಟುಗೋಲು ಹಾಕಿಕೊಂಡಿದ್ದನ್ನು ಮಾತ್ರ ಪ್ರಶ್ನಿಸಿದರು.

ಸರಿಯಾಗಿ ಇಪ್ಪತ್ತು ವರ್ಷಗಳ ನಂತರ ಈ ಬಹಿಷ್ಕಾರವನ್ನು ಹಿಂತೆಗೆದುಕೊಳ್ಳಲಾಯಿತು. ಅದಕ್ಕೆ ಆಗತಾನೇ ಮದ್ರಾಸ್ ಸಂಸ್ಥಾನದ ಮುಖ್ಯಮಂತ್ರಿಯಾಗಿದ್ದ ಟಂಗಟೂರಿ ಪ್ರಕಾಶಂ ಅವರು ನೀಡಿದ ಬೆಂಬಲವು ಕಾರಣವಾಯಿತು. ತೆಲುಗು ಸಾಹಿತ್ಯ ದೇವಿಯ ಕಂಠಹಾರದಿಂದ ಕಿತ್ತು ತೆಗೆಯಲಾಗಿದ್ದ ಈ ಅಮೂಲ್ಯರತ್ನಗಳನ್ನು ಮತ್ತೆ ಅಲ್ಲಿ ಸೇರುವಂತೆ ಮಾಡಲು ಯುದ್ಧವನ್ನೇ ನಡೆಸಬೇಕಾಯಿತೆಂದು ಪ್ರಕಾಶಂ ಹೇಳಿದರು. 'ರಾಧಿಕ ಸಾಂತ್ವನಂ'ದ, ನಾಗರತ್ನಮ್ಮನವರು ಸಂಪಾದಿಸಿದ ಆವೃತ್ತಿಯನ್ನು ಹೊರತರಲು ಅನುಮತಿ ನೀಡಲಾಯಿತು. ವಾವಿಳ್ಲ ಮುದ್ರಣಾಲಯದವರು ೧೯೫೨ರಲ್ಲಿ ಹೊಸ ಆವೃತ್ತಿಯನ್ನು ಪ್ರಕಟಿಸಿದರು.[೧೨]

೧೯೮೦ರ ದಶಕದ ಕೊನೆಯ ವರ್ಷಗಳಲ್ಲಿ ನಾವು ಈ ಕೃತಿಯಲ್ಲಿ ಆಸಕ್ತರಾದೆವು. ಸಮಕಾಲೀನ ತೆಲುಗು ಸಾಹಿತ್ಯ ಚರಿತ್ರೆಗಳೆಲ್ಲವೂ ಮುದ್ದುಪಳನಿಯ ಶೈಲಿಯನ್ನು ಸತತವಾಗಿ ನಿರ್ಲಕ್ಷಿಸಲ್ಪಟ್ಟಿದ್ದವು. ಇದೇ ನಮ್ಮ ಕುತೂಹಲವನ್ನು ಕೆರಳಿಸಿತು. ನಾವು ಗ್ರಂಥದ ಒಂದು ಪ್ರತಿಗಾಗಿ ಹುಡುಕತೊಡಗಿದೆವು. ಸುಲಭವಾಗಿ ಸಿಗಲಿಲ್ಲ. ಒಬ್ಬರ ನಂತರ ಒಬ್ಬ ವಿಮರ್ಶಕರು, ಅವಳ ಬರವಣಿಗೆಯು ಅಶ್ಲೀಲವೆಂದೂ ಅದರ ಬಗ್ಗೆ ತಲೆಕೆಡಿಸಿಕೊಳ್ಳಬಾರದೆಂದು ಹೇಳಿದರು. ಆದರೆ ಬಲವಂತಮಾಡಿ ಕೇಳಿದಾಗ ಸ್ವತಃ ತಾವೇ ಆ ಕೃತಿಯನ್ನು ಓದಿರಲಿಲ್ಲವೆಂದು ಅವರು ಒಪ್ಪಿಕೊಳ್ಳುತ್ತಿದ್ದರು.[೧೩] ಆಗ ನಾವು ಮಹಿಳೆಯರ ಲೇಖನಗಳ ಸಂಕಲನವೊಂದನ್ನು ಹೊರತರಲು ಪ್ರಯತ್ನಿಸುತ್ತಿದ್ದೆವು. ಓಹೋ! ನೀವು ಇಂಥ ಬರವಣಿಗೆಯನ್ನು ಹುಡುಕುತ್ತಿದ್ದೀರಾ? ಎಂಬ ಕುಹಕದ ಪ್ರಶ್ನೆಯು ನಮಗೆ ಎದುರಾಗತೊಡಗಿತು. ಮಹಿಳೆಯರ ಸ್ಥಿತಿಗತಿಗಳ ಸುಧಾರಣೆಯ ಬಗ್ಗೆ ಆಸಕ್ತಿ ಹೊಂದಿದ್ದ, ತೆಲುಗು ಸಾಹಿತ್ಯದ ವಿದ್ಯಾರ್ಥಿಗಳು ಮತ್ತು ಅಧ್ಯಾಪಕರು ಕೂಡ ವಿಮರ್ಶಕರ ಅಭಿಪ್ರಾಯವನ್ನೇ ಪ್ರತಿಧ್ವನಿಸುತ್ತಿದ್ದರು. ಈ ರೀತಿಯ ಒಕ್ಕೊರಲಿನ ಅಭಿಪ್ರಾಯವು ಮೂಲಕೃತಿಯ ಓದನ್ನೇ ಅನಗತ್ಯವೆನ್ನಿಸಿಬಿಟ್ಟಿತು. ಸ್ವಾತಂತ್ರ್ಯ ಬಂದ ನಂತರ 'ರಾಧಿಕ ಸಾಂತ್ವನಂ'ದ ಮೇಲೆ ಇದ್ದ ಬಹಿಷ್ಕಾರವೇನೋ ಮುಗಿದಿತ್ತು. ಆದರೆ

ಸಾಮ್ರಾಜ್ಯಶಾಹಿಗಳ ಹಿಡಿತದಿಂದ ತೆಲುಗು ಸಂಸ್ಕೃತಿಯು ಪಡೆದ ಈ ಬಿಡುಗಡೆಯು, ಲೈಂಗಿಕ ಅಸಮಾನತೆಯ ರಾಜಕಾರಣದ ಮೇಲೆ ಯಾವ ಪರಿಣಾಮವನ್ನು ಬೀರಲಿಲ್ಲ. ಅದರಲ್ಲಿಯೂ ಸಾಹಿತ್ಯ ಕ್ಷೇತ್ರದಲ್ಲಿ ಈ ಬಿಡುಗಡೆಯ ಗಾಳಿಯೂ ಬೀಸಲಿಲ್ಲ. ಲೈಂಗಿಕ ಅಸಮಾನತೆಯ ಜೊತೆಗೆ ಜಾತಿ ಮತ್ತು ವರ್ಗಗಳು ಬೇರೆ ಸೇರಿಕೊಂಡು, 'ರಾಧಿಕ ಸಾಂತ್ವನಂ' ಬಗೆಗಿನ ತಾತ್ವಿಕ ವಿರೋಧವು ಹಾಗೆಯೇ ಉಳಿಯಿತು. ಅದನ್ನು ಬಯಲಿಗೆ ತರುವುದು ಸಾಧ್ಯವಾಗಲೇ ಇಲ್ಲ. ಲೈಂಗಿಕ ಅಸಮಾನತೆಯನ್ನು ಆಧರಿಸಿದ, ಈ ಬಗೆ ಪ್ರಭುತ್ವದ ಸೂಕ್ಷ್ಮ ನಿಯಮಗಳನ್ನು ಪ್ರಶ್ನಿಸುವಂಥ ಶಕ್ತಿಗಳು ಇದುವರೆಗೂ ತಲೆಯೆತ್ತಿಲ್ಲ.

೨

ಕಳೆದ ೨೫೦ ವರ್ಷಗಳಲ್ಲಿ ಭಾರತೀಯ ಸಂಸ್ಕೃತಿಯು ಮೈಗೂಡಿಸಿಕೊಂಡ, ಹಲವು ಪ್ರಧಾನ ತಾತ್ವಿಕ ನೆಲೆಗಳನ್ನು ಪರಿಶೀಲಿಸಲು, 'ರಾಧಿಕ ಸಾಂತ್ವನಂ' ನಮಗೆ ಅನುವು ಮಾಡಿಕೊಡುತ್ತದೆ. ಇದುವರೆಗೆ ಈ ರೀತಿಯ ಚಿಂತನೆಗೆ ಸಮ್ಮತಿಯಿರಲಿಲ್ಲ. ಅದನ್ನು ಅನೈತಿಕವೆಂದು ತಿಳಿಯಲಾಗುತ್ತಿತ್ತು. ಹಾಗೆ ಮಾಡುವುದು ವಿದ್ರೋಹವೆನ್ನಿಸಿಕೊಳ್ಳುತ್ತಿತ್ತು. ಈ ಕೃತಿ ಮತ್ತು ಅದರ ಲೇಖಕಿಯನ್ನು ಸಂಸ್ಕೃತಿ ಚರಿತ್ರೆಯ ಅಂಚಿಗೆ ಗುಡಿಸಿಹಾಕಲಾಗಿತ್ತು. ಅದನ್ನು ಸಾಹಿತ್ಯದ ಪರಿಧಿಯಿಂದ ಹೊರಗಿಡಲಾಗಿದೆ. ಆದರೂ ಅದು ಇಂದಿಗೂ ಉಳಿದುಕೊಂಡು ಬಂದಿದೆ. ಅದರ ಗತಿಯನ್ನು ವಿಶ್ಲೇಷಿಸುವುದರ ಮೂಲಕ ಸಾಹಿತ್ಯ ಹಾಗೂ ಸಂಸ್ಕೃತಿ ಚರಿತ್ರೆಗಳ ರಚನೆಯನ್ನು ಅಭ್ಯಾಸಮಾಡಲು ನಮಗೆ ಸಾಧ್ಯವಾಗುತ್ತದೆ. ಅವೆರಡೂ ಮಹಿಳಾ ಅಭಿವ್ಯಕ್ತಿಯನ್ನು ಹತ್ತಿಕ್ಕಲು ರೂಪಿಸಿಕೊಂಡಿರುವ ವ್ಯೂಹತಂತ್ರಗಳು ನಮಗೆ ಪರಿಚಿತವಾಗುತ್ತವೆ. ಮುದ್ದುಪಳನಿಯ ವ್ಯಕ್ತಿತ್ವ, ಬರವಣಿಗೆ ಹಾಗೂ ಅವಳ ಶೈಲಿಯು ಎದುರಿಸಿದ ಆಪತ್ ಪರಂಪರೆಗಳು ಒಂದು ಮಾದರಿ ನಿದರ್ಶನದಂತೆ ಕೆಲಸ ಮಾಡುತ್ತವೆ. ಅಂದು ಸಾಂಸ್ಕೃತಿಕ ಪ್ರಭುತ್ವದ ಧೋರಣೆಗಳನ್ನು ರೂಪಿಸುತ್ತಿದ್ದ ಪ್ರಕ್ರಿಯೆಗಳು ಅತ್ಯಂತ ಪಕ್ಷಪಾತಭರಿತವೂ ಪೂರ್ವನಿರ್ಧಾರಿತವೂ ಆಗಿರುತ್ತಿದ್ದವು. ಅಂತಹುದೇ ಧೋರಣೆಗಳನ್ನು ಆಗ ರೂಪಿತವಾಗುತ್ತಿದ್ದ ಕಾರ್ಯಯೋಜನೆಗಳಲ್ಲಿಯೂ ಅಳವಡಿಸಿಕೊಳ್ಳಲಾಗುತ್ತಿತ್ತು. ಇಂತಹ ರೂಪಣ ಕ್ರಿಯೆಯಲ್ಲಿ 'ಸಾಮ್ರಾಜ್ಯ' ಮತ್ತು 'ರಾಷ್ಟ್ರ'ಗಳೆರಡೂ ಸಮಾನ ಆಸಕ್ತಿಯಿಂದ ಭಾಗವಹಿಸುತ್ತಿದ್ದವು. (ಎಂದರೆ ಮಹಿಳೆಯರ ಸ್ಥಿತಿಗಳಿಗೆ ಸಂಬಂಧಿಸಿದಂತೆ ಇವೆರಡರ ನಿಲುವುಗಳಲ್ಲಿ ಮಹತ್ವದ ವ್ಯತ್ಯಾಸವೇನೂ ಇರಲಿಲ್ಲ).

ಈ ಲೇಖನದ ಮುಂದಿನ ಭಾಗಗಳಲ್ಲಿ ಲಿಂಗ, ಜಾತಿ ಮತ್ತು ವರ್ಗಗಳಿಗೆ ಸಂಬಂಧಪಟ್ಟ ರಾಜಕಾರಣದ ತಾತ್ವಿಕನೆಲೆಗಳು ಬದಲಾಗುತ್ತಾ ಬಂದ ಬಗೆಯನ್ನು ಗುರುತಿಸಲಾಗಿದೆ. ಈ ಪರಿವರ್ತನೆಗೆ ಸಾಹಿತ್ಯಿಕ ಅಭಿರುಚಿಯಲ್ಲಾದ ಬದಲಾವಣೆಗಳು ಸಹಚರಿಯಾಗಿಯೇ ಇದ್ದವು. ಅಷ್ಟೇ ಅಲ್ಲ, ಸಾಹಿತ್ಯದ ಕೆಲಸ ಯಾವುದು, ಸಾಹಿತ್ಯವನ್ನು ತರಗತಿಗಳಲ್ಲಿ ಕಲಿಸಬೇಕಾದರೆ ಪಠ್ಯವಸ್ತು ಯಾವ ಬಗೆಯದಾಗಿರಬೇಕು ಮುಂತಾದ ಸಂಗತಿಗಳನ್ನು ಕುರಿತಂತೆ ಇದ್ದ ಪರಿಕಲ್ಪನೆಗಳು ಹೊಸ ನೆಲೆಗಳನ್ನು ಪಡೆದುಕೊಂಡವು.

೩

ಮುದ್ದುಪಳನಿಯ ಕಾಲದಲ್ಲಿ ಅವಳ ಕೃತಿಯನ್ನು ತಿರಸ್ಕರಿಸಲಾಗಿತ್ತು ಅಥವಾ ನಿಂದಿಸಲಾಗಿತ್ತು ಎನ್ನುವುದಕ್ಕೆ ಯಾವ ಪುರಾವೆಯೂ ದೊರೆಯುವುದಿಲ್ಲ. ಆ ರೀತಿಯ ಕೃತಿಯಲ್ಲಿ ಮಾಮೂಲಾಗಿರುವ ಆತ್ಮಕಥನಾತ್ಮಕವಾದ ಭಾಗದಲ್ಲಿ ಅವಳ ಬದುಕಿನ ಬಗ್ಗೆ ಹಲವು ಮಾಹಿತಿಗಳು ದೊರಕುತ್ತವೆ. ಅವಳು ಪ್ರಸಿದ್ಧಳಾದ ಕವಿ ಮತ್ತು ವಿದುಷಿಯಾಗಿದ್ದಳು. ಸಂಗೀತ, ನೃತ್ಯಗಳಲ್ಲಿಯೂ ಪರಿಣತಳಾಗಿದ್ದಳು. ರಾಜಾಸ್ಥಾನಗಳಲ್ಲಿ ಅವಳ ಕೃತಿಗಳು ಮನ್ನಣೆ ಮೆಚ್ಚಿಗೆಗಳಿಗೆ ಪಾತ್ರವಾಗಿದ್ದವು. ಅಂದಿನ ದಿನಗಳಲ್ಲಿ ಪುರುಷರು ತಮ್ಮ ರೀತಿಗಳನ್ನು ತಮ್ಮ ಸ್ತ್ರೀ ಮಾರ್ಗದರ್ಶಿಗಳಿಗೆ ಅರ್ಪಿಸುವುದು ಅಪರೂಪವಾಗಿತ್ತು. ಆದರೂ ತನಗೆ ಅನೇಕ ರೀತಿಗಳು ಅರ್ಪಿತವಾಗಿದ್ದವೆಂದು ಮುದ್ದುಪಳನಿಯು ಹೆಮ್ಮೆಯಿಂದ ಹೇಳಿಕೊಳ್ಳುತ್ತಾಳೆ. ತನ್ನ ಸೌಂದರ್ಯ ಮತ್ತು ಪಾಂಡಿತ್ಯಗಳನ್ನು ಕುರಿತು ಅವಳು ಆತ್ಮವಿಶ್ವಾಸದಿಂದ ನೇರವಾಗಿ ಮಾತನಾಡುತ್ತಾಳೆ. ತನ್ನ ಇರುವಿಕೆಯು ಅವಳಲ್ಲಿ ಯಾವುದೇ ಸಂಕೋಚ ಅಥವಾ ಅಪರಾಧೀ ಮನೋಭಾವವನ್ನು ಉಂಟುಮಾಡಿದಂತೆ ತೋರುವುದಿಲ್ಲ. ಇತರ ಕಲಾವಿದರ ಕೃತಿಗಳನ್ನು ಮೆಚ್ಚಿ ಬೆಲೆಬಾಳುವ ಉಡುಗೊರೆಗಳ ನೀಡಿದ ಅನೇಕ ಘಟನೆಗಳನ್ನು ಅವಳು ದಾಖಲೆ ಮಾಡುತ್ತಾಳೆ.

ಮುದ್ದುಪಳನಿಯ ಕೃತಿ ರಚನೆಗೆ ಅವಕಾಶ ಹಾಗೂ ಪ್ರೋತ್ಸಾಹಗಳನ್ನು ಒದಗಿಸಿದ್ದು ತಂಜಾವೂರಿನ ರಾಜಾಸ್ಥಾನ. ಅದು ಹಲವು ಕಲೆಗಳಿಗೆ ಆಶ್ರಯ ನೀಡಿದ್ದ ಕೇಂದ್ರ ಸ್ಥಾನವಾಗಿತ್ತು. ಆಗ ಸಂಗೀತ, ಸಾಹಿತ್ಯ, ನೃತ್ಯ ಅಂತೆಯೇ ಶಿಲ್ಪಕಲೆ ಮತ್ತು ಚಿತ್ರಕಲೆಗಳು ಉಚ್ಛ್ರಾಯ ಸ್ಥಿತಿಯನ್ನು ತಲುಪಿದ್ದವು. ಈ ಅವಧಿಯಲ್ಲಿ

ತನ್ನ ಶಿಖರಸ್ಥಿತಿಯನ್ನು ತಲುಪಿದಾಗ 'ಸಾದಿರ್' ಶೈಲಿಯ ನೃತ್ಯವು ಪ್ರವರ್ಧಮಾನಕ್ಕೆ ಬಂದಿದ್ದು ತಂಜಾವೂರಿನಲ್ಲಿಯೇ. ಅದರ ವಿವರಗಳು ಹಾಗೂ ಮುದ್ರೆಗಳ ಸಂಕೇತೀಕರಣವು ಇಲ್ಲಿಯೇ ನಡೆದವು. 'ಸಾದಿರ್' ಶೈಲಿಯು ಹದಿನಾಲ್ಕನೆಯ ಶತಮಾನದಲ್ಲಿಯೇ ರೂಪುತಳೆದ 'ಅಡವು' ತಂತ್ರವನ್ನು ಅವಲಂಬಿಸಿದೆ. ಈ 'ಅಡವು' ನೃತ್ಯವು ೧೯೩೦-೪೦ರ ದಶಕದಲ್ಲಿ ಅಭಿಜಾತ ನೃತ್ಯ ಪ್ರಕಾರವೆಂದು ಹೆಸರುವಾಸಿಯಾದ ಭರತನಾಟ್ಯವಾಗಿ ಮರುಹುಟ್ಟು ಪಡೆಯಿತು.[೧೪] ಪ್ರಸಿದ್ಧ ಗೀತರಚನೆಕಾರರಾದ ಕ್ಷೇತ್ರಯ್ಯರ ಜಾವಳಿ ಮತ್ತು ಪದಗಳ ಹುಟ್ಟನ್ನು ಕೂಡಾ ಈ ಕಾಲದ್ದೆಂದು ಗುರುತಿಸಲಾಗಿದೆ. ತೆಲುಗು ಸಾಹಿತ್ಯದ ಸುವರ್ಣಯುಗವೆಂದು ಪರಿಗಣಿತವಾಗಿರುವ ಈ ಕಾಲದ ಕೊನೆ ಕೊನೆಯ ದಿನಗಳಲ್ಲಿಯೇ 'ರಾಧಿಕ ಸಾಂತ್ವನಂ' ರಚಿತವಾಗಿದ್ದು. ದಕ್ಷಿಣ ಭಾರತದ ಈ ಪ್ರಬಲ ಸಂಸ್ಥಾನದ ಹಲವು ರಾಜರು ತಾವೇ ಕಲಾವಿದರಾಗಿದ್ದರು; ಕವಿಗಳಾಗಿದ್ದರು. ಅವರ ಆಸ್ಥಾನದಲ್ಲಿ ಅನೇಕ ಮಹಿಳಾ ಸಾಹಿತಿಗಳು ಇದ್ದರೆಂದು ದಾಖಲೆಗಳು ಹೇಳುತ್ತವೆ. ರಾಮಭದ್ರಾಂಬ ಮತ್ತು ಮಧುರವಾಣಿಯರು ಮೂರುಭಾಷೆಗಳಲ್ಲಿ ಪರಿಣತರಾದ ಕವಯಿತ್ರಿಯರಾಗಿದ್ದರು. ಅಷ್ಟಾವಧಾನದಲ್ಲಿ ತಜ್ಞರಾಗಿದ್ದರು. ಇತಿಹಾಸಕಾರರಳೂ ಆಗಿದ್ದ ರಾಮಭದ್ರಾಂಬ, ರಘುನಾಥ ನಾಯಕನ ಕಾಲದಲ್ಲಿ ನಡೆದ ರಾಜಕೀಯ ಹಾಗೂ ಯುದ್ಧ ಸಂಬಂಧೀ ಪುರಾವೆಗಳನ್ನು ದಾಖಲೆ ಮಾಡಿದ್ದಾಳೆ. ಅವನ ಆಸ್ಥಾನದಲ್ಲಿ ಅನೇಕ ಗೀತರಚನಕಾರ್ತಿಯರು ಇದ್ದರೆಂದು ಅವಳು ಹೇಳುತ್ತಾಳೆ. ಈಗಾಗಲೇ ಹೇಳಿರುವಂತೆ ಮುದ್ದುಪಳನಿಯ ಅಜ್ಜಿ ಮತ್ತು ಚಿಕ್ಕಮ್ಮ ಹೆಸರಾಂತ ಕವಿಗಳಾಗಿದ್ದರು. ಆಗಿನ ಕಾಲದಲ್ಲಿ ಮುಸ್ಲಿಮರನ್ನು ಹೊರತುಪಡಿಸಿ, ಉಳಿದ ಮೇಲುಜಾತಿಯ ಮಹಿಳೆಯರಿಗೆ, ಓದು ಬರಹ ಕಲಿತು ಗ್ರಂಥರಚನೆ ಮಾಡುವ ಅವಕಾಶ, ಬಿಡುವುಗಳು ಇರುತ್ತಿರಲಿಲ್ಲ. ಹಾಗೆಯೇ ವಿವಿಧ ಕಲೆಗಳಲ್ಲಿ ತರಬೇತಿ ಪಡೆಯುವುದೂ ಸಾಧ್ಯವಿರಲಿಲ್ಲ. ಆದರೆ ಗಣಿಕೆಯಾದ ಮುದ್ದುಪಳನಿಗೆ ಈ ಅವಕಾಶ ಇತ್ತು. ಸಾಕಷ್ಟು ಬಿಡುವು ದೊರೆಯುತ್ತಿತ್ತು. ಅದೂ ಅಲ್ಲದೆ ಕಲಾವಿದ ಮತ್ತು ರಸಿಕರ ಸಮುದಾಯದ ನಡುವೆ ಜೀವಿಸುವುದರಿಂದ ಸಿಗುವ ಉತ್ತೇಜನವೂ ಅವಳಿಗೆ ಲಭ್ಯವಾಗಿತ್ತು. ಆದ್ದರಿಂದ ಮುದ್ದುಪಳನಿಗೆ ದೊರಕಿದ ಮರ್ಯಾದೆ ಮತ್ತು ಅವಳ ಶೈಲಿಯೂ ಪಡೆದ ಮೆಚ್ಚಿಗೆಗಳು ಹೇಗೆ ಅವಳ ಪ್ರತಿಭೆಯ ಫಲವೋ ಹಾಗೆಯೇ ಅವಳು ಜೀವಿಸಿದ್ದ ಸಾಮಾಜಿಕ, ವೃತ್ತಿಪರ ಸನ್ನಿವೇಶವೂ ಫಲಿತಾಂಶವೂ ಅಹುದೆಂದು ಖಂಡಿತವಾಗಿಯೂ ಹೇಳಬಹುದು.

ಮುದ್ದುಪಳನಿಯ ಕಾಲದಲ್ಲಿಯೇ ತಂಜಾವೂರಿನ ರಾಜಾಸ್ಥಾನದ ಸಂಸ್ಕೃತಿಯು ಸಾಕಷ್ಟು ಪ್ರೌಢವಾಗಿ, ವೈವಿಧ್ಯಮಯವಾಗಿ ಬೆಳೆದಿತ್ತು. ಹಲವು ಬಗೆಗಳಲ್ಲಿ ನೋಡಿದಾಗ, ಅದು ರಾಷ್ಟ್ರೀಯ ಸಂಸ್ಕೃತಿಯೊಂದರ ಭ್ರೂಣಾವಸ್ಥೆಯ ದಿನಗಳ ಸಂಕೇತವಾಗಿ ನಮಗೆ ಗೋಚರವಾಗುತ್ತದೆ. ಅದು ತಮಿಳು, ತೆಲುಗು, ಪರ್ಶಿಯನ್, ಮರಾಠಿ ಭಾಷೆಗಳ ಧಾರ್ಮಿಕ ಸಂಸ್ಕೃತಿಯಿಂದ ಪ್ರೇರಣೆ ಪಡೆದಿತ್ತು. ಅದೇ ರೀತಿ ವಿಭಿನ್ನ ರಾಜಾಸ್ಥಾನಗಳ ಸಂಸ್ಕೃತಿ ನೆಲೆಗಳನ್ನು ತನ್ನಲ್ಲಿ ಒಳಗೊಂಡಿತ್ತು. ನರ್ತಕಿಯಾಗಿ, ಮುದ್ದುಪಳನಿಯೂ ತನ್ನ ಕಲೆಯನ್ನು ತಂಜಾವೂರಿನ ಬೃಹದೇಶ್ವರ ದೇವಾಲಯದ ಮುಖಶಾಲೆಯಲ್ಲಿ ಪ್ರದರ್ಶಿಸಿರುವ, ಕಲಿತಿರುವ ಸಂಭವವಿದೆ. ಈ ದೇವಾಲಯದಲ್ಲಿ ಅನೇಕ ಕಲಾವಿದರು ಮತ್ತು ತಂತ್ರಜ್ಞಾನಿಗಳು ಆಶ್ರಯ ಪಡೆದಿದ್ದರು. ತಂಜಾವೂರಿನ ಅರಸರೇ ಈ ದೇವಾಲಯದ ಮುಖ್ಯ ಪೋಷಕರು ಆಗಿದ್ದರು. ಸುಮಾರು ಒಂಬತ್ತನೆಯ ಶತಮಾನದಿಂದಲೇ ಪ್ರಾರಂಭದ ಚೋಳಸಂಪ್ರದಾಯದ ಶಿಲ್ಪ ಮತ್ತು ನೃತ್ಯಗಳು, ಇಲ್ಲಿನ ಕಲಾವಿದರ ಸಮುದಾಯದಲ್ಲಿ ಹೆಚ್ಚು ಪ್ರಭಾವಶಾಲಿಯಾಗಿ ಕೆಲಸ ಮಾಡತೊಡಗಿದವು. ತಂಜಾವೂರಿನ ತೆಲುಗು ದೊರೆಗಳು ಮೂಲದಲ್ಲಿ ವಿಜಯನಗರ ಸಾಮ್ರಾಜ್ಯದ ಸಾಮಂತರಾಗಿದ್ದರು. ಆ ಸಾಮ್ರಾಜ್ಯದ ಹದಿನಾಲ್ಕು ಹಾಗೂ ಹದಿನೈದನೆಯ ಶತಮಾನಗಳಲ್ಲಿ ತನ್ನ ಅತ್ಯುನ್ನತ ಸ್ಥಿತಿಯನ್ನು ತಲುಪಿತ್ತು. 'ಸರಸ್ವತೀ ಮಹಲ್'ನ ಗ್ರಂಥಭಂಡಾರದಲ್ಲಿ ಇಂದಿಗೂ ಸಂರಕ್ಷಿಸಲಾಗುವ ಪತ್ರಗಳು, ಆ ಕಾಲದಲ್ಲಿಯೇ ಬಿಜಾಪುರದ ಬಹುಮನಿ ರಾಜಾಸ್ಥಾನದ ಸಾಂಸ್ಕೃತಿಕ ಪ್ರಭಾವವೂ ಆಗಿತ್ತೆಂಬುದನ್ನು ತೋರಿಸುತ್ತವೆ. ಹದಿನೆಂಟನೆಯ ಶತಮಾನದ ಮಧ್ಯಭಾಗದ ವೇಳೆಗೆ ಮರಾಠಾ ಸಾಮ್ರಾಜ್ಯವು ಈ ದಕ್ಷಿಣಭಾಗಗಳವರೆಗೆ ಹರಡಿತ್ತು. ತೆಲುಗು ದೊರೆಗಳು ಮರಾಠೀ ರಾಜವಂಶವೊಂದಕ್ಕೆ ಎಡೆಮಾಡಿಕೊಟ್ಟಿದ್ದರು.

ಈ ಮಾತನ್ನು ಸಂಪ್ರದಾಯನಿಷ್ಠ ಇತಿಹಾಸಕಾರರು ಒಪ್ಪದಿರಬಹುದು. ಆದರೆ ಮುದ್ದುಪಳನಿಯ ಕಾಲದಲ್ಲಿ ನಡೆದ ಭಾಷಿಕ ಹಾಗೂ ಸಾಹಿತ್ಯ ರೂಪಗಳಿಗೆ ಸಂಬಂಧಿಸಿದ ಬದಲಾವಣೆಯನ್ನು ಗಮನಿಸಿದಾಗ, ಅಂದಿನ ಸಮಾಜದಲ್ಲಿ ಕೆಲವಾದರೂ ಕ್ರಾಂತಿಕಾರಕ ಬದಲಾವಣೆಗಳು ನಡೆಯುತ್ತಿದ್ದವೆಂದು ಗೊತ್ತಾಗುತ್ತದೆ. ಮುದ್ದುಪಳನಿಯ ಕಾವ್ಯವು, ಅದುವರೆಗೆ ಪ್ರಚುರವಾಗಿದ್ದ ಅಭಿಜಾತ ತೆಲುಗು ಕಾವ್ಯದ ಲಯಗಳನ್ನು, ಕ್ರಮೇಣ ಆಡುಮಾತಿನ ಲಯಗಳ ಕಡೆಗೆ ತಿರುಗಿಸಿತೆಂದು, ಆ ಬಗ್ಗೆ ಮಾತನಾಡಿರುವ ಎಲ್ಲ ವಿದ್ವಾಂಸರೂ ತಪ್ಪದೆ ಒಪ್ಪಿಕೊಳ್ಳುತ್ತಾರೆ. ಅದೇ ಕಾಲದ ಇತರ ಲೇಖಕರೂ ರಾಜಾಸ್ಥಾನಕ್ಕೆ ಸಹಜವಾಗಿದ್ದ ರೂಪಗಳನ್ನು, ಸಂಪ್ರದಾಯ

ವಿಭಿನ್ನ ರೀತಿಗಳಲ್ಲಿ ವಿಸ್ತರಿಸಿದಂತೆ ಕಂಡುಬರುತ್ತದೆ. ಈ ಬಗೆಯ ಪರಿವರ್ತನೆಗೆ ಮತ್ತೊಂದು ದೆಸೆಯಿಂದಲೂ ಒತ್ತಾಸೆ ದೊರಕಿತು. ಕುಶಲ ಕಲಾಕರ್ಮಿಗಳು ದಂಗೆಯೆದ್ದುದರ ಫಲವಾಗಿ ಉಂಟಾದ ಸಾಮಾಜಿಕ, ರಾಜಕೀಯ ಬದಲಾವಣೆಗಳು ಇಂಥ ಒತ್ತಾಸೆಯ ಮೂಲ. ಈ ಪ್ರದೇಶಗಳಲ್ಲಿ ಸುಮಾರು ಎಂಟನೆಯ ಶತಮಾನದಲ್ಲಿಯೇ ಮೊದಲಾದ ಈ ದಂಗೆಯು ಮುದ್ದುಪಳನಿಯ ಕಾಲದವರೆಗೂ ಮುಂದುವರೆದಿತ್ತು. ಇಂದು ತಮಿಳುನಾಡು ಎಂದು ಕರೆಸಿಕೊಳ್ಳುವ ರಾಜ್ಯಭಾಗಗಳ ಆಳ್ವಾರರು ಮತ್ತು ನಾಯನಾರರು, ಕರ್ನಾಟಕ ಮತ್ತು ಆಂಧ್ರಪ್ರದೇಶದ ವೀರಶೈವರು ಮತ್ತು ಮಹಾರಾಷ್ಟ್ರದ ವಾರಕರೀ ಸಂಪ್ರದಾಯಕ್ಕೆ ಸೇರಿದ ಭಕ್ತರ ಸುತ್ತ ಒಂದು ಹೊಸಬಗೆಯ ಸಾಹಿತ್ಯ ರೂಪಿತವಾಗಿತ್ತು. ಈ ಸಾಹಿತ್ಯವು ಆಧ್ಯಾತ್ಮಿಕವಾದರೂ ಜಾತ್ಯತೀತವಾಗಿತ್ತು. ಇದು ಆಸ್ಥಾನನಿಷ್ಠ ಸಾಹಿತ್ಯದ ಗಡಿಗೆರೆಗಳನ್ನು ವಿಸ್ತರಿಸಿತು. ಏಕೆಂದರೆ ಈ ಸಾಹಿತ್ಯದ ವಸ್ತು ಕಲಾವಿದರ ದಿನನಿತ್ಯದ ಜೀವನದಿಂದಲೇ ಮೂಡಿಬಂದಿತ್ತು. ಈ ಚಳುವಳಿಗಳು ಸಾಹಿತ್ಯ ಭಾಷೆಯ ಚೌಕಟ್ಟನೊಳಗೆ ಹೊಸದೊಂದು ವೃತ್ತಿಪರ ಪದಕೋಶವನ್ನೇ ತಂದರೂ ಈ ಪದಗಳಾದರೋ ಅವರ ದೈನಂದಿನ ಅನುಭವದ ಭಾಗವಾಗಿದ್ದವು.[೧೬]

ಅದೇ ಕಾಲದ ಮತ್ತೊಂದು ತೆಲುಗು ಕೃತಿ 'ರಾಮಲಿಂಗೇಶ್ವರ ಶತಕಮು' ಅದು ಭೂಮಾಲಿಕರ ದುಷ್ಕೃತ್ಯಗಳನ್ನು ತನ್ನ ವಸ್ತುವಾಗಿ ಹೊಂದಿದೆ. ಅಲ್ಲಿ ಬಳಸಲಾಗಿರುವ ವ್ಯಂಗ್ಯವು ಅಕ್ಕಸಾಲಿಗನ ಸುತ್ತಿಗೆಯ ಏಟನಂತೆ ಸೂಕ್ಷ್ಮವೂ, ಖಚಿತವೂ ಆಗಿದೆಯೆಂದು ಅದರ ಸಮಕಾಲೀನ ಓದುಗನೊಬ್ಬನು ಹೇಳಿದ್ದಾನೆ.[೧೭] ಜಾತ್ಯತೀತವಾದ ಗದ್ಯ ಕಥಾನಕಗಳು ಸರಿಸುಮಾರು ಇದೇ ಕಾಲದಲ್ಲಿ ರಚಿತವಾಗತೊಡಗಿದವು.

'ರಾಧಿಕಾ ಸಾಂತ್ವನಂ' ಕಾವ್ಯವು ಒಂದು ಶೃಂಗಾರ ಪ್ರಬಂಧ. ತೆಲುಗು ಸಾಹಿತ್ಯ ಚರಿತ್ರೆಯಲ್ಲಿ ಈ ಪ್ರಕಾರವನ್ನು ತಂಜಾವೂರು ಯುಗದೊಂದಿಗೆ ಸಮೀಕರಿಸಲಾಗುತ್ತದೆ. ಈ ಪ್ರಕಾರದ ಕಾವ್ಯಗಳು ಸಾಮಾನ್ಯವಾಗಿ, ದಿವ್ಯಪ್ರಣಯಿಗಳಾದ ಕೃಷ್ಣ-ರಾಧೆಯರ ಕಥೆಯನ್ನು ತಮ್ಮ ವಸ್ತುವಾಗಿ ಹೊಂದಿರುತ್ತವೆ. ಆದರೆ ಕಥಾಸಂವಿಧಾನ, ಸನ್ನಿವೇಶ, ಆಶಯ ಮತ್ತು ಲೋಕದೃಷ್ಟಿಗಳಲ್ಲಿ ಮಹತ್ವದ ಬದಲಾವಣೆಗಳಾಗಿರುತ್ತವೆ. ಕೃತಿಯು ಉದ್ದೀಪನಗೊಳಿಸುತ್ತಿದ್ದ ಪ್ರಧಾನ ರಸ ಶೃಂಗಾರ. ಮುದ್ದುಪಳನಿಯ ಕಾವ್ಯವೂ ಈ ಪ್ರಕಾರದಲ್ಲಿ ರೂಪ ಮತ್ತು ಶೈಲಿಗಳ ದೃಷ್ಟಿಯಿಂದ ಹೆಚ್ಚು ಪ್ರಬುದ್ಧವಾದ ಕೃತಿಗಳ ಗುಂಪಿಗೆ ಸೇರುತ್ತದೆ. ಅದು ಅನೌಪಚಾರಿಕವಾದ ನಿರೂಪಣಾ ವಿಧಾನವನ್ನು (Diction) ಬಳಸುತ್ತದೆ. ಪಾತ್ರಗಳ ಭಾವಸ್ಥಿತಿ ಹಾಗೂ ಧ್ವನಿಯ ಏರಿಳಿತಗಳನ್ನು ಬಹಳ ಸೂಕ್ಷ್ಮವಾಗಿ ಸೆರೆಹಿಡಿಯುತ್ತದೆ. ಅಲ್ಲಿ ಕಂಡುಬರುವ ಹಾಸ್ಯವೂ ಮೇಲ್ತರಗತಿಯದು. ಆದರೆ ನಾಗರತ್ನಮ್ಮನವರನ್ನು ಆಕರ್ಷಿಸಿದ್ದು ಮತ್ತು ಇಂದಿಗೂ ನಮ್ಮ ಗಮನವನ್ನು ಸೆಳೆಯುತ್ತಿರುವುದು ಈ ಗುಣಗಳು ಮಾತ್ರವಲ್ಲ. ತಾನು ಆರಿಸಿಕೊಂಡ ಸಾಹಿತ್ಯರೂಪದ ಮೂಲ ಆಶಯವನ್ನು ತಲೆಕೆಳಗು ಮಾಡಿ, ತನ್ನ ಸ್ವಂತ ಆಶಯವನ್ನು ತೋಡಿಕೊಳ್ಳಲು ಆಕೆ ಮಾಡುವ ಪ್ರಯತ್ನವು ನಿಜವಾಗಿಯೂ ವಿದ್ರೋಹಾತ್ಮಕವಾಗಿದೆ. (Sub-version) ಏಕೆಂದರೆ ಸಾಮಾನ್ಯವಾಗಿ ಅಂಥ ಸಾಹಿತ್ಯದಲ್ಲಿ ಗಂಡು ಪ್ರಿಯಕರ. ಹೆಣ್ಣು ಪ್ರೀತಿಗೆ ಪಾತ್ರವಾಗುವ ವ್ಯಕ್ತಿ / ವಸ್ತು. ಕೃಷ್ಣನು ತನ್ನ ಪ್ರಣಯ ತಂತ್ರಗಳಿಂದ ರಾಧೆಯನ್ನು ಮೆಚ್ಚಿಸುತ್ತಾನೆ. ಅವಳ ಒಡನಾಟವನ್ನು ಸಂಪಾದಿಸುತ್ತಾನೆ. ಸುಶೀಲ್ ಕುಮಾರ್ ಡೇ ಅವರು ತಾವು ಬರೆದ 'ವೈಷ್ಣವ ಪಂಥದ ಇತಿಹಾಸ'ದಲ್ಲಿ ಸಾಮಾನ್ಯವಾಗಿ ಗೋಪಿಯರು ಲೈಂಗಿಕ ಆಸಕ್ತಿಗಳಿಲ್ಲದವರಂತೆ ಚಿತ್ರಿತರಾಗಿರುವರೆಂಬ ಸಂಗತಿಯ ಕಡೆಗೆ ಗಮನ ಸೆಳೆಯುತ್ತಾರೆ. ರಾಧೆಯು ಕೃಷ್ಣನಿಗಾಗಿ ಕಾಯುತ್ತಿರುವವಳಂತೆ, ಅವನ ಮಿಲನಕ್ಕಾಗಿ ಕಾತುರಪಡುವಂತೆ ಕಂಡುಬರುತ್ತಾಳೆ. ಆದರೂ ಕಥನದ ಕೇಂದ್ರದಲ್ಲಿರುವುದು ಕೃಷ್ಣನ 'ಸುಖ'ವೇ ಆಗಿರುತ್ತದೆ.[೧೮] 'ರಾಧಿಕ ಸಾಂತ್ವನಂ'ನಲ್ಲಿ ಹೀಗೆ ಆಗುವುದಿಲ್ಲ. ಇಲ್ಲಿನ ಹೆಣ್ಣಿನ ಐಂದ್ರಿಯಿಕ ಸಂವೇದನಗಳೇ ಪ್ರಧಾನತೆಯನ್ನು ಹೊಂದಿದೆ. ಇಲ್ಲಿ ಅವಳೇ ಎಲ್ಲ ಕ್ರಿಯೆಗಳಲ್ಲಿಯೂ ಮುಂದಾಳುತನವನ್ನು ವಹಿಸಿಕೊಳ್ಳುತ್ತಾಳೆ. ಅವಳ ತೃಪ್ತಿ ಅಥವಾ ಸಂತೋಷಗಳು ಹೇಗೆ ಸಾಧಿತವಾಗುತ್ತವೆ ಎನ್ನುವುದನ್ನು ಹೇಳುವುದೇ ಕವಿತೆಯ ಉದ್ದೇಶವಾಗಿರುತ್ತದೆ. ಹುಡುಗಿಯೊಬ್ಬಳಲ್ಲಿ ಕ್ರಮೇಣ ಲೈಂಗಿಕ ಆಸಕ್ತಿಗಳು ಗರಿಗೆದರಿ ಅವಳು ವಯಸ್ಸಿಗೆ ಬರುವುದನ್ನು ಹಾಗೂ ಅವಳ ಮೊದಲ ಲೈಂಗಿಕ ಅನುಭವವನ್ನು ಮುದ್ದುಪಳನಿಯು ಬಹಳ ಮಮತೆಯಿಂದ ವರ್ಣಿಸಿದ್ದಾಳೆ. ಆ ಸಂಗತಿಗಳನ್ನು ವೈಭವೀಕರಿಸಿದ್ದಾಳೆ. ಕಾವ್ಯದ ಇನ್ನೊಂದು ಭಾಗದಲ್ಲಿ ರಾಧೆಯನ್ನು ತಾರುಣ್ಯದ ಶಿಖರದಲ್ಲಿರುವ ಪ್ರಮದೆಯಾಗಿ ಚಿತ್ರಿಸಲಾಗಿದೆ. ಅವಳು ತನ್ನ ಸೋದರಿಯ ಮಗಳಾದ ಇಳಾದೇವಿಗೆ ಒಲವಿನ ಕಲೆ ಹಾಗೂ ಆನಂದಗಳನ್ನು ಕುರಿತಂತೆ ತರಬೇತಿ ನೀಡುತ್ತಾಳೆ. ಅವಳು, ತರುಣಿ ಇಳಾದೇವಿಯು ತನಗೆ ಯಾವುದು ಇಷ್ಟವೆನ್ನುವುದನ್ನು ದಿಟ್ಟವಾಗಿ ಹೇಳಬೇಕೆಂದು ಪ್ರಚೋದಿಸುತ್ತಾಳೆ. ಹೆಣ್ಣು ತನ್ನ ಲೈಂಗಿಕ ಸುಖದ ಸೆಲೆಗಳನ್ನು ಗುರುತಿಸಬೇಕು ಹಾಗೂ ಅದಕ್ಕೆ ಮಹತ್ವ ಕೊಡಬೇಕು ಎನ್ನುವುದು ರಾಧೆಯ ಅಭಿಪ್ರಾಯ.

ಈ ಕಾವ್ಯದ ಕೆಲವು ಅತ್ಯಾಕರ್ಷಕವಾದ ಹಾಗೂ ಅಚ್ಚರಿ ಮೂಡಿಸುವ ಭಾಗಗಳು, ಒಟ್ಟು ಕಾವ್ಯಕ್ಕೆ ಹೆಸರು ಕೊಟ್ಟಿರುವ 'ರಾಧಿಕ ಸಾಂತ್ವನಂ'ದ ಪ್ರಸಂಗದಲ್ಲಿಯೇ ಬರುತ್ತವೆ. ರಾಧೆಯನ್ನು ಸಂಕೀರ್ಣವಾದ, ಮಾನಸಿಕವಾಗಿ ಪರಿಪೂರ್ಣಳಾದ ಹೆಣ್ಣಾಗಿ ಕಂಡರಿಸಲಾಗಿದೆ. ಅವಳು ಇಳಾ ಮತ್ತು ಕೃಷ್ಣರ ಪ್ರಣಯಕ್ಕೆ ಪ್ರೋತ್ಸಾಹ ನೀಡುತ್ತಾಳೆ. ಆದರೆ ತಾನೇ ಕೃಷ್ಣನನ್ನು ಪ್ರೀತಿಸುತ್ತಾಳೆ; ಅವನ ಅಗಲಿಕೆಯನ್ನು ತಡೆಯಲಾರಳು. ಅವಳು ಕೃಷ್ಣನನ್ನು ನಿಂದಿಸುತ್ತಾಳೆ. ಅವನು ತನ್ನನ್ನು ನಿರ್ಲಕ್ಷಿಸುತ್ತಿರುವನೆಂದು ಆಪಾದಿಸುತ್ತಾಳೆ. ತನ್ನೊಂದಿಗಿನ ಸಂಬಂಧವನ್ನು ಮುಂದುವರಿಸಬೇಕೆಂದು ಅಧಿಕಾರವಾಣಿಯಿಂದ ಕೇಳುತ್ತಾಳೆ. ಕೃಷ್ಣನು ಅವಳ ಕರೆಗೆ ಓಗೊಡುತ್ತಾನೆ. ಮರುಳು ಮಾಡುವ ಸಿಹಿಮಾತುಗಳಿಂದ ಪ್ರೀತಿಯ ಆಲಿಂಗನಗಳಿಂದ ಅವಳನ್ನು ಸಮಾಧಾನ ಮಾಡುತ್ತಾನೆ. ಇಪ್ಪತ್ತನೆಯ ಶತಮಾನದಲ್ಲಿಯೂ, ಕ್ರಾಂತಿಕಾರಕವಾಗಿ, ಮನಕೆರಳಿಸುವಂತೆ ಕಾಣಿಸುವ ಕೆಲವು ಲಕ್ಷಣಗಳು ಇಲ್ಲಿ ಕಂಡುಬರುತ್ತವೆ; ಲೈಂಗಿಕ ಸುಖವನ್ನು ಕುರಿತು ಆವರೆಗೆ ಎಲ್ಲರೂ ಒಪ್ಪಿಕೊಂಡಿದ್ದ ಅ-ಸಮಾನ ನೆಲೆಗಳನ್ನು, ಈ ಕೃತಿಯೂ ದಿಟ್ಟವಾಗಿ, ಆತ್ಮವಿಶ್ವಾಸದೊಂದಿಗೆ ಪ್ರಶ್ನಿಸುತ್ತದೆ. ಹೆಣ್ಣಿನಲ್ಲಿಯೂ ಲೈಂಗಿಕ ಬಯಕೆಗಳಿರುವುದು ಸಹಜವೆಂದು ಸಾರುತ್ತದೆ. ಅಂಥ ಸುಖವನ್ನು ಪಡೆಯುವುದು ಹೆಣ್ಣಿನ ಹಕ್ಕು ಎಂದು ಘೋಷಿಸುತ್ತದೆ.

"ಸಾಹಿತ್ಯಿಕ ಪಠ್ಯ"ವಾಗಿಯೂ 'ರಾಧಿಕ ಸಾಂತ್ವನಂ' ಇಂದಿಗೂ ಮುಖ್ಯವಾಗಿದೆ. ತನ್ನ ಆಶಯಗಳಿಗಾಗಿ ಮಾತ್ರವಲ್ಲ, ಮಹಿಳಾ ಓದುಗರಲ್ಲಿ ಅದು ವ್ಯಕ್ತಿನಿಷ್ಠವಾದ ನೆಲೆಗಳನ್ನು ಸಂಪೂರ್ಣವಾಗಿ ಅಧಿಕೃತಗೊಳಿಸುತ್ತದೆ. ವಾಸ್ತವವಾಗಿ ಇಡೀ ಕಾವ್ಯವು ಮಹಿಳೆಯರಿಗೆ ಉದ್ದೇಶಿತವಾಗಿದ್ದು ಅದರೊಂದಿಗೆ ಅರ್ಥಪೂರ್ಣ ಸಂವಾದಗಳನ್ನು ಕಟ್ಟಿಕೊಳ್ಳುತ್ತದೆ.

೪

ನಾವು ಕೇಳಿಕೊಳ್ಳಬೇಕಾದ ಪ್ರಶ್ನೆ ಈ ರೀತಿ ಇದೆ : ತಾನು ರಚಿತವಾದ ಕಾಲದಲ್ಲಿ 'ರಾಧಿಕ ಸಾಂತ್ವನಂ' ಕೊಂಚ ಅಸಾಮಾನ್ಯ ಎನ್ನಿಸಿತು, ನಿಜ. ಆದರೆ ಆಗ ಅದು ಯಾವುದೇ ವಾದವಿವಾದಗಳಿಗೆ ಕಾರಣವಾಗಲಿಲ್ಲ. ಕೇವಲ ಎರಡು ಶತಮಾನಗಳ ನಂತರ ಅದೇ ಕಾವ್ಯವು ಅಷ್ಟೊಂದು ಅಪಾಯಕಾರಿ ಹಾಗೂ ಆಕ್ಷೇಪಣಾರ್ಹ ಎನ್ನಿಸಿದ್ದು ಯಾಕೆ?

೧೯೧೧ರಲ್ಲಿ ನಾಗರತ್ನಮ್ಮನವರು ಈ ಕಾವ್ಯದ ಮರುಮುದ್ರಣವನ್ನು - ಅದು ರಚಿತವಾಗಿ ೧೫೦ ವರ್ಷಗಳ ನಂತರ ಹೊರತಂದಾಗ, ಇಂಗ್ಲೆಂಡನ್ನು ವಿಕ್ಟೋರಿಯಾ ರಾಣಿಯೂ ಆಳುತ್ತಿದ್ದಳು. ಅವಳು ಭಾರತದ ಚಕ್ರವರ್ತಿನಿಯೂ ಆಗಿದ್ದಳು. ಆ ಕಾಲದಲ್ಲಿ ಹಲವು ಮಹತ್ವದ ರಾಜಕೀಯ ಹಾಗೂ ತಾತ್ವಿಕ ಸ್ಥಿತ್ಯಂತರಗಳು ನಡೆದಿದ್ದವು. ಅವು ಸಾಹಿತ್ಯ ರಚನೆ ಮತ್ತು ವಾಚನದ ಪ್ರಕ್ರಿಯೆಗಳ ಮೇಲೆ ತಮ್ಮದೇ ಆದ ಪ್ರಭಾವವನ್ನು ಬೀರಿದ್ದವು. ಸಾಹಿತ್ಯವೆಂಬ ಸಂಸ್ಥೆಯಲ್ಲಿ ಮಹಿಳೆಯರ ಹದಿನೆಂಟನೆಯ ಶತಮಾನದ ಉತ್ತರಾರ್ಧದಲ್ಲಿ ಕ್ರಮೇಣ ಬ್ರಿಟಿಷರು ಭಾರತದ ಮೇಲೆ ವಾಣಿಜ್ಯ ಮತ್ತು ಮಿಲಿಟರಿ ಕ್ಷೇತ್ರಗಳಲ್ಲಿ ತಮ್ಮ ಅಧಿಕಾರವನ್ನು ಸ್ಥಾಪಿಸುತ್ತಿದ್ದರು. ಆಗಲೇ ಈ ಬದಲಾವಣೆಗಳೂ ನಡೆದವು. ಹಳೆಯ ರಾಜರುಗಳು ಪದಚ್ಯುತರಾದರು. ತಂಜಾವೂರಿನಂತಹ ಆಡಳಿತ ಮತು ವಾಣಿಜ್ಯ ಕೇಂದ್ರಗಳು ತಮ್ಮ ಮಹತ್ವವನ್ನು ಕಳೆದುಕೊಂಡವು. ಸಮುದ್ರ ತೀರದ ನಗರಗಳು ಪ್ರಮುಖವಾದವು. ೧೮೯೯ರ ವೇಳೆಗೆ ತಂಜಾವೂರು ಸಂಸ್ಥಾನದಿಂದ ಬರುವ ಕಂದಾಯಗಳೆಲ್ಲವೂ ಬ್ರಿಟಿಷರಿಗೇ ಸೇರುತ್ತಿದ್ದವು. ಈ ಪರಿವರ್ತನೆಯ ಫಲವಾಗಿ ಬಡತನದ ಸೀಮೆಯನ್ನು ತಲುಪಿದವರೆಂದರೆ ಮುಖ್ಯವಾಗಿ ಕುಶಲಕರ್ಮಿಗಳು ಹಾಗೂ ಕಲಾವಿದರು. ಅಷ್ಟು ಮಾತ್ರವಲ್ಲ, ಕವಿಗಳು, ಸಂಗೀತಗಾರರು, ವಾಸ್ತುಶಿಲ್ಪಿಗಳು, ವಿಜ್ಞಾನಿಗಳು ಮುಂತಾದ ರಾಜಾಶ್ರಯವನ್ನು ಅವಲಂಬಿಸಿದ್ದ ಎಲ್ಲ ರೀತಿಯ ವಿದ್ವಾಂಸರೂ ತಮ್ಮ ಜೀವನದ ಆಸರೆಯನ್ನು ಕಳೆದುಕೊಂಡರು. ಅನೇಕ ಕಲಾವಿದೆಯರು ಬಡತನದ ತೀವ್ರತೆಯಿಂದ ತಪ್ಪಿಸಿಕೊಳ್ಳಲು ವೇಶ್ಯಾವೃತ್ತಿಯನ್ನು ಅವಲಂಬಿಸಬೇಕಾಯಿತು.[೯] ಈ ಗುಂಪಿಗೆ, ಜೀವನಕ್ಕಾಗಿ ಶ್ರೀಮಂತ ಮನೆತನಗಳ ಪೋಷಣೆಯನ್ನು ನಂಬಿಕೊಂಡಿದ್ದ ಅಲೆಮಾರಿ ಗಾಯಕಿಯರು ಹಾಗೂ ನರ್ತಕಿಯರು ಮಾತ್ರವಲ್ಲ, ಮುದ್ದುಪಳನಿಯಂತಹ ರಾಜಾಶ್ರಯದಲ್ಲಿದ್ದ ಕಲಾವಿದೆಯರೂ ಸೇರುತ್ತಾರೆ. ಆದ್ದರಿಂದಲೇ, ಮುಂದೆ ಪ್ರಾದೇಶಿಕ ಭಾಷೆಗಳ ಆಧುನಿಕ ಸಾಹಿತ್ಯವು ಬಹುಮಟ್ಟಿಗೆ ಇಂಗ್ಲಿಷ್ ಕಲಿತ ನಗರವಾಸೀ ಮಧ್ಯಮವರ್ಗದಿಂದ ರಚಿತವಾಗತೊಡಗಿತು.

ಅದೇ ಕಾಲದಲ್ಲಿ, ಮುದ್ದುಪಳನಿಯಂತಹ ಕಲಾವಿದೆಯರನ್ನು ಕೀಳುಗಳೆಯುವಂತಹ ತಾತ್ವಿಕವಾದ ಬದಲಾವಣೆಗಳೂ ನಡೆಯತೊಡಗಿದವು. ದಿನಕಳೆದಂತೆ 'ಮರ್ಯಾದಸ್ಥ ಮಹಿಳೆ'ಯರನ್ನು ಗುರುತಿಸುವ

ಮಾನದಂಡಗಳೇ ಬದಲಾದುವು. ಹತ್ತೊಂಬತ್ತನೆಯ ಶತಮಾನದುದ್ದಕ್ಕೂ ಈ ಪರಿವರ್ತನೆ ಹರಡಿಕೊಂಡಿತ್ತು. ಹೊಸದಾಗಿ ಮೂಡಿಬರುತ್ತಿದ್ದ ಮಧ್ಯಮವರ್ಗದ ಮಹಿಳೆಯರ ನಡವಳಿಕೆಯು ಹೇಗೆ ಇರಬಾರದು ಎನ್ನುವುದಕ್ಕೆ ಮಾದರಿಯಾಗಿ ಕೆಳವರ್ಗದ ಹೆಣ್ಣುಮಕ್ಕಳ "ಸ್ವೇಚ್ಛಾಪ್ರವೃತ್ತಿಯ, ಎಗ್ಗಿಲ್ಲದ" ನಡತೆಯನ್ನು ತೋರಿಸುತ್ತಿದ್ದರು. ಇಂಥ ಹೆಂಗಸರೊಂದಿಗೆ, ಆಕ್ಷೇಪಣಾರ್ಹವಾದ ಸಂಪರ್ಕವನ್ನು ಇಟ್ಟುಕೊಳ್ಳಬಾರದೆಂದು ಸಭ್ಯ (ಮಧ್ಯಮವರ್ಗದ) ಮಹಿಳೆಯರಿಗೆ ಎಚ್ಚರ ನೀಡುತ್ತಿದ್ದರು. ಸಹಜವಾಗಿಯೇ ಈ ಕೆಳವರ್ಗದ ಹೆಂಗಸರು ಕೆಳಜಾತಿಯವರೂ ಆಗಿರುತ್ತಿದ್ದರು. ಅದರಲ್ಲಿಯೂ ಅಲೆಮಾರಿ ಗಾಯಕಿ-ನರ್ತಕಿಯರ ಭ್ರಷ್ಟಗೊಳಿಸುವ ಪ್ರಭಾವದಿಂದ ದೂರವಿರುವುದು ಕಡ್ಡಾಯವಾಯಿತು. ಏಕೆಂದರೆ ಅವರ ಕಲಾಪ್ರದರ್ಶನಗಳು ಅಶ್ಲೀಲತೆಯ ಅಂಚಿನಲ್ಲಿರುತ್ತಿದ್ದವು. ಅದಕ್ಕಿಂತ ಹೆಚ್ಚಾಗಿ ಸಾಮಾಜಿಕ ವಿಡಂಬನೆ ಹಾಗೂ ವಿಮರ್ಶೆ ಇರುತ್ತಿತ್ತು. ಅಧಿಕಾರವನ್ನು ಕುರಿತು ಆರೋಗ್ಯಕರವಾದ ದಿಟ್ಟ ನಿಲುವು ಇರುತ್ತಿತ್ತು. ಇವೆಲ್ಲವೂ ಮಧ್ಯಮವರ್ಗಕ್ಕೆ ಪಥ್ಯವಾಗಲಿಲ್ಲ. ವಾಸ್ತವವಾಗಿ ಈ ಹೊಸಬಗೆಯ 'ಗೌರವನೀಯತೆ'ಯ ರೂಪಣವು ಅಂದಿನ ಸಮಾಜ ಸುಧಾರಣಾ ಚಳುವಳಿಯ ಮುಖ್ಯ ಉದ್ದೇಶಗಳಲ್ಲಿ ಒಂದು. ಆ ಚಳುವಳಿಯು ಸಂಪ್ರದಾಯ ಬದ್ಧ ಸಮಾಜವನ್ನು ಆಧುನಿಕ ಸಮಾಜವಾಗಿ ಮಾರ್ಪಡಿಸಲೆಂದು ಹೊರಟಿತ್ತು. ಆದ್ದರಿಂದಲೇ ಅದುವರೆಗಿನ ಕಲಾವಿದ ವಲಯಗಳಲ್ಲಿ ಗೌರವಪಾತ್ರರಾಗಿದ್ದ ಮುದ್ದುಪಳನಿಯಂಥವರು ಇದ್ದಕ್ಕಿದ್ದಂತೆ ಪತಿತರೆನ್ನಿಸಿಕೊಂಡರು. ಅವರ ಕಲೆಯು ನೈತಿಕತೆಯನ್ನು ಸಡಿಲಿಸುತ್ತದೆ ಎನ್ನಲಾಯಿತು.

ಹೆಣ್ಣುಮಕ್ಕಳ ಲೈಂಗಿಕ ವರ್ತನೆಯ ನಿಯಮಾವಳಿಗಳನ್ನು ಮರುರೂಪಿಸಿದ ಇಂತಹುದೇ ಪ್ರಕ್ರಿಯೆಯು ಯುರೋಪಿನಲ್ಲಿಯೂ ನಡೆದಿತ್ತು. ಹದಿನೆಂಟನೆಯ ಶತಮಾನದ ಕೊನೆಯ ಭಾಗ ಹಾಗೂ ಹತ್ತೊಂಬತ್ತನೆಯ ಶತಮಾನದ ಮೊದಲ ಭಾಗ ಈ ಪರಿವರ್ತನೆಯು ನಡೆದ ಕಾಲ. ಈ ಪ್ರಕ್ರಿಯೆಯು ವರ್ಗಗಳನ್ನು ಪ್ರತ್ಯೇಕಿಸುವ ಮಾನದಂಡಗಳಲ್ಲಿ ಒಂದಾಗಿತ್ತು. ಹೊಸ ಬೂರ್ಜ್ವಾವರ್ಗ ಮಹಿಳೆಯರ ದೇಹಗಳು ಹಾಗೂ ಆತ್ಮಗಳ ಮೇಲೆ ತನ್ನ ಮುದ್ರೆಯನ್ನು ಹಾಕಿತು. ಸರಿ, ಅದರೊಂದಿಗೆ 'ಸಭ್ಯಮಹಿಳೆಯು' ಹುಟ್ಟಿಕೊಂಡಳು.[೨೦] ಭಾರತದಲ್ಲಂತೂ ಇಲ್ಲಿನ ಮಹಿಳೆಯರ ವರ್ತನೆಯು ಮತ್ತೊಂದು ಅಗ್ನಿಪರೀಕ್ಷೆಯಲ್ಲೂ ತೇರ್ಗಡೆಯಾಗಬೇಕಿತ್ತು. ಬ್ರಿಟಿಷರು ಹತ್ತೊಂಬತ್ತನೆಯ ಶತಮಾನದುದ್ದಕ್ಕೂ ಇವರನ್ನು ಭೂತಗನ್ನಡಿ ಹಿಡಿದುಕೊಂಡು ಪರೀಕ್ಷೆಗೆ ಒಳಪಡಿಸುತ್ತಿದ್ದರು. ಅವರು ನೈತಿಕ ಅಧಃಪತನ ಹೊಂದಿರುವರೆಂಬುದನ್ನು ಪೂರ್ವಗ್ರಹೀತೆ ಹಿಡಿಯಲಾಗುತ್ತಿತ್ತು. ಅಧಿಕಾರಿಗಳು, ಪಾದ್ರಿಗಳು, ಪತ್ರಿಕೋದ್ಯಮಿಗಳು, ಹಲವು ಬಗೆಯ ಪಾಶ್ಚಾತ್ಯ ಪಂಡಿತರು ಎಲ್ಲರೂ ಭಾರತೀಯ ಸಂಸ್ಕೃತಿಯ ಸ್ಥಿತಿಗತಿಗಳನ್ನು ಕುರಿತಂತೆ 'ರೋಮಾಂಚನಕಾರಿ' ವರದಿಗಳನ್ನು ಕಳಿಸುತ್ತಿದ್ದರು. ಅವರೆಲ್ಲರ ವಿಶ್ಲೇಷಣೆಯ ಸಾರಾಂಶವು ಒಂದೇ ಆಗಿರುತ್ತಿತ್ತು : ಭಾರತೀಯ ವ್ಯಕ್ತಿತ್ವವು ಅತಾರ್ಕಿಕವಾದುದು; ವಂಚನೆಯಿಂದ ಕೂಡಿದುದು ಮತ್ತು ಲೈಂಗಿಕತೆಯನ್ನು ಕುರಿತಂತೆ ವಿಶೃಂಖಲವಾದುದು. ಈ ಟೀಕೆ-ಟಿಪ್ಪಣಿಗಳ ಅಂತಿಮ ಧ್ಯೇಯವು ಸ್ಪಷ್ಟವಾಗಿಯೇ ಇತ್ತು : 'ಭಾರತದ ಪರಿಸ್ಥಿತಿಯು ಎಷ್ಟು ಶೋಚನೀಯವಾಗಿದೆಯೆಂದರೆ, ನೀತಿವಂತರೂ, ವಿವೇಚನಾಶೀಲರೂ ಆದ ಪರಕೀಯ ಆಡಳಿತಗಾರರು ಮಧ್ಯಪ್ರವೇಶ ಮಾಡಲು ಕಾಲ ಪರಿಪಕ್ವವಾಗಿದೆ : ಭಾರತವನ್ನು ಅಧಃಪತನವನ್ನು ಕಾಪಾಡಿಕೊಳ್ಳುವುದು ಬಿಳಿಯರ ಹೊಣೆಗಾರಿಕೆ ಹಾಗೂ ಅಂಥದೊಂದು ಮುಕ್ತಿಯನ್ನು ಪಡೆಯಲು ತಮ್ಮ ಆಡಳಿತ ಅನಿವಾರ್ಯ ಎಂದು ಬ್ರಿಟಿಷರು ತಮಗೆ ತಾವೇ ಸಮಜಾಯಿಷಿ ಹೇಳಿಕೊಂಡರು. (ತಮ್ಮ ದೇಶದ ಕೊಪ್ಪರಿಗೆಗಳಿಗೆ ಹರಿಯುತ್ತಿದ್ದ ಹಣದ ಪ್ರವಾಹವು ಅವರನ್ನು ಈ ತೀರ್ಮಾನದ ಕಡೆಗೆ ತಳ್ಳಿತೆಂದು ಪ್ರತ್ಯೇಕವಾಗಿ ಹೇಳಬೇಕಾಗಿಲ್ಲ).

ಇನ್ನೊಂದು ಮುಖ್ಯ ಸಂಗತಿ ಇದೆ. ಹದಿನೆಂಟನೆಯ ಶತಮಾನದ ಮಧ್ಯಭಾಗದಲ್ಲಿ, ಉತ್ತಮ ಕೃತಿಯೆಂದು ಎಲ್ಲರೂ ಒಪ್ಪಿಕೊಂಡಿದ್ದ ಪುಸ್ತಕವು ಇಪ್ಪತ್ತನೆಯ ಶತಮಾನದಲ್ಲಿ ಏಕೆ ತಿರಸ್ಕೃತವಾಯಿತೆಂದು ತಿಳಿಯಲು ಈ ಸಂಗತಿಯೂ ನೆರವಾಗುತ್ತದೆ. ಆ ಕಾಲದಲ್ಲಿ ಸಾಹಿತ್ಯವು ಕ್ರಮೇಣ ಪಠ್ಯವಸ್ತುವಿನ ಭಾಗವಾಗಿ ಪ್ರವೇಶ ಪಡೆಯುತ್ತಿತ್ತು. ಅದು ಆದರ್ಶರೂಪಣದ ಜವಾಬ್ದಾರಿಯನ್ನೂ ಹೊರುತ್ತಿತ್ತು. ಥಾಮಸ್ ಮೆಕಾಲೆ, ಚಾರ್ಲ್ಸ್ ಟ್ರವೆಲ್ಯನ್, ಜಾನ್ ಸ್ಟೂವರ್ಟ್ ಮಿಲ್ ಮುಂತಾದ ಬ್ರಿಟಿಷ್ ಆಡಳಿತಗಾರರು ಮತ್ತು ರಾಜಕೀಯ ಚಿಂತಕರು ಒಂದು ವಿಷಯದಲ್ಲಿ ಒಮ್ಮತವನ್ನು ಹೊಂದಿದ್ದರು. ಭಾರತೀಯ ಪ್ರಜೆಗಳು ಬ್ರಿಟಿಷರ ಕಾನೂನುಗಳನ್ನು ಅರ್ಥಮಾಡಿಕೊಂಡರೆ ಸಾಲದು, ಅವರು ಬ್ರಿಟಿಷ್ ಸರ್ಕಾರವನ್ನು ಮೆಚ್ಚಬೇಕು, ಬಯಸಬೇಕು ಎನ್ನುವುದೇ ಆ ವಿಷಯ. ಅಂಥ ಪ್ರಜೆಗಳನ್ನು ಸೃಷ್ಟಿಸಲು ಅಗತ್ಯವಾದ ಕ್ರಮಗಳನ್ನು ತೆಗೆದುಕೊಳ್ಳಲು ಅವರು ಪ್ರಯತ್ನಿದರು... "ಈ ದೇಶದ ಆಡಳಿತವನ್ನು ಚೆನ್ನಾಗಿ ನಡೆಸುವುದರಲ್ಲಿ ಸರ್ಕಾರವು ಎದುರಿಸುವ ಅತಿದೊಡ್ಡ ಸಮಸ್ಯೆಯೆಂದರೆ, ಸಾಮಾನ್ಯ ಜನರಲ್ಲಿ ತಾನೇತಾನಾಗಿರುವ ಅನೀತಿ ಮತ್ತು ಅಜ್ಞಾನಗಳು....

ಅದರಲ್ಲಿಯೂ ಅವರಿಗೆ ಬ್ರಿಟಿಷ್ ಸರ್ಕಾರದ ಹಿಂದೆ ಇರುವ ತಾತ್ವಿಕತೆ, ವ್ಯವಸ್ಥೆ ಮತ್ತು ಧೋರಣೆಗಳು ಅರ್ಥವಾಗುವುದೇ ಇಲ್ಲ" ಎಂದು ಒಬ್ಬ ಆಡಳಿತಗಾರನು ವರದಿ ಮಾಡಿದ್ದನು.[೨೧] "ಈ ದೇಶದ ಜನರು, ನಮ್ಮ ಶಕ್ತಿಗೆ ಹೆದರಿಕೊಂಡು, ಎದುರಾಡದೆ ನಮ್ಮ ಅಪ್ಪಣೆಯನ್ನು ಪಾಲಿಸಬೇಕು ಅಥವಾ ನಾವು ಅವರಿಗಿಂತ ಬುದ್ಧಿವಂತರು, ನ್ಯಾಯಪರರು, ಕರುಣಾಶೀಲರು ಹಾಗೂ ಅವರ ಸ್ಥಿತಿಗತಿಗಳನ್ನು ಸುಧಾರಿಸುವುದರಲ್ಲಿ ಆಸಕ್ತರು ಎಂಬ ಸಂಗತಿಯೂ ಅವರಿಗೆ ಮನದಟ್ಟಾಗಬೇಕು. ನಮಗಿಂತ ಉತ್ತಮರಾದ ಪ್ರಭುಗಳು ಬೇರೆ ಯಾರು ಇಲ್ಲವೆಂಬ ತಿಳಿವಳಿಕೆ ಅವರಲ್ಲಿ ಮೂಡಬೇಕು" ಎಂಬುದಾಗಿ ಇನ್ನೊಬ್ಬನು ಬರೆಯುತ್ತಾನೆ.[೨೨]

ಒಳ್ಳೆಯ ಸರ್ಕಾರವನ್ನು ಗುರುತಿಸಲು, ಇಷ್ಟಪಡಲು ಅಗತ್ಯವಾದ ನೈತಿಕ ಮತ್ತು ಬೌದ್ಧಿಕ ನೆಲೆಗಳು ಭಾರತೀಯ ಸಾಹಿತ್ಯದಲ್ಲಿ ಇಲ್ಲವೇ ಇಲ್ಲವೆಂದು ಬ್ರಿಟಿಷ್ ಶಿಕ್ಷಣವೇತ್ತರು ಆಡಳಿತಗಾರರು ಖಚಿತವಾಗಿ ನಂಬಿದ್ದರು. "ಜಾತ್ಯತೀತವಾದ ಕ್ರಿಶ್ಚಿಯಾನಿಟಿ"[೨೩]ಯನ್ನು ಮೈಗೂಡಿಸಿಕೊಂಡಿರುವ, ಆಂಗ್ಲಸಾಹಿತ್ಯ ಭಾಗಗಳು ಮಾತ್ರ ಈ ಕೆಲಸವನ್ನು ಮಾಡಲು ಸಮರ್ಥವೆನ್ನಿಸಿದವು. ಆ ಭಾಗಗಳನ್ನು ಕೂಡ ಎಚ್ಚರಿಕೆಯಿಂದ ಆಯ್ಕೆಮಾಡಿ, ಸೂಕ್ತರೀತಿಯಲ್ಲಿ ಕಲಿಸಬೇಕಾಗಿತ್ತು. ಇಂಥ ಕೃತಿಗಳು ಭಾರತೀಯರ ಆಲೋಚನೆ, ಭಾವನೆ ಹಾಗೂ ನೈತಿಕ ಸಂವೇದನೆಗಳಲ್ಲಿ ಆಮೂಲಾಗ್ರ ಪರಿವರ್ತನೆಯನ್ನು ತರಲು ಸಮರ್ಥವಾದವು. ಇಂಥ ಶಿಕ್ಷಣವು ಬ್ರಿಟಿಷರ ನೈತಿಕ, ರಾಜಕೀಯ ಉನ್ನತಿಯನ್ನು ನೆಲೆಗೊಳಿಸುತ್ತದೆ. ಜನರಲ್ಲಿ ಸಾರ್ವಜನಿಕ ಹೊಣೆಗಾರಿಕೆ ಹಾಗೂ ಪ್ರತಿಷ್ಠೆಯನ್ನು ಮೂಡಿಸುತ್ತದೆ. ಯಾವುದೇ ಪ್ರಾದೇಶಿಕ ಭಾಷೆಯ ಸಾಹಿತ್ಯಕ್ಕೆ ಇಂಥ ಸಾಮರ್ಥ್ಯವು ಇಲ್ಲವೆಂದು ಬ್ರಿಟಿಷರೇ ನಿರ್ಧರಿಸಿದರು. ಆ ಕೃತಿಗಳನ್ನು ಸಾಹಿತ್ಯವೆಂದು ಕರೆಯಲು ಕೂಡ ಅವರು ತಯಾರಾಗಿರಲಿಲ್ಲ. ಸರಿ, ಪ್ರಾದೇಶಿಕ ಭಾಷೆಗಳಲ್ಲಿ ಸರಿಯಾದ ಸಾಹಿತ್ಯವನ್ನು ರೂಪಿಸುವ ಜವಾಬ್ದಾರಿಯನ್ನೂ ಬ್ರಿಟಿಷ್ ಸರ್ಕಾರವೇ ವಹಿಸಿಕೊಳ್ಳಬೇಕಾಯಿತು.[೨೪] ಈ ರೀತಿಯ ತರಬೇತಿಯನ್ನು ಪಡೆದ, ಎಚ್ಚರಿಕೆಯಿಂದ ಅರೆದು ಕುಡಿಸಲಾದ ಸಾಹಿತ್ಯ ತತ್ವಗಳನ್ನು ಅರಗಿಸಿಕೊಂಡ ಓದುಗರು 'ರಾಧಿಕಾ ಸಾಂತ್ವನಂ'ದಂತಹ ಕೃತಿಯ ಮಾತು ಹಾಗಿರಲಿ, ಅದರ ಲೇಖಕಿಯನ್ನು ಪೋಷಿಸಿದ ಸಮಾಜ, ಸಂಸ್ಕೃತಿಗಳನ್ನೇ ಅವನತಿಪರವೆಂದು ಪರಿಗಣಿಸುವುದರಲ್ಲಿ ಏನು ಆಶ್ಚರ್ಯ! ಅವೆಲ್ಲದರ ಹುಟ್ಟಡಗಿಸಬೇಕೆಂದೇ ಅವರಿಗೆ ತೋರುತ್ತಿತ್ತು. ಕ್ರಮೇಣ ಹೊಸ ಶಕ್ತಿಮೂಲಗಳು ಈ ನಾಡಿನ ಮೇಲೆ, ಪ್ರಜೆಗಳ ಮೆದುಳುಗಳ ಮೇಲೆ ತಮ್ಮ ಅಧಿಕಾರವನ್ನು ಸ್ಥಾಪಿಸಿಕೊಂಡವು. ಪರಿಣಾಮವಾಗಿ ಬಿಡಿಬಿಡಿ ಸಾಹಿತ್ಯ ಕೃತಿಗಳು ಮಾತ್ರವಲ್ಲ, ಇಡಿ ಇಡಿ ಸಾಹಿತ್ಯ ಸಂಪ್ರದಾಯಗಳೇ ಒತ್ತಟ್ಟಿಗೆ ನೂಕಲ್ಪಟ್ಟವು. ಅವುಗಳ ಅಧಿಕೃತತೆ ಮತ್ತು ನೈತಿಕತೆಗಳು ಪ್ರಶ್ನಿತವಾದವು.

ಹೀಗೆ ಲೈಂಗಿಕತೆಯ ಸ್ವರೂಪವನ್ನು ವಸಾಹತುಶಾಹಿಯು ಮರುರಚನೆ ಮಾಡಿದ ಬಗೆ, ಹಾಗೂ ಸಾಹಿತ್ಯವನ್ನು ಪಥ್ಯವಾಗಿಸುವುದರ ಮೂಲಕ ಸಾಂಸ್ಕೃತಿಕವಾಗಿ ಮಾಡಿದ ರೀತಿಗಳು ಭಾರತೀಯ ಸಾಹಿತ್ಯಕ್ಕೆ ಆಘಾತವನ್ನುಂಟು ಮಾಡಿದವು. ಅಷ್ಟೇ ಅಲ್ಲ, ಅದು ರಚಿತವಾದ ಸಮಾಜಗಳನ್ನು ಕೂಡ ಕೀಳುಗಳೆದವು. ಮೇಲುನೋಟಕ್ಕೆ ಓರಿಯೆಂಟಲ್ ಪಾಂಡಿತ್ಯವು ನಮಗೆ ಬಹುದೊಡ್ಡ ಉಪಕಾರವನ್ನು ಮಾಡಿದಂತೆ ತೋರುತ್ತದೆ. ಸಂಸ್ಕೃತ ಮತ್ತು ಪರ್ಶಿಯನ್ ಭಾಷೆಗಳ ಮಹಾಕೃತಿಗಳನ್ನು ಅಜ್ಞಾತವಾಸದಿಂದ ಹೊರತೆಗೆದು ಪುನರುಜ್ಜೀವನಗೊಳಿಸಿ ಭಾರತೀಯ ಸಾಹಿತ್ಯ ಮತ್ತು ಪರಂಪರೆಯನ್ನು ಸದೃಢವಾಗಿಸಿದ್ದು ಅದರ ಮಹತ್ಸಾಧನೆಯೆನ್ನಲಾಗಿದೆ. ಆದರೆ ಈ ಅವಧಿಯಲ್ಲಿ ನಡೆದ, ಮಹಿಳೆಯರ ಸಾಹಿತ್ಯಿಕ ಚಟುವಟಿಕೆಗಳನ್ನು ಎಚ್ಚರಿಕೆಯಿಂದ ಪರಿಶೀಲಿಸಿದಾಗ ಒಂದು ಸಂಗತಿಯು ಸ್ಪಷ್ಟವಾಗುತ್ತದೆ. ಓರಿಯಂಟಲ್ ಚೌಕಟ್ಟಿನಲ್ಲಿ ಮೂಡಿಬಂದ ಪರಂಪರೆಯ ಚಿತ್ರವು ಅತ್ಯಂತ ಜಾಣತನದಿಂದ ಮಾಡಿದ ಮರುನಿರ್ಮಾಣವಾಗಿತ್ತು. ಮ್ಯಾಕ್ಸ್‌ಮುಲ್ಲರ್‌ನಂತಹ ವಿದ್ವಾಂಸರು, ಆರ್ಯರ ಆದರ್ಶೀಕೃತ ಚಿತ್ರವೊಂದನ್ನು ಬಹಳ ಜನಪ್ರಿಯಗೊಳಿಸಿದರು : "ಅವರು ಸುಶಿಕ್ಷಿತರೂ, ಶಿಸ್ತುಬದ್ಧರೂ ಸರಳಜೀವನವನ್ನು ನಡೆಸಿರುವವರೂ ಆಗಿದ್ದರು. ಅವರನ್ನು ಪವಿತ್ರವಾದ ಪುರೋಹಿತ ವರ್ಗವು ಸರಿಯಾದ ದಾರಿಯಲ್ಲಿ ನಡೆಸುತ್ತಿತ್ತು." ಓರಿಯಂಟಲ್ ವಿದ್ವಾಂಸರ ಪ್ರಕಾರ ಭಾರತದ ಇತಿಹಾಸದಲ್ಲಿ ಇದೊಂದು ಸ್ವರ್ಣಯುಗ. ಆಮೇಲೆ ಅಧಃಪತನದ ಕಾಲವು ಮೊದಲಾಯಿತೆಂದು ಅವರು ಹೇಳುತ್ತಾರೆ. ಆದರೆ ಈಚಿನ ಚರಿತ್ರಕಾರರು ಈ ನಿಲುವುಗಳನ್ನು ಒಪ್ಪುವುದಿಲ್ಲ. ಓರಿಯಂಟಲ್ ವಿದ್ವತ್ತು ಮರುರೂಪಿಸಿ ಅಧಿಕೃತಗೊಳಿಸಿದ ಭಾರತೀಯ ಭೂತಕಾಲವು ಆದರ್ಶೀಕರಿಸಲಾದ ಸ್ವರ್ಗವಾಗಿತ್ತು. ಅಷ್ಟೇ ಅಲ್ಲ, ಆ ಸಮಾಜವು ಯೂರೋಪಿನ ಸಮಾಜದಲ್ಲಿ ನಡೆಯುತ್ತಿದ್ದ ಆತಂಕಕಾರೀ ಬದಲಾವಣೆಗಳಿಂದ ಸ್ವಲ್ಪವೂ ಪ್ರಭಾವಿತವಾಗಿರಲಿಲ್ಲ. 'ಸಂಪ್ರದಾಯವಾದೀ ರಮ್ಯರು' (conservative Romantics) ಇಂಥ ಸಮಾಜಕ್ಕಾಗಿ ಹಾತೊರೆಯುತ್ತಿದ್ದರು. ಆದರೆ ನಿಜವಾಗಿ ನೋಡಿದರೆ ಹೀಗೆ

ರೂಪಿಸಲಾದ ಭಾರತೀಯ ಗತಕಾಲವು ಕೇವಲ ಬ್ರಾಹ್ಮಣ ಸಮಾಜವಾಗಿತ್ತು. ಅದರ ಪ್ರಕಾರ ಭಾರತೀಯ ಇತಿಹಾಸ ಮತ್ತು ಸಮಾಜಗಳು ಪ್ರಾಚೀನ ವೈದಿಕ ಪಠ್ಯಗಳಲ್ಲಿ ದೊರೆಯುವ ಸಂಗತಿಗಳಿಗೆ ಸೀಮಿತವಾಗಿತ್ತು.[೨೫] ಹೀಗೆ ಅತಿಯಾಗಿ ಬ್ರಾಹ್ಮಣೀಕೃತವಾದ ನೆಲೆಗಳನ್ನು ವೈಭವೀಕರಿಸುವುದರ ಪ್ರಭಾವ ಸಾಹಿತ್ಯ ರಚನೆ ಮತ್ತು ವಿಮರ್ಶೆಗಳ ಮೇಲೆಯೂ ಆಯಿತು. ಅದರಲ್ಲಿಯೂ ಸಮೀಪದ ಇತಿಹಾಸವನ್ನು ಅಧಃಪತನದ ಕಾಲವೆಂದು ಸುದೂರ ಗತಕಾಲವನ್ನು ಸ್ವರ್ಣಯುಗವೆಂದೂ ಕರೆಯುವುದರ ಮೂಲಕ ಭಾರತೀಯರಲ್ಲಿ ವರ್ತಮಾನದ ಬಗ್ಗೆ ಇರಸುಮುರಸು ಭಾವನೆಗಳನ್ನು ಮೂಡಿಸಲಾಗಿತ್ತು. ಪರಿಣಾಮವಾಗಿ ಈಚಿನ ಶತಮಾನಗಳ ಸಾಹಿತ್ಯವನ್ನು ಬೇಕೆಂದೇ ಕಡೆಗಣಿಸಲಾಯಿತು. ಚಾರಿತ್ರಿಕವಾಗಿ, ಪರಿವರ್ತನೆಯ ಗಾಳಿಗೆ ಒಡ್ಡಿಕೊಂಡಿದ್ದ ಅ-ಬ್ರಾಹ್ಮಣರು, ಜಾತ್ಯತೀತ ನೆಲೆಯವರು ರಚಿಸಿದ ಸಾಹಿತ್ಯ, ಅಷ್ಟೇ ಮುಖ್ಯವಾಗಿ ಮಹಿಳೆಯರು ಬರೆದ ಬಹುಪಾಲು ಸಾಹಿತ್ಯ ನಿರ್ಲಕ್ಷಿತವಾಯಿತು. ಏಕೆಂದರೆ ಇಂಥ ಸಾಹಿತ್ಯವು ಕೃಷ್ಣ-ರಾಧೆಯರಂತಹ ದೇವತೆಗಳನ್ನು ಅತಿ ಆತ್ಮೀಯತೆಯಿಂದ, ಅಗೌರವದಿಂದ ಚಿತ್ರಿಸುತ್ತಿತ್ತು. ಸಾಂಪ್ರದಾಯಿಕವಾಗಿ ಒಪ್ಪಿತವಾದ ಜಾತಿ ಹಾಗೂ ಲಿಂಗಗಳ ಶ್ರೇಣೀಕರಣವನ್ನು ಅಲ್ಲಗಳೆಯುತ್ತಿತ್ತು. ಮುದ್ದುಪಳನಿಯ ಕೃತಿಯೂ ಇದೇ ಕೆಲಸಮಾಡಿತ್ತು. ಆದ್ದರಿಂದಲೇ ಓರಿಯಂಟಲ್ ಪಂಡಿತರ ಚಿಂತನದಲ್ಲಿ ಈ ರೀತಿಯ ಕೃತಿಗಳಿಗೆ ಜಾಗ ಇರಲಿಲ್ಲ ಅಥವಾ 'ರಾಧಿಕ ಸಾಂತ್ವನಂ'ದ ಮರುಮುದ್ರಣ (೧೮೭೭)ದ ಸಂಪಾದಕರಾದ ವೆಂಕಟನರಸು ಮತ್ತು ಬ್ರೌನ್ ಅವರು ಮಾಡಿದಂತೆ, ಈ ಕಾಲಗಳನ್ನು ಕತ್ತರಿಪ್ರಯೋಗಕ್ಕೆ ಒಳಪಡಿಸಿ, ಹೊಸರೂಪಕ್ಕೆ ಅಳವಡಿಸಿ, ವಿಮರ್ಶಾತ್ಮಕ ಮಧ್ಯಪ್ರವೇಶಮಾಡಿ ಅವು ವೇದಕಾಲೀನ ಆದರ್ಶಗಳಿಗೆ ಹೊಂದಿಕೆಯಾಗುವಂತೆ ಮಾಡುತ್ತಿದ್ದರು. ಅನಂತರವೇ ಅವುಗಳನ್ನು ಮುದ್ರಿಸಿ ಚಲಾವಣೆಗೆ ಬಿಡುತ್ತಿದ್ದರು. ಕುತೂಹಲದ ಸಂಗತಿಯೆಂದರೆ ಇಂತಹ ಸಂಪಾದಕರು ಕೈಬಿಡುತ್ತಿದ್ದದು ಲೈಂಗಿಕವಾಗಿ ಅತಿ ವಿವರಣೆಯೆಂದೋ ಅಶ್ಲೀಲವೆಂದೋ ಕರೆಯಬಹುದಾದ ಭಾಗಗಳನ್ನು ಮಾತ್ರ ಅಲ್ಲ; ಆಕೆಯು ಪೀಠಿಕಾ ಪ್ರಕರಣದಲ್ಲಿ ಹೇಳಿದ ಸ್ವ-ವಿಷಯವನ್ನು ಕೂಡ ತೆಗೆದುಹಾಕಿದ್ದರು. "ಕೆಳ" ಜಾತಿಗೆ ಸೇರಿದ ಈ ಹೆಣ್ಣುಮಗಳು ತನ್ನ ವಂಶಕ್ಕೆ ಸೇರಿದ ಇತರ ಮಹಿಳೆಯರ ಕಲಾಪರಿಣತಿಯನ್ನು ವಿಸ್ತರಿಸಿ ಹೇಳಿದ್ದಳು. ತನ್ನ ವ್ಯಕ್ತಿತ್ವ ಮತ್ತು ಸಾಧನೆಗಳನ್ನು ಕುರಿತು ಆಗಿನ ಕಾಲಕ್ಕೆ ಅಪರೂಪವಾದ ಆತ್ಮವಿಶ್ವಾಸದಿಂದ ಬರೆದುಕೊಂಡಿದ್ದಳು. ಇವು ಆ ಸಂಪಾದಕರಿಗೆ ಅನುಚಿತವೆಂದು ತೋರಿದವು.

ಈ ಊಹಾಕಲ್ಪನೆಗೆ ಇನ್ನೂ ಕೆಲವು ಆಯಾಮಗಳಿವೆ. ಹತ್ತೊಂಬತ್ತನೆಯ ಶತಮಾನದ ಸಂಸ್ಕೃತಿ ಚರಿತ್ರೆಯನ್ನು, ಹಂತಹಂತವಾಗಿ ಜ್ಞಾನೋದಯವನ್ನು ಪಡೆದುಕೊಂಡ ಕಾಲವೆಂದು ವರ್ಣಿಸುವ ಪಂಥ ಒಂದಿದೆ. ಅದರ ಪ್ರಕಾರ ಈ ಶತಮಾನವು ಸಮಾಜ ಸುಧಾರಕರು ಮತ್ತು ಸಂಪ್ರದಾಯವಾದಿಗಳ ನಡುವೆ ಹೋರಾಟ ನಡೆದ ಕಾಲ. ಸಮಾಜ ಸುಧಾರಕರೆಂದರೆ ಮಹಿಳೆಯರ ಉದ್ಧಾರದ ಸಮಸ್ತ ಹೊಣೆಯನ್ನೂ ವಹಿಸಿಕೊಂಡ ಆಧುನಿಕರೆಂದು ಹೇಳಲಾಗುತ್ತಿದೆ. ಸಂಪ್ರದಾಯಪರರಾದರೋ ಮಹಿಳೆಯರ, ಕೆಳಜಾತಿಗಳವರ ಹಿತಾಸಕ್ತಿಗಳನ್ನು ವಿರೋಧಿಸುವವರು. ಅವರಿಗೆ ಸಾಮಾಜಿಕವಾದ, ಸೌಂದರ್ಯಶಾಸ್ತ್ರಕ್ಕೆ ಸಂಬಂಧಿಸಿದ ಸಂಪ್ರದಾಯಗಳನ್ನು ಅವು ಇರುವಂತೆಯೇ ಉಳಿಸಿಕೊಳ್ಳುವುದರಲ್ಲಿ ವಿಶೇಷ ಆಸಕ್ತಿ. ಈ ಸನ್ನಿವೇಶದಲ್ಲಿ ನಾಗರತ್ನಮ್ಮನವರು ಹಾಗೂ ಅವರು ಪ್ರತಿನಿಧಿಸಿದ ಸಾಂಸ್ಕೃತಿಕ ಶಕ್ತಿಗಳು ಯಾವುದೇ ನೆಲೆಯನ್ನು ಪಡೆಯಲಿಲ್ಲ. ಏಕೆಂದರೆ ಅವರು 'ಆಧುನಿಕ'ರಲ್ಲ, ಅಥವಾ ಆಧುನಿಕರು ಆ ಪದವನ್ನು ಅರ್ಥೈಸುತ್ತಿದ್ದ ರೀತಿಯಲ್ಲಿ 'ಸಂಪ್ರದಾಯಪರ'ರೂ ಅಲ್ಲ. ಈ ಎರಡು ಪ್ರಬಲ ನೆಲೆಗಳು ಅತ್ಯಂತ ಸಂಕೀರ್ಣವಾದ ಸನ್ನಿವೇಶವನ್ನು ಸರಳಗೊಳಿಸಿಬಿಟ್ಟವು. ಎಲ್ಲವೂ ಪ್ರಗತಿಶೀಲರು ಮತ್ತು ಪ್ರತಿಗಾಮಿಗಳ ನಡುವಿನ ಸರಳ ಹೋರಾಟದ ನೆಲೆಗೆ ಸೀಮಿತವಾದವು.

೫

ಬೆಂಗಳೂರು ನಾಗರತ್ನಮ್ಮನವರು ಮತ್ತು ವಾವಿಳ್ಲಸಂಸ್ಥೆಯವರು ಮಾಡಿದಂತಹ ಪ್ರಕಟಣ ಪ್ರಯತ್ನಗಳಿಗೆ ಹಾಗೂ ಅವರ ಪ್ರಕಟಣೆಗಳಿಗೆ ಬಹಿಷ್ಕಾರ ಹಾಕಿದ ನಂತರ ಮೂಡಿದ ಪ್ರತಿಭಟನೆಗಳನ್ನು ಒಂದು ನಿರ್ದಿಷ್ಟ ಹಿನ್ನೆಲೆಯಲ್ಲಿ ಮಾತ್ರ ಊಹಿಸಲು ಸಾಧ್ಯ. ರಾಷ್ಟ್ರೀಯ ಹೋರಾಟವೇ ಆ ಹಿನ್ನೆಲೆ. ಇಪ್ಪತ್ತನೆಯ ಶತಮಾನದ ಮೊದಲಿನಲ್ಲಿ ನಡೆದ ಸ್ವದೇಶೀ ಚಳುವಳಿಯು (೧೯೦೫-೧೯೦೮) ಆ ಹೋರಾಟದ ಮೂರ್ತರೂಪವಾಗಿತ್ತು. ವಾವಿಳ್ಲ ರಾಮಸ್ವಾಮಿ ಶಾಸ್ತ್ರಿಯವರು ಹಾಗೂ ಪುಸ್ತಕ ಬಹಿಷ್ಕಾರವನ್ನು ವಿರೋಧಿಸಿ ನ್ಯಾಯಾಲಯದಲ್ಲಿ ವಾದಿಸಿದ ಪೇರಿ ನಾರಾಯಣ ಮೂರ್ತಿಯವರು ಈ ಚಳುವಳಿಗೆ ಬೆಂಬಲ ನೀಡಿದ್ದರು. ಸ್ವದೇಶಿ ಚಳುವಳಿಯೂ ಏಕಕಾಲದಲ್ಲಿ ರಾಜಕೀಯ ಆಯಾಮ ಮತ್ತು ಸಾಂಸ್ಕೃತಿಕ ಆಯಾಮಗಳನ್ನು ಪಡೆದಿತ್ತು. ವಸಾಹತುಶಾಹಿಯ

ಆಳ್ವಿಕೆಯಲ್ಲಿ. ವ್ಯವಸ್ಥಿತವಾಗಿ ವಿವರ ವಿವರವಾಗಿ ನಾಶಮಾಡಲಾಗಿದ್ದ ಸಂಸ್ಕೃತಿ ಪ್ರದೇಶವೊಂದರ ಮರು ನಿರ್ಮಾಣ ಅದರ ಮುಖ್ಯ ಗುರಿಯಾಗಿತ್ತು. ಬೇರೆ ಮಾತುಗಳಲ್ಲಿ ಹೇಳುವುದಾದರೆ "ಭಾರತೀಯ ವ್ಯಕ್ತಿತ್ವ"ಕ್ಕೆ ಅಧಿಕೃತವಾದ ಸ್ಥಾನಮಾನಗಳನ್ನು ದೊರಕಿಸಿಕೊಡಲೆಂದು ಸ್ವದೇಶಿ ಚಳುವಳಿ ಪ್ರಯತ್ನಿಸುತ್ತಿತ್ತು. ವಿವಿಧ ಕ್ಷೇತ್ರಗಳಲ್ಲಿ, ವಸಾಹತುಶಾಹೀ ಪರಿಕಲ್ಪನೆಗಳಿಗೆ ವಿಮರ್ಶಾತ್ಮಕ ವಿರೋಧವನ್ನು ವ್ಯಕ್ತಪಡಿಸಲಾಗುತ್ತಿತ್ತು. ದೇಶದ ಸೃಜನಶೀಲಕಲ್ಪನಾಶಕ್ತಿಗೆ ಹೊಸ ರಕ್ತವನ್ನು ನೀಡುತ್ತಿದ್ದರು. ರಾಷ್ಟ್ರೀಯ ಭಾವನೆಗಳಿಗೆ ಅಭಿವ್ಯಕ್ತಿ ದೊರೆಯುತ್ತಿತ್ತು. ಚರಿತ್ರೆಗೆ ಮರುವ್ಯಾಖ್ಯಾನಗಳು ಮೂಡಿಬರುತ್ತಿದ್ದವು. ಅದುವರೆಗೂ ಅಸ್ತಿತ್ವದಲ್ಲಿದ್ದ ಧಾರ್ಮಿಕ ಉತ್ಸವಗಳಿಗೆ ಹಬ್ಬ ಹರಿದಿನಗಳಿಗೆ ಆವೇಶಭರಿತವಾದ ಹೊಸ ಅರ್ಥಗಳು ಒದಗಿಬರುತ್ತಿದ್ದವು. ಹೊಸ ಧಾರ್ಮಿಕ ಉತ್ಸವಗಳು ರೂಪಿತವಾಗುತ್ತಿದ್ದವು. ವಸಾಹತುಶಾಹೀ ಶಿಕ್ಷಣವು ಪಠ್ಯಕ್ರಮ ಹಾಗೂ ಪರೀಕ್ಷೆಗಳಿಗೆ ಕೊಡುತ್ತಿದ್ದ ಅತಿಮಹತ್ವವು, ವಿದ್ವಾಂಸರ ಕಟುಟೀಕೆಗೆ ಗುರಿಯಾಯಿತು. ಕಲಾವಿದರು ತಮಗೆ ಅಗತ್ಯವಾದ ಸ್ಫೂರ್ತಿ-ಪ್ರೇರಣೆಗಳಿಗಾಗಿ ದೇಶಿ ಪರಂಪರೆಗಳ ಕಡೆಗೆ ತಿರುಗಿದರು. ಈ ಹೋರಾಟದ ಒಂದು ನೆಲೆಯೂ ಹೆಂಗಸರ ದೇಹಗಳು ಮತ್ತು ಆತ್ಮಗಳ ಮೇಲೆ ಒಡೆತನವನ್ನು ಸ್ಥಾಪಿಸುವುದೂ ಆಗಿತ್ತು. ಈ ಸಂಗತಿಯನ್ನು ಟ್ಯಾಗೋರ್ ಅವರ 'ಘರೇ ಭೈರೇ' ಕಾದಂಬರಿಯು ಕಣ್ಣಿಗೆ ಕಟ್ಟುವಂತೆ ಚಿತ್ರಿಸುತ್ತದೆ. ಆದರೆ ಸ್ವದೇಶಿ ಕಾಳಜಿಗಳನ್ನು ಹೊಂದಿದ್ದ ಸಾಹಿತ್ಯದಲ್ಲಿ ಹೊಸದಾಗಿ ಚಿತ್ರಿತಳಾದ ಮಹಿಳೆಯು ಸಾಮಾನ್ಯವಾಗಿ ಮೇಲು ಜಾತಿಗೆ ಸೇರಿದವಳು, ಎಷ್ಟೋ ಬಾರಿ ವಿಧವೆ. ಅವಳ ಸಾಂಪ್ರದಾಯಿಕ ಪಾವಿತ್ರ್ಯ, ಶೀಲಗಳು ಕೇವಲ ವೈಯಕ್ತಿಕಗುಣಗಳಾಗಿ ಉಳಿದಿರಲಿಲ್ಲ. ಅವು ಇಡೀ ದೇಶದ ಶಕ್ತಿಕೇಂದ್ರಗಳಾಗಿ ಬಿಟ್ಟಿದ್ದವು. ಅವುಗಳಿಗೆ ದೇಶವನ್ನು ಸಮಗ್ರವಾಗಿ ಹಿಡಿದಿಡುವ, ಅದರ ಶಕ್ತಿ ಪರಿಶುದ್ಧತೆಗಳನ್ನು ಕಾಪಾಡಿಕೊಳ್ಳುವ ಸಾಮರ್ಥ್ಯ ಇತ್ತು.[೨೬] ಈ ಹೊಸ ಮಹಿಳೆಯ, ಪ್ರತಿಮೆಯು ಕೆಲವು ದಶಕಗಳವರೆಗೆ ಜನತೆಯ ಮನಸ್ಸಿನಲ್ಲಿ ಅಚ್ಚಳಿಯದೆ ಉಳಿಯಲಿದೆ. ಇದರ ಎದುರಿಗೆ ಬೇರೆ ಯಾವುದೇ ಸ್ತ್ರೀಪ್ರತಿಮೆಯು ಉಳಿಯಲು ಸಾಧ್ಯವಾಗಲಿಲ್ಲ.[೨೭]

'ರಾಧಿಕಾ ಸಾಂತ್ವನಂ'ದ ನಾಗರತ್ನಮ್ಮನವರು ಸಂಪಾದಿಸಿದ ಆವೃತ್ತಿಯು ಹೊರಬಂದಿದ್ದು ೧೯೧೦ರಲ್ಲಿ. ಅದರ ಮೇಲೆ ಹೇರಲಾಗಿದ್ದ ಬಹಿಷ್ಕಾರವನ್ನು ಹಿಂದೆ ತೆಗೆದುಕೊಂಡಿದ್ದು ೧೯೪೭ರಲ್ಲಿ. ಈ ವರ್ಷಗಳು, ನಾಚ್-ವಿರೋಧೀ ಚಳುವಳಿಯೆಂದು ಪ್ರಸಿದ್ಧವಾಗಿರುವ ಹೋರಾಟದ ಇತಿಹಾಸದಲ್ಲಿಯೂ ಮುಖ್ಯವಾದವು. ಈ ಚಳುವಳಿಯು ೧೮೯೦ರ ದಶಕದ ಮೊದಲ ವರ್ಷಗಳಲ್ಲಿ ಪ್ರಾರಂಭವಾಯಿತು. ಪಾಶ್ಚಾತ್ಯ ಶಿಕ್ಷಣ ಪಡೆದ ಸಮಾಜ ಸುಧಾರಕರು ಅದರ ನಾಯಕತ್ವ ವಹಿಸಿದ್ದರು. ಸಮಾಚಾರ ಮಾಧ್ಯಮಗಳು ಅದಕ್ಕೆ ಅಪಾರ ಪ್ರಚಾರ ನೀಡಿದವು. ಚಳುವಳಿಯ ಕಾರ್ಯಕರ್ತರು 'ನಾಚ್-ಹುಡುಗಿ'ಯರನ್ನು ಅವರ ಕಲೆಯನ್ನು ಕುರಿತು ಕಟುವಾದ ಲೇಖನಗಳನ್ನು ಬರೆದರು. ಅವರ ಪ್ರಕಾರ ಇದು ಹೆಣ್ತನಕ್ಕೆ ಮಾಡುವ ಅಪಚಾರವಾಗಿತ್ತು. ಭಾರತೀಯ ಕುಟುಂಬ ವ್ಯವಸ್ಥೆಯ ಪವಿತ್ರತೆಗೆ ಬಹುದೊಡ್ಡ ಅಪಾಯವನ್ನು ಅದು ಪ್ರತಿನಿಧಿಸುತ್ತಿತ್ತು. ಚಳುವಳಿಗಾರರು ನಾಚ್ವಾಲಿಯರ ನರ್ತಗಳನ್ನು ನಡೆಸುತ್ತಿದ್ದ ಪೋಷಕರ ಮನೆಗಳ ಮುಂದೆ ಪ್ರತಿಭಟನಾ ಪ್ರದರ್ಶನಗಳನ್ನು ನಡೆಸಿದರೂ ಅಂಥ ನರ್ತನಗಳನ್ನು ನಿಲ್ಲಿಸಬೇಕೆಂದು ಗವರ್ನರ್ ಜನರಲ್ ಅವರಿಗೆ ಮತ್ತು ವೈಸ್‌ರಾಯರಿಗೆ ಪದೇಪದೇ ದೂರು ನೀಡಿದರು. ಅಂತಿಮವಾಗಿ ೧೯೧೧ರಲ್ಲಿ "ಇಂತಹ ಪ್ರದರ್ಶನಗಳ ವಿರುದ್ಧ ರಾಷ್ಟ್ರವ್ಯಾಪಕವಾದ ಕ್ರಮಗಳನ್ನು ತೆಗೆದುಕೊಳ್ಳಬೇಕೆಂದು ಸೂಚನೆ ನೀಡುವ"[೨೮] ಆಜ್ಞೆಯನ್ನು ಹೊರಡಿಸಲಾಯಿತು. ದೇವದಾಸಿಯರನ್ನು ದೇವಾಲಯದ ಅಧಿದೇವತೆಗೆ ಅರ್ಪಿಸುವಾಗ ನಡೆಯುತ್ತಿದ್ದ ವೈಭವೋಪೇತವಾದ ಸಮಾರಂಭಗಳು ಕ್ರಮೇಣ ಕಡಿಮೆಯಾದವು. ಆದರೆ ೧೯೩೦ರಷ್ಟು ಹಿಂದೆಯೇ, ಈ ವಿಷಯದಲ್ಲಿ ಮಂಡಿತವಾಗಿದ್ದ ಮುತ್ತುಲಕ್ಷ್ಮಿ ರೆಡ್ಡಿಯವರ ನಿರ್ಣಯವು, ಕಾನೂನಾಗಿ ಸಮ್ಮತಿಯನ್ನು ಪಡೆದಿದ್ದು ೧೯೪೭ರಲ್ಲಿಯೇ. ಇದರ ಫಲವಾಗಿ ದೇವದಾಸಿಯರನ್ನು ಅರ್ಪಿಸುವ ಸಂಪ್ರದಾಯವು ಬಹಿಷ್ಕೃತವಾಯಿತು. ಮುತ್ತುಲಕ್ಷ್ಮಿರೆಡ್ಡಿಯವರು ಒಬ್ಬ ಗಣಿಕೆಯ ಮಗಳು. ೧೯೨೦ ಮತ್ತು ೩೦ರ ದಶಕಗಳಲ್ಲಿ ಈ ಚಳುವಳಿಯೂ ಹೆಚ್ಚು ಕ್ರಾಂತಿಕಾರಕವಾದ ಪ್ರಜಾಸತ್ತಾತ್ಮಕವಾದ ತಿರುವನ್ನು ಪಡೆದುಕೊಂಡಿತು. ಇದಕ್ಕೆ 'ಆತ್ಮ-ಗೌರವ ಚಳುವಳಿ'ಯು (self respect movement) ನೀಡಿದ ಒತ್ತಾಸೆಯು ಒಂದು ಮುಖ್ಯ ಕಾರಣ. ಮುತ್ತುಲಕ್ಷ್ಮಿರೆಡ್ಡಿ ಮತ್ತು ಇ.ವಿ. ರಾಮಸ್ವಾಮಿನಾಯ್ಕರ್ ಅವರ ನಾಯಕತ್ವ ಮತ್ತೊಂದು ಕಾರಣ. ದೇವದಾಸಿಯರಿಗೆ ಹಲವು ಬಗೆಯ ಹಕ್ಕುಗಳು ಬೇಕೆಂದು ಬೇಡಿಕೆಗಳನ್ನು ಸಲ್ಲಿಸಲಾಯಿತು. ಆಸ್ತಿಯ ಮೇಲಿನ ಹಕ್ಕು, ಮದುವೆಗಳನ್ನು ಕಾನೂನುಬದ್ಧಗೊಳಿಸಬೇಕೆಂಬ ಬೇಡಿಕೆ, ಅವರ ಮಕ್ಕಳಿಗೆ, 'ಕಾನೂನುಬದ್ಧವಾಗಿ' ಹುಟ್ಟಿದ ಇತರ ಮಕ್ಕಳಿಗೆ ಇರುವ ಹಕ್ಕುಗಳೆಲ್ಲವೂ ಇರಬೇಕೆಂಬ ಬೇಡಿಕೆ ಇವುಗಳಲ್ಲಿ ಮುಖ್ಯವಾದವು. ಆದರೆ ಮೇಲುಜಾತಿಯ ಗೃಹಿಣಿಯರ ಜೀವನಕ್ರಮದಲ್ಲಿ ಸುಧಾರಣೆಯನ್ನು ತರಬಯಸುದಾಗಿದ್ದ

ಬಾಲ್ಯವಿವಾಹ, ವಿಧವಾವಿವಾಹ, ವರದಕ್ಷಿಣೆ ಮುಂತಾದ ಸಮಸ್ಯೆಗಳು, ಕಾಂಗ್ರೆಸ್‌ನ ಬೆನ್ನೆಲುಬಾಗಿದ್ದ ಭೂಮಾಲಿಕವರ್ಗದಿಂದ ಹೆಚ್ಚಿನ ಬೆಂಬಲವನ್ನು ಪಡೆಯಲಿಲ್ಲ. ತಮ್ಮ ಬದುಕಿನ ಸ್ವರೂಪವನ್ನು ಬುಡಮೇಲು ಮಾಡುವ ಇಂಥ ಕ್ರಮಗಳಿಗೆ ಅವರು ಉಗುರುಬೆಚ್ಚಗಿನ ಸ್ವಾಗತವನ್ನು ನೀಡಿದರು; ಅಷ್ಟೆ. ಅದೇನೇ ಇರಲಿ, 'ಆತ್ಮಗೌರವ ಚಳುವಳಿ'ಎಂದರೆ "ಸುಶೀಲೆಯಾದ ಗೃಹಿಣಿ"ಯೇ ಎನ್ನುವುದರಲ್ಲಿ ಯಾವ ಅನುಮಾನವೂ ಇಲ್ಲ.[೨೯]

೧೯೨೦, ೧೯೩೦ರ ದಶಕಗಳಲ್ಲಿ ದೇವದಾಸಿ ಪದ್ಧತಿಯೂ ಸಂಪೂರ್ಣವಾಗಿ ಕಾನೂನುಬಾಹಿರವಾಯಿತು. ಅವರ ನೃತ್ಯವು ದೇವಾಲಯಗಳಿಂದ ಹಾಗೂ ಖಾಸಗೀ ಪೋಷಕರ ಮನೆಗಳಿಂದ ಬಹಿಷ್ಕೃತವಾಯಿತು. ಸರಿಸುಮಾರು ಅದೇ ಕಾಲದಲ್ಲಿ ಅವಳ ಕಲೆಯ ಪುನರುಜ್ಜೀವನ ಮತ್ತು ಪುನಃಸೃಷ್ಟಿಗಳೂ ನಡೆದವು. ಅದರಲ್ಲಿಯೂ ಆಗ ಅಪನಿಂದೆಗೆ ಪಾತ್ರವಾಗಿದ್ದ 'ಸಾದಿರ್' ಪ್ರದರ್ಶನಗಳು, ಹೊಸದಾದ, ಹೆಚ್ಚು 'ಪರಿಶುದ್ಧ'ವಾದ ರೂಪದಲ್ಲಿ ಮರುಹುಟ್ಟು ಪಡೆದವು. ಅದೇ ಇಂದು ರಾಷ್ಟ್ರೀಯ ನೃತ್ಯಪ್ರಕಾರವೆಂದು ಹೆಸರುವಾಸಿಯಾಗಿರುವ ಭರತನಾಟ್ಯ.[೩೦] ಸಾಮಾನ್ಯವಾಗಿ ಈ ಯಶಸ್ಸನ್ನು ರುಕ್ಮಿಣೀದೇವಿ ಅರುಂಡೇಲ್ ಅವರ ಬಿಡುವರಿಯದ ದುಡಿಮೆಗೆ ನೀಡಲಾಗುತ್ತಿದೆ. 'ಕಲಾಕ್ಷೇತ್ರ' ಅವರ ದುಡಿಮೆಯ ಕೇಂದ್ರಬಿಂದುವಾಗಿತ್ತು. ಆದರೆ ಈ ನೃತ್ಯ ಸಂಪ್ರದಾಯವನ್ನು 'ಪುನರುಜ್ಜೀವನಗೊಳಿಸುವ' ಪ್ರಯತ್ನಕ್ಕೆ ಬೆಂಬಲ ನೀಡಿದ ಸಂಸ್ಥೆಗಳು ಕಾಂಗ್ರೆಸ್ ಮತ್ತು ಥಿಯಸಾಫಿಕಲ್ ಸೊಸೈಟಿ. ಇವೆರಡೂ ಬಹುವಾಗಿ ಬ್ರಾಹ್ಮಣರಿಂದ ತುಂಬಿಹೋಗಿದ್ದವು. ತಮ್ಮ ರಾಷ್ಟ್ರೀಯತಾವಾದೀ ಚಿಂತನೆಯ ಸಾಂಸ್ಕೃತಿಕ ನೆಲೆಗಳನ್ನು ರೂಪಿಸಿಕೊಳ್ಳಲು ಅವರು ಆನಂದ ಕುಮಾರಸ್ವಾಮಿ, ಟ್ಯಾಗೋರ್, ಇ.ಬಿ. ಹ್ಯಾವೆಲ್ ಮುಂತಾದ ಚಿಂತಕರನ್ನು ಅವಲಂಬಿಸಿದ್ದರು.[೩೧] ಅರುಂಡೇಲ್ ಅವರನ್ನು ಆಯ್ಕೆಮಾಡಿ ತರಬೇತಿ ನೀಡಿದ್ದು ಕೂಡ ಥಿಯೋಸಾಫಿಕಲ್ ಸೊಸೈಟಿಯ ಅನಿಬೆಸೆಂಟ್ ಮತ್ತಿತರ ಮುಂದಾಳುಗಳೇ ಆಗಿದ್ದರು. ಆಕೆಯು 'ವಿಶ್ವಮಾತೆ'ಯ ಅಭಿವ್ಯಕ್ತಿಗೆ ಸೂಕ್ತಮಾಧ್ಯಮವೆಂದು ಅವರು ತೀರ್ಮಾನಿಸಿದ್ದರು. ೧೯೩೦ರಲ್ಲಿ ರುಕ್ಮಿಣೀದೇವಿಯವರು ಥಿಯೋಸಾಫಿಕಲ್ ಸೊಸೈಟಿಯ ಸಂಪೂರ್ಣ ಬೆಂಬಲದೊಂದಿಗೆ ನೃತ್ಯ ಹಾಗೂ 'ರಾಷ್ಟ್ರೀಯ' ಸಂಸ್ಕೃತಿಯ ಕ್ಷೇತ್ರದಲ್ಲಿ ಸಾರ್ವಜನಿಕ ಮನ್ನಣೆ ಪಡೆದ ವ್ಯಕ್ತಿಯಾಗಿ ಮೂಡಿಬಂದರು ....ಕಲೆಗಳಲ್ಲಿ, ಅದರಲ್ಲಿಯೂ ಭರತನಾಟ್ಯದಲ್ಲಿ, ಭಾರತೀಯ ಪುನರುಜ್ಜೀವನದ ಪ್ರಬಲ ಪ್ರತಿಪಾದಕರೆಂದು ಅವರನ್ನು ಗುರುತಿಸಲಾಯಿತು. ಭರತನಾಟ್ಯವು, ಭಾರತೀಯ ಮಹಿಳೆಯ ಪ್ರಾಚೀನ ಆಧ್ಯಾತ್ಮಿಕ ಪರಂಪರೆಯ ಮೂರ್ತರೂಪವಾಯಿತು.[೩೨]

ಕಲೆಗಳಲ್ಲಿ ಇದೆಯೆಂದು ಹೇಳಲಾಗಿರುವ ಈ ರಾಷ್ಟ್ರೀಯ ಪರಂಪರೆಯ ಖಚಿತ ಸ್ವರೂಪವನ್ನು ಇನ್ನಷ್ಟು ವಿಶ್ಲೇಷಣೆಗೆ ಒಳಪಡಿಸಬೇಕಾಗಿದೆ. ಭರತನಾಟ್ಯವನ್ನು ಕುರಿತಂತೆ ದೊಡ್ಡ ವಿದ್ವಾಂಸರೂ, ಸ್ವತಃ ನರ್ತಕಿಯೂ ಆದ ಪದ್ಮಾ ಸುಬ್ರಹ್ಮಣ್ಯಂ ಅವರು ತಮ್ಮ ವಿದ್ವತ್‌ಪೂರ್ಣ ಅಧ್ಯಯನದ ಪೀಠಿಕೆಯಲ್ಲಿ ಈ ವಾದವನ್ನು ಮಂಡಿಸುತ್ತಾರೆ : "ಪ್ರಾಚೀನ ಭಾರತದಲ್ಲಿ ನೃತ್ಯವೂ ಕೇವಲ ನಾಟಕದ ಭಾಗವಾಗಿತ್ತು. ಆದರೆ ನಾಟಕವಾದರೋ ಮೊದಲಿನಿಂದ ಕೊನೆಯವರೆಗೆ (ಅಂಗಭಂಗಿಗಳ, ಅಂಗಚಲನೆಗಳ) ನರ್ತನವೇ ಆಗಿರುತ್ತಿತ್ತು. ನಿಜವಾದ ಒಂದೂ ರಂಗಭೂಮಿಯಲ್ಲಿ ನೃತ್ಯ ಮತ್ತು ನಾಟಕಗಳ ನಡುವೆ ಅಷ್ಟು ಖಚಿತವಾದ ಗಡಿಗೆರೆಗಳೇನೂ ಇರಲಿಲ್ಲ. ಆರ್ಯರ, ವೇದಕಾಲದ ಯಜ್ಞಗಳು ಮತ್ತು ಅನಾರ್ಯರ ಆಗಮಿಕ ಪೂಜೆಗಳ ಸಂಯೋಗದಿಂದ ಮೈದಳೆದಿರುವ ಒಂದೂ ಧರ್ಮದ ಹಾಗೆಯೇ, ಒಂದೂ ರಂಗಭೂಮಿ ಕೂಡ ನೃತ್ಯ ಮತ್ತು ನಾಟಕಗಳ ಅವಿಚ್ಛಿನ್ನ ಪ್ರದರ್ಶನವಾಗಿ ರೂಪುದಳೆಯಿತು. ನೃತ್ಯವು ದ್ರಾವಿಡರ ಹಾಗೂ ಇತರ ಅನಾರ್ಯರ ಪರಮಪ್ರಿಯ ಮನರಂಜನೆಯಾಗಿತ್ತೆಂದು ತೋರುತ್ತದೆ. ಹಾಗೆಯೇ ನಾಟಕವು ತನ್ನ ಸಾಹಿತ್ಯಿಕ ಸೌಂದರ್ಯದಿಂದ ಆರ್ಯರಿಗೆ ಪ್ರಿಯವಾಗಿತ್ತು..... ಆರ್ಯರು ತಮ್ಮ ನಾಟಕಗಳೊಳಗೆ 'ನೃತ್ಯ' ಕಲೆಯನ್ನು ಯಾವ ಸಂಕೋಚವೂ ಇಲ್ಲದೆ ಸೇರಿಸಿಕೊಂಡಿರುವಂತೆ ಕಾಣುತ್ತದೆ."[೩೩] ಆಕೆ ಒಂದು ವಿಷಯವನ್ನು ಒಪ್ಪಿಕೊಳ್ಳುತ್ತಾರೆ: ಇಂದು ಭರತನಾಟ್ಯವೆಂದು ಕರೆಸಿಕೊಳ್ಳುತ್ತಿರುವ ಕಲಾಪ್ರಕಾರವು ಆ ಪದದ ನಿಜವಾದ ಅರ್ಥದಲ್ಲಿ ನಾಟ್ಯವೂ ಅಲ್ಲ, ಭರತನು ಹಾಕಿಕೊಟ್ಟ ನಿಯಮಗಳನ್ನು ಪಾಲಿಸುವುದು ಇಲ್ಲ.[೩೪] ವಾಸ್ತವವಾಗಿ ಅದನ್ನು ೧೯೩೦ರ ವರೆಗೆ ಸಾದಿರ್ ಎಂದೇ ಕರೆಯುತ್ತಿದ್ದರು.[೩೫] ಅದೂ ಅಲ್ಲದೆ ಅದು ಅನಂತರದ ಬೆಳವಣಿಗೆಯಲ್ಲಿ ನಾಟ್ಯಶಾಸ್ತ್ರದಲ್ಲಿ ಲಾಸ್ಯ ಎಂದು ಹೆಸರಿಸುವ 'ರೂಪ'ಗಳಿಗೆ ಹೆಚ್ಚು ಒತ್ತುಕೊಟ್ಟಿತು. ಲಾಸ್ಯವು ಮನಮೋಹಕವಾದ ಅಂಗಭಂಗಿಗಳಿಗೆ ಮೀಸಲಾದುದು. ಲಾಸ್ಯಕ್ಕೆ ವಿರುದ್ಧವಾದ ನೃತ್ಯಗತಿಯು 'ತಾಂಡವ'. ಅದರದು ಶಕ್ತಿಯುತವಾದ ಚಲನವಿನ್ಯಾಸ.[೩೬] ಅದೇನೇ ಇರಲಿ, ಭರತನ ನಾಟ್ಯಶಾಸ್ತ್ರದಿಂದ ಪ್ರಾರಂಭವಾಗಿ ಇಂದಿನ ಎಲ್ಲ ನೃತ್ಯ

ಪ್ರಕಾರಗಳವರೆಗೆ ಕೆಲವು ಸರ್ವಸಮಾನಗಳಿವೆಯೆಂಬುದರಲ್ಲಿ ಪದ್ಮಾ ಅವರಿಗೆ ಯಾವ ಅನುಮಾನವೂ ಇಲ್ಲ. "ನಾಟ್ಯಶಾಸ್ತ್ರವನ್ನು ಓದಿರುವವರಿಗೆ, ಭಾರತದ ಪ್ರಮುಖ ನೃತ್ಯಶೈಲಿಗಳೆಂದು ಕರೆಯಲಾಗುವ ವಿಭಿನ್ನ ಪ್ರಕಾರಗಳು ಒಂದೇ ಬಣ್ಣದ ಬೇರೇಬೇರೆ ಛಾಯೆಗಳಂತೆ ಭಾಸವಾಗುತ್ತವೆ.'[೩೭]

ಸಾದಿರ್ ಕ್ರಮೇಣ ಭರತನಾಟ್ಯವಾಗಿ ಪರಿವರ್ತನೆ ಹೊಂದಿ ಗೌರವಪಾತ್ರವಾದ ರೀತಿಯನ್ನು ಪದ್ಮಾ ಅವರು ಸಾಕಷ್ಟು ವಿವರವಾಗಿ ಹೇಳುತ್ತಾರೆ: "ಸಾದಿರ್" ಹದಿನಾಲ್ಕನೆಯ ಶತಮಾನದ ಅಡವು ತಂತ್ರವನ್ನು ಆಧರಿಸಿರುವ ನೃತ್ಯಪ್ರಕಾರ. ದಿನಕಳೆದಂತೆ ನೀತಿಭ್ರಷ್ಟವಾದ ವೈಷ್ಣವ ಸಂಪ್ರದಾಯಗಳು ಅದನ್ನು ತಮ್ಮದಾಗಿ ಮಾಡಿಕೊಂಡವು.[೩೮] ಅದರಲ್ಲಿ ಇದ್ದ ಉನ್ನತವಾದ ತಾತ್ವಿಕ ಮತ್ತು ಧಾರ್ಮಿಕ ಅಂಶಗಳನ್ನು ತೆಗೆದುಹಾಕಲಾಯಿತು. ಅವುಗಳ ಜಾಗದಲ್ಲಿ ಕಚ್ಚಾ, ಇಂದ್ರಿಯಪರ ಅಂಶಗಳನ್ನು ಸೇರಿಸಲಾಯಿತು.[೩೯] ದೇವಸ್ಥಾನಗಳಲ್ಲಿ ಅದರ ಪ್ರದರ್ಶನದ ಮೇಲೆ ಹಾಕಿದ ಬಹಿಷ್ಕಾರವು, ಅದರ ಪ್ರತಿಪಾದಕರಿಗೆ ಬಿಸಿಮುಟ್ಟಿಸಿತು. ಅನಂತರ, ಕಲಾಭಿಮಾನಿಗಳು ಅದರ ಕುಂದುಕೊರತೆಗಳನ್ನು ತೆಗೆದುಹಾಕಿ, ಹೊಸ ಮೆರಗು ಕೊಟ್ಟು, 'ಭರತನಾಟ್ಯ'ವೆಂದು ಮರುನಾಮಕರಣ ಮಾಡದೇ ಇದ್ದರೆ ಆ ಪ್ರಕಾರವೇ ಲುಪ್ತವಾಗಿ ಹೋಗುತ್ತಿತ್ತು. ಆಗ ನಾವು ಚರಂಡಿಯ ಕೆಸರಿನಲ್ಲಿ ಬಿದ್ದಿಯೆನ್ನುವ ಕಾರಣಕ್ಕಾಗಿ ಅಮೂಲ್ಯರತ್ನವನ್ನು ತ್ಯಾಗ ಮಾಡಿದ ಮೂರ್ಖರಾಗುತ್ತಿದ್ದೆವು. ಭರತನಾಟ್ಯದ ಪುನರುಜ್ಜೀವನದಲ್ಲಿ ಭರತನಿಗೆ ಹಾಗೂ ಅವನ ನಾಟ್ಯಶಾಸ್ತ್ರಕ್ಕೆ ಅನನ್ಯವಾದ ಪಾತ್ರ ಇದೆ. ಒಂದು ಕಾಲದಲ್ಲಿ ಉನ್ನತವರ್ಗದ ಕುಟುಂಬಗಳ ಮಹಿಳೆಯರು ಈ ನಾಟ್ಯದ ಪ್ರದರ್ಶನವನ್ನು ನೋಡುವುದಕ್ಕೂ ಅವಕಾಶಕೊಡುತ್ತಿರಲಿಲ್ಲ. ಈಗ ಲೋಕವು ಇನ್ನೊಂದು ತುದಿಗೆ ಚಲಿಸಿದೆ. ಈಗ ಭರತನಾಟ್ಯವನ್ನು ಕಲಿಯುವುದು ಪ್ರತಿಷ್ಠೆಯ ಸಂಕೇತವಾಗಿಬಿಟ್ಟಿದೆ. ಈ ಪವಾಡವು ಹೇಗೆ ಜರುಗಿತು? ಪ್ರಾಯಶಃ ಅತ್ಯಂತ ಮುಖ್ಯವಾದ ಉಪಾಯವೆಂದರೆ, ಮಹರ್ಷಿ ಭರತನ ಹೆಸರನ್ನು ಆ ಪ್ರಕಾರದೊಂದಿಗೆ ಜೋಡಿಸಿದ್ದು. ಹೀಗೆ ಸಾದಿರ್‌ನಲ್ಲಿ ಇದ್ದ ಆಶಯ ಮತ್ತು ಆಕೃತಿಗಳೇ ಭರತನಾಟ್ಯವೆಂಬ ಹೆಸರಿನಲ್ಲಿ ಮರುಹುಟ್ಟು ಪಡೆದವು, ಗೌರವಾರ್ಹವಾದವು.[೪೦] ಆದರೆ, ಸುನಿಲ್ ಕೊಠಾರಿಯವರ ಪ್ರಕಾರ ಭರತನಾಟ್ಯದ ಪುನರುಜ್ಜೀವನಕ್ಕೆ ರುಕ್ಮಿಣಿ ಅರುಂಡೇಲ್ ಅವರ ವೈಯಕ್ತಿಕ ಆಕರ್ಷಣೆ ಹಾಗೂ ಪರಿಶುದ್ಧವಾದ ಸೌಂದರ್ಯ ಪ್ರಜ್ಞೆಗಳೇ ಮುಖ್ಯ ಕಾರಣ : "ಆಕೆ ಅನುಪಮ ಸುಂದರಿ, ಶ್ರೇಷ್ಠ ಅಭಿರುಚಿಗಳನ್ನು ಹೊಂದಿದ್ದವರು, ಉನ್ನತ ಮಟ್ಟದ ಸೌಂದರ್ಯ ಗ್ರಹಣಶಕ್ತಿಯನ್ನು ಪಡೆದವರು.... ಆಕೆ ನೃತ್ಯದಲ್ಲಿದ್ದ ಅಹಿತಕರ ಅಂಶಗಳನ್ನು ತೆಗೆದುಹಾಕಿದರು. ಅವರು ಆಧ್ಯಾತ್ಮಿಕವಾದ ಆಶಯಗಳನ್ನು ಒಳಗೊಂಡ ಹಾಡುಗಳನ್ನು ಹುಡುಕಿತೆಗೆದರು. ಭರತನಾಟ್ಯಕ್ಕೆ ಅಂಟಿಕೊಂಡಿದ್ದ ಅಶ್ಲೀಲತೆ ಹಾಗೂ ಇಂದ್ರಿಯ ಲೋಲುಪತೆಗಳ ಕೆಸರನ್ನು ತೆಗೆಯುವುದರಲ್ಲಿ ಅವರು ಯಶಸ್ವಿಯಾದರು. ಭರತನಾಟ್ಯವು ಕಚ್ಚಾ ಆಗಿ ಉಳಿಯಲಿಲ್ಲ. ಆ ಸಂದರ್ಭದಲ್ಲಿ ಅದಕ್ಕೆ ಮೊದಲು ಇದ್ದ ಭಕ್ತಿಯ ಆಯಾಮವನ್ನು ಮರಳಿ ತರುವುದು ಅಗತ್ಯವಾಯಿತು.'[೪೧] ಸ್ವತಃ ಅರುಂಡೇಲ್ ಅವರು ಈ ಪರಿವರ್ತನೆಯನ್ನು ಮತ್ತೊಂದು ದೃಷ್ಟಿಯಿಂದ ನೋಡಿದರು. ಭರತನಾಟ್ಯವು "ಭಾರತೀಯರ ಜೀವನವೇದಾಂತದ ಒಂದು ಭಾಗ.... ಈ ಅಭಿಜಾತ ಕಲೆಯ ಅಭಿಜಾತ ಗುಣವು ಹಳ್ಳಿಯಲ್ಲಿ, ದೇವಾಲಯದಲ್ಲಿ, ಜಾನಪದದ ಕುಣಿತದಲ್ಲಿ, ಸಮೂಹ ನೃತ್ಯದಲ್ಲಿ, ನೃತ್ಯ ನಾಟಕಗಳಲ್ಲಿ ಮತ್ತು ಏಕವ್ಯಕ್ತಿ ಪ್ರದರ್ಶನಗಳಲ್ಲಿ.... ಎಲ್ಲ ಕಡೆಯು ಅಚ್ಚಳಿಯದೆ ಉಳಿದುಕೊಳ್ಳುತ್ತದೆ."[೪೨] ಇಪ್ಪತ್ತು ವರ್ಷಗಳ ಚಿಕ್ಕ ಅವಧಿಯಲ್ಲಿ ಆಮೂಲಾಗ್ರ ಪರಿವರ್ತನೆಯನ್ನು ಪಡೆದುಕೊಂಡಿತು. ಅದು ರಾಷ್ಟ್ರವೆಂಬ ಪರಿಕಲ್ಪನೆಯ ಆಧ್ಯಾತ್ಮಿಕ ತಳಹದಿಯನ್ನು ರೂಪಿಸುವಷ್ಟು ಪ್ರಬಲವಾದ ಶಕ್ತಿಯಾಯಿತು. ಸಂಸ್ಕೃತಿಯೊಳಗೆ ಸರ್ವವ್ಯಾಪ್ತಿಯಾದ, ಆಳವಾಗಿ ಬೆರೆತುಹೋದ ಬೇರುಗಳನ್ನು ಬಿಡುವುದರಲ್ಲಿ ಅದು ಯಶಸ್ವಿಯಾಯಿತು.

೬

ಈ ಲೇಖನದ ಓದುಗರಲ್ಲಿ ಈಗಲೂ ಅನುಮಾನ ಉಳಿದಿರಬಹುದು. 'ರಾಧಿಕಸಾಂತ್ವನಂ' ಮೇಲೆ ಹಾಕಲಾದ ಬಹಿಷ್ಕಾರವನ್ನು ೧೯೪೭ರಲ್ಲಿಯೇ ಹಿಂದೆ ತೆಗೆದುಕೊಂಡಿದ್ದರೆ, ೧೯೫೨ರಲ್ಲಿ ಅದು ಮರುಮುದ್ರಿತವಾಗಿದ್ದರೆ, ೧೯೮೦ರ ದಶಕದ ಕೊನೆಯ ವರ್ಷಗಳಲ್ಲಿ ಅದರ ಒಂದೇ ಒಂದು ಪ್ರತಿಯೂ ಏಕೆ ಸಿಗಲಿಲ್ಲವೆನ್ನುವುದೇ ಆ ಅನುಮಾನ.[೪೩] ಸಾಹಿತ್ಯ ವಿಮರ್ಶಕರು ಈಗಲೂ ಅದನ್ನು ಏಕೆ ಟೀಕಿಸುವರೆನ್ನುವ ಅನುಮಾನವು ಅವರಲ್ಲಿ ಮೂಡಬಹುದು. ಅಂಥ ಓದುಗರು ಕೆಳಗಿನ ಸಂಗತಿಗಳನ್ನು ಗಮನಿಸಬೇಕು.

ಬ್ರಿಟಿಷ್ ಸರ್ಕಾರವು ವಿಧಿಸಿದ್ದ ಬಹಿಷ್ಕಾರವನ್ನು ಸ್ವಾತಂತ್ರ್ಯ ಬಂದ ಕೂಡಲೇ ತೆಗೆದುಹಾಕಿದ್ದು ರಾಷ್ಟ್ರೀಯತಾವಾದೀ ಕ್ರಿಯೆಯೆಂಬ ಸಂಗತಿಯು ಸ್ಪಷ್ಟವಾಗಿದೆ. ಆದರೆ ಬ್ರಿಟಿಷ್ ಚಕ್ರಾಧಿಪತ್ಯದ ಹಿತಾಸಕ್ತಿಗಳು ಮತ್ತು ಭಾರತ 'ರಾಷ್ಟ್ರ'ದ ಹಿತಾಸಕ್ತಿಗಳ ನಡುವೆ, ಯಾವಾಗಲೂ ಅಂತಹ ಪರಸ್ಪರ ವಿರೋಧವೇನೂ

ಇರಲಿಲ್ಲ. ಅವೆರಡನ್ನು ರೂಪಿಸಿದ ತಾತ್ವಿಕತೆಗಳು ಹೆಚ್ಚುಕಡಿಮೆ ಒಂದೇ ಬಗೆಯದಾಗಿದ್ದವು. ಆದ್ದರಿಂದಲೇ ಲಿಂಗ, ಜಾತಿ, ವರ್ಗ, ಸಾಹಿತ್ಯಿಕ ಅಥವಾ ಸೌಂದರ್ಯಾತ್ಮಕ ಗುಣ, ಅಭಿರುಚಿ ಮುಂತಾದ ವಿಷಯಗಳನ್ನು ಕುರಿತು **'ರಾಧಿಕಾ ಸಾಂತ್ವನಂ'** ಮತ್ತು ಅದರ ಇತಿಹಾಸವು, ಮುಂದೆ ಮಾಡುವ ಪ್ರಶ್ನೆಗಳು ಅಂದಿನಂತೆಯೇ ಇಂದಿಗೂ ವಿವಾದಾಸ್ಪದವಾಗಿಯೇ ಉಳಿದಿವೆ.೪೪

ಮುದ್ದುಪಳನಿಯ ಜೀವನ, ಬರವಣಿಗೆ ಹಾಗೂ **'ರಾಧಿಕಾ ಸಾಂತ್ವನಂ'** ಕೃತಿಯ ಏಳುಬೀಳಿನ ಹಾದಿಯನ್ನು ಭಾರತದಲ್ಲಿ ಮಹಿಳೆಯರ ಸಾಹಿತ್ಯ ಸೃಷ್ಟಿಗೆ ಒಡ್ಡಿದ ಅನ್ಯೋಕ್ತಿ ದೃಷ್ಟಾಂತವಾಗಿ ಪರಿಗಣಿಸಬಹುದು. ಅಷ್ಟೇಕೆ ಬರವಣಿಗೆ ಎನ್ನುವ ಉದ್ಯಮದ ಸ್ವರೂಪಕ್ಕೆ ಇದು ಪ್ರತಿಮೆಯಾಗಿದೆ. ಏಕೆಂದರೆ ಇಂದು ಸಾಹಿತ್ಯದ ಸೃಷ್ಟಿ ಮತ್ತು ಉಪಭೋಗವೆಂಬ ಚಟುವಟಿಕೆಗಳನ್ನು ಆವರಿಸಿರುವ ಹಲವು ಪ್ರಶ್ನೆಗಳು ಇಲ್ಲಿ ಮುನ್ನೆಲೆಗೆ ಬರುತ್ತವೆ.

ಮಹಿಳೆಯರ ಬರವಣಿಗೆಯ ರಚಿತವಾಗುತ್ತಿದ್ದ ಸಂದರ್ಭವನ್ನು, ವ್ಯಾಖ್ಯಾನಕಾರರ ಹಿತಾಸಕ್ತಿಗಳಿಗೆ ಅನುಗುಣವಾಗಿ ಪುನಾರಚನೆ ಮಾಡಿದ ಬಗೆಯು ಇಲ್ಲಿ ಪ್ರಶ್ನಿತವಾಗುತ್ತದೆ. ಎಂದರೆ, ವರ್ಗ, ಜಾತಿ, ಲಿಂಗ, ಚಕ್ರಾಧಿಪತ್ಯ ರಾಷ್ಟ್ರ ಮುಂತಾದವುಗಳ ಹಿನ್ನೆಲೆಯಲ್ಲಿ ತಾತ್ವಿಕನೆಲೆಗಳು ಬದಲಾದ ಹಾಗೆಲ್ಲಾ, ಈ ಸಾಹಿತ್ಯ ಸೃಷ್ಟಿಯ ಸಂದರ್ಭಗಳು ಹೊಸ ವ್ಯಾಖ್ಯಾನಗಳನ್ನು ಪಡೆದುಕೊಳ್ಳುತ್ತಿದ್ದವು. ಅಷ್ಟೇ ಅಲ್ಲ, ಮಹಿಳೆಯರ ಕೃತಿಗಳನ್ನು ಓದುತ್ತಿದ್ದ ಸಂದರ್ಭವನ್ನು ಇದೇ ರೀತಿಯಲ್ಲಿ, ಹಿತಾಸಕ್ತಿಗಳಿಗೆ ಅನುಗುಣವಾಗಿ ಪುನಾರಚನೆ ಮಾಡಲಾಗುತ್ತಿತ್ತು.

ಮಹಿಳೆಯರ ಬರವಣಿಗೆಯು ಸ್ವೀಕೃತವಾಗುತ್ತಿದ್ದ ರೀತಿ ಮತ್ತು ಅವುಗಳ ಪ್ರಭಾವವನ್ನು ನಿರ್ಧರಿಸುತ್ತಿದ್ದ, ಸಂಸ್ಕೃತಿ ರಾಜಕಾರಣದ ನೆಲೆಗಳೂ ಇಲ್ಲಿ ಪ್ರಶ್ನಿತವಾಗುತ್ತವೆ. ಸಾಹಿತ್ಯಿಕ ಅಭಿರುಚಿ ಮತ್ತು ಸಾಹಿತ್ಯದ ಪಠ್ಯವಸ್ತುಗಳ ನಡುವಿನ ಸಂಬಂಧವು ಇಲ್ಲಿ ಪ್ರಸ್ತುತವಾಗುತ್ತದೆ.

ಮುದ್ದುಪಳನಿಯ ಕಾವ್ಯವನ್ನು ಮರುಮುದ್ರಣ ಮಾಡುವ ನಾಗರತ್ನಮ್ಮನವರ ಪ್ರಯತ್ನಗಳಲ್ಲಿ, ನಮಗೆ ಕಾಣಸಿಗುವುದು, ಭಾರತದಲ್ಲಿ ಅಲಿಖಿತವಾಗಿಯೇ ಉಳಿದಿರುವ ಸ್ತ್ರೀವಾದೀ ವಿಮರ್ಶೆಯ ಇತಿಹಾಸದ ಒಂದು ಘಟನೆ ಮಾತ್ರವಲ್ಲ, ಅದಕ್ಕಿಂತ ಮುಖ್ಯವಾದ ಇನ್ನೊಂದು ಸಂಗತಿಯು ಇಲ್ಲಿ ಗಮನಾರ್ಹವಾಗಿದೆ. 'ಸಾಹಿತ್ಯಿಕ ಪಠ್ಯ'ವನ್ನು 'ಮಹಿಳೆ'ಯೊಬ್ಬಳು ಓದುವುದು ಅಗತ್ಯ ಮತ್ತು ಅದರಿಂದ ಮೂಡಬಹುದಾದ ವಿಶಿಷ್ಟ ಒಳನೋಟಗಳು ನಮಗೆ ವೇದ್ಯವಾಗುತ್ತದೆ. ಇಂತಹ ಘಟನೆಯು ಆಧುನಿಕ ಭಾರತದ ಇತಿಹಾಸದ ಅವಧಿಯಲ್ಲಿಯೇ ನಡೆಯಿತೆನ್ನುವುದು ಉಪಯುಕ್ತವಾದ ಅಂಶ. ಓರಿಯಂಟಲಿಸಂ, ಸಾಮ್ರಾಜ್ಯಶಾಹಿ, ಹೊಸ ತಿಳುವಳಿಕೆಯ ಹುಟ್ಟು, ರಾಷ್ಟ್ರೀಯತಾವಾದ ಮುಂತಾದ ಹತ್ತು ಹಲವು ಸಂಗತಿಗಳ ನೆರವಿನಿಂದ ಪಿತೃಪ್ರಧಾನ ವ್ಯವಸ್ಥೆಗಳು ಇನ್ನಷ್ಟು ಪ್ರಬಲವಾಗಿ ಬೇರೂರುವುದು ಸಾಧ್ಯವಾಯಿತು. ಪ್ರಸ್ತುತ ಲೇಖನವು ಒಳಗೊಂಡಿರುವ ಸಂಸ್ಕೃತಿ–ರಾಜಕಾರಣದ ನೆಲೆಗಳನ್ನು, ಸರಿಯಾಗಿ ಗ್ರಹಿಸಬೇಕಾದರೆ ಈ ಸಮಗ್ರ ಚೌಕಟ್ಟು ಯಾವಾಗಲೂ ನಮ್ಮ ಮನಸ್ಸಿನಲ್ಲಿರಬೇಕು.

ಟಿಪ್ಪಣಿಗಳು

೧. ಬೆಂಗಳೂರು ನಾಗರತ್ನಮ್ಮ – ಕೊನೆಯ ಮಾತು, ಮುದ್ದುಪಳನಿಯವರ ರಾಧಿಕ ಸಾಂತ್ವನಂ., ಬೆಂಗಳೂರು ನಾಗರತ್ನಮ್ಮನವರಿಂದ ಸಂಪಾದಿತ, (ಮದ್ರಾಸ್ : ವಾವಿಳ್ಲ ರಾಮಸ್ವಾಮಿ ಶಾಸ್ತ್ರುಲು ಅಂಡ್ ಸನ್ಸ್ ೧೯೧೦) ಪುಟ ೮೦, ಪುಟ IV

೨. ಕಂದುಕೂರಿ ವೀರೇಶಲಿಂಗಂ, ಆಂಧ್ರ ಕವುಲ ಚರಿತ್ರಮು (ಆಂಧ್ರ ಕವಿಗಳ ಚರಿತ್ರೆ) ಸಂಪುಟ III ಆಧುನಿಕ ಕವುಲು (ಆಧುನಿಕ ಕವಿಗಳು) ೧೮೮೭, ಮರುಮುದ್ರಣ (ರಾಜಮಂಡ್ರಿ ಹಿತಕಾರಣಿ ಸಮಾಜಂ, ೧೯೫೦) ಪುಟ ೧೮೨.

೩. ಬೆಂಗಳೂರು ನಾಗರತ್ನಮ್ಮ ಮುಂದು ಮಾಟ (ಮುನ್ನುಡಿ) ರಾಧಿಕಾ ಸಾಂತ್ವನಂ ಕೃತಿಯಲ್ಲಿ ಪುಟ ೧೧ ಓಲೆಗರಿ ಪ್ರತಿಯು ಈಗ ಎಲ್ಲಿಯೂ ಸಿಗುತ್ತಿಲ್ಲ. ತಂಜಾವೂರಿನ ರಾಜಾಸ್ಥಾನದಲ್ಲಿ ರಚಿತವಾದ ಅನೇಕ ಮುಖ್ಯ ಕೃತಿಗಳ ಮೂಲಪ್ರತಿಗಳನ್ನು ಇಂದಿಗೂ ಸಂಗ್ರಹಿಸಿರುವ, ಆ ಊರಿನ ಸರಸ್ವತೀ ಮಹಲ್ ಪುಸ್ತಕ ಭಂಡಾರದಲ್ಲಿಯೂ ಅದು ಲಭ್ಯವಿಲ್ಲ.

೪. ವೆಂಕಟನರಸು ಮತ್ತು ಬ್ರೌನ್ ಅವರು ಸಂಪಾದಿಸಿದ ಆವೃತ್ತಿಯಲ್ಲಿ ಕತ್ತರಿ ಪ್ರಯೋಗ ಮಾಡಲಾಗಿರುವ ಕೆಲವು ಪದ್ಯಗಳನ್ನು, ಸೂಸಿಥಾರು ಮತ್ತು ಕೆ. ಲಲಿತಾ ಅವರು ಸಂಪಾದಿಸಿದ, Women writing in India ಎಂಬ ಪುಸ್ತಕದಲ್ಲಿ ಅನುವಾದಿಸಿ ನೀಡಲಾಗಿದೆ. (ದೆಹಲಿ : ಆಕ್ಸ್‌ಫರ್ಡ್ ಯೂನಿವರ್ಸಿಟಿ ಪ್ರೆಸ್ ೧೯೯೧). ಪುಟ ೧೧೮–೧೨೦

೫. ನಾಗರತ್ನಮ್ಮನವರು ತಿರುವಯ್ಯಾರಿಯಲ್ಲಿ ಈಗ ಪ್ರತಿವರ್ಷವು ನಡೆಯುತ್ತಿರುವ ತ್ಯಾಗರಾಜರ ಆರಾಧನೆಯ ಸಂಪ್ರದಾಯವನ್ನು ಪ್ರಾರಂಭಿಸಿದರು. ಅದೇ ಊರಿನಲ್ಲಿ ವೈಗ್ಯೆ ನದಿಯದಡದಲ್ಲಿ ತ್ಯಾಗರಾಜರ ಸಮಾಧಿಯನ್ನು ಸ್ಥಾಪಿಸಲು ನೆರವು ನೀಡಿದರು. ಆ ಸಮಾಧಿಯ ಎದುರಿನಲ್ಲಿ ಸ್ವತಃ ನಾಗರತ್ನಮ್ಮನವರ ಸಮಾಧಿ ಇದೆ. ತ್ಯಾಗರಾಜರ ಸಮಾಧಿಗೆ ಹೋಲಿಸಿದರೆ ಇದು ಬಹಳ ಚಿಕ್ಕದು. ಇದನ್ನು ಕಾಪಾಡಿಕೊಳ್ಳುವವರು ಈಗ ಯಾರೂ ಇಲ್ಲ. ೧೯೯೦ ಮೊದಲ ಭಾಗದಲ್ಲಿ ನಾವು ಅಲ್ಲಿಗೆ ಹೋಗಿದ್ದೆವು.

೬. ಕೃಷ್ಣಸ್ವಾಮಿ ಅಯ್ಯಂಗಾರ್, ಸರ್ಕಾರಿ ಆಜ್ಞೆಯ ಜೊತೆಯಲ್ಲಿ ಅಡಕಗೊಳಿಸಿದ ಟಿಪ್ಪಣಿ, ಆಜ್ಞೆಯ ಸಂಖ್ಯೆ ೩೫೫, ಗೃಹ ಸಾರ್ವಜನಿಕ, ರಹಸ್ಯ ದಿ. ೨೨.೪.೧೯೨೭; ಸಂಸ್ಕೃತ ಮತ್ತು ತೆಲುಗು ಪ್ರತಿಗಳ ಪ್ರಕಾಶಕರಾದ ವಿ. ವೆಂಕಟೇಶ್ವರ ಶಾಸ್ತ್ರುಲು ಮತ್ತು ಮಕ್ಕಳು ಸಂಸ್ಥೆಯ ದೂರು (ಸಂಸ್ಥೆಯ ಸ್ಥಾಪನೆ ೧೮೫೬)

೭. ವೀರೇಶಲಿಂಗಂ, ಪೂರ್ವೋಲ್ಲೇಖ, (೨), ಪುಟ ೧೪೩

೮. ನಾಗರತ್ನಮ್ಮ, ಮುಂದುಮಾಟ ಪೂರ್ವೋಲ್ಲೇಖ (೨), ಪುಟ iii

೯. ಹಿಂದೆ ಹೆಸರಿಸಿದ ಅರ್ಜಿಯಲ್ಲಿ ಲಿಖಿತ (೬), ೨೨.೪.೨೭

೧೦. ಹಿಂದೆ ಹೆಸರಿಸಿದ ಅರ್ಜಿಯಲ್ಲಿ ಲಿಖಿತ (೬), ೨೨.೪.೨೭

೧೧. ಹಿಂದೆ ಹೆಸರಿಸಿದ ಅರ್ಜಿಯಲ್ಲಿ ಲಿಖಿತ (೬), ೨೨.೪.೨೭

೧೨. ಮುದ್ದುಪಳನಿ, ರಾಧಿಕಾ ಸಾಂತ್ವನಂ, ಬೆಂಗಳೂರು ನಾಗರತ್ನಮ್ಮನವರಿಂದ ಸಂಪಾದಿತ, ವಾವಿಳ್ಲ ವೆಂಕಟೇಶ್ವರಲು ಅವರಿಂದ ಹಿನ್ನುಡಿ, (ಮದ್ರಾಸು ; ವಾವಿಳ್ಲ ರಾಮಸ್ವಾಮಿ ಶಾಸ್ತ್ರುಲು ಅಂಡ್ ಸನ್ಸ್ ೧೯೫೨)
ಈ ಹಿನ್ನುಡಿಯು ಸಂಪೂರ್ಣವಾಗಿ ಪ್ರಕಾಶಕರ ದೊಡ್ಡಸ್ತಿಕೆಯನ್ನು ವರ್ಣಿಸಲು ಮೀಸಲಾಗಿದೆ. ರಾಷ್ಟ್ರೀಯ ಚಳುವಳಿಯ ಬಗ್ಗೆ ಅವರಿಗಿದ್ದ ಬದ್ಧತೆ, ತೆಲುಗು ಸಾಹಿತ್ಯದ ಪರವಾಗಿ ಅವರು ನಡೆಸಿದ ಹೋರಾಟ ಮುಂತಾದ ಸಂಗತಿಗಳು ವಿವರವಾಗಿ ಪ್ರಸ್ತಾಪವಾಗಿವೆ. ಎಲ್ಲಿಯೂ ಕೂಡ ನಾಗರತ್ನಮ್ಮನವರ ಪ್ರಸ್ತಾಪ ಬರುವುದಿಲ್ಲ.

೧೩. ಈ ಸಂಗತಿಗೆ ಇರುವ ಒಂದು ಅಪವಾದವೆಂದರೆ ಯಂಡಮೂರಿ ಸತ್ಯನಾರಾಯಣ ರಾವ್ ಅವರು ಬರೆದಿರುವ ವಿಮರ್ಶೆ; ಈ ಮಹಾಕಾವ್ಯದ ಪದ್ಯಗಳು ಬಹಳ ಸುಂದರವಾಗಿ ರಚಿತವಾಗಿವೆ. ಅದರಲ್ಲಿ ನವರಸಗಳು ಅಭಿವ್ಯಕ್ತವಾಗಿವೆ. ಈ ಕಾಲದಲ್ಲಿ ನಾವು ಮಹಿಳೆಯ ಬಗ್ಗೆ ಹೊಂದಿರುವ ದೃಷ್ಟಿಕೋನದ ಹಿನ್ನೆಲೆಯಲ್ಲಿ ನೋಡಿದಾಗ ಅವು ಕೆಳ ಅಭಿರುಚಿಯನ್ನು ಹಾಗೂ ಅಸಂಸ್ಕೃತವಾದವೆಂದು ತೋರಬಹುದು. ಆದರೆ ಹಾಗೆ ತೋರಲು ನಮ್ಮ ಕಾಲದ ಸಂಸ್ಕೃತಿಯ ಕುಂದುಕೊರತೆಗಳು ಕಾರಣವೇ ವಿನಾ ಕವಿಯ ಅಥವಾ ಕಾವ್ಯದ ದೋಷಗಳಲ್ಲ. ಶಾರದಾ ಧ್ವಜಂ; ತಂಜಾವೂರು ರಾಜುಲಕಾಲಮ್ಲೋನಿ ತೆಲುಗು ಸಾಹಿತ್ಯ ಚರಿತ್ರೆ (ಹೈದರಾಬಾದ್ ; ಸಾಹಿತ್ಯ ಅಕಾಡೆಮಿ, ವಿವರಗಳಿಲ್ಲ ೧೯೭೦?), ಪುಟ ೨೩೧

೧೪. 'ಸಾದಿರ್'ಅನ್ನು ಸಂಯೋಜಿಸಿದ ಯಶಸ್ಸು ತಂಜಾವೂರು ಸಹೋದರರಿಗೆ ಸೇರುವುದೆನ್ನುವುದು ಜನಜನಿತವಾಗಿರುವ ನಂಬಿಕೆ. ಅವರ ಮುಖ್ಯ ಸಾಧನೆಗಳು ಹತ್ತೊಂಬತ್ತನೆಯ ಶತಮಾನದ ಮೊಲದ ದಶಕಗಳಲ್ಲಿ ನಡೆದವು. ಆದರೆ ಈ ವಿಷಯದಲ್ಲಿ ಪದ್ಮಾ ಸುಬ್ರಹ್ಮಣ್ಯಂ ಅವರು ವಿಭಿನ್ನವಾದ ಅಭಿಪ್ರಾಯವನ್ನು ಮಂಡಿಸಿದ್ದಾರೆ. ಅವರ ಪ್ರಕಾರ ಸಾದಿರ್‌ನ ಸಂಯೋಜನೆಯ ಯಶಸ್ಸು, ತಂಜಾವೂರಿನ ನಾಯಕ ರಾಜವಂಶದ ಅವಧಿಯಲ್ಲಿ ಅದರಲ್ಲಿಯೂ ಪ್ರತಾಪಸಿಂಹನ (೧೭೩೯-೬೩) ಆಸ್ಥಾನದಲ್ಲಿ ಇದ್ದ ಕಾಶೀನಾಥ ಮುಂತಾದ ಗೀತ ಸಂಯೋಜಕ-ನೃತ್ಯ ಸಂಯೋಜಕರಿಗೆ ಸಲ್ಲಬೇಕು. ಹಾಗೆ ಮಾಡುವುದರಿಂದ ನೃತ್ಯ ಮತ್ತು ಸಂಗೀತ ರಚನೆಯ ಇತಿಹಾಸದಲ್ಲಿ ಖಚಿತವಾದ ಕಾಲಘಟ್ಟಗಳನ್ನು ಗುರುತಿಸುವುದರಲ್ಲಿರುವ ಹಲವು ಸಮಸ್ಯೆಗಳನ್ನು ಬಿಡಿಸಬಹುದೆಂದು ಅವರು ಹೇಳುತ್ತಾರೆ. Bharata's Art ; Then and Now (ಮದ್ರಾಸ್ ನೃತ್ಯೋದಯ, ೧೯೭೯)

೧೫. ನೋಡಿ, ವಿಜಯಾದಹೇಜ, Andal and her path of Love (Albany : Suny Press, 1990) ಅದರಲ್ಲಿ ಸಂತಳಾದ ಆಂಡಾಳ್ ಆಳ್ವಾರ್ ಅವರ ಬದುಕು ಮತ್ತು ಕಾವ್ಯವನ್ನು ಕುರಿತ ಉಪಯುಕ್ತವಾದ ಬರವಣಿಗೆ ದೊರೆಯುತ್ತದೆ.

೧೬. ಹದಿನಾರನೆಯ ಶತಮಾನದ ಪ್ರಸಿದ್ಧ ತೆಲುಗು ಅಭಿಜಾತ ಕೃತಿಯಾದ 'ಹಂಶವಿಶಂತಿ'ಯನ್ನು ಇಪ್ಪತ್ತನೆಯ ಶತಮಾನದ ಮೊದಲ ದಶಕಗಳಲ್ಲಿ ಬಹಿಷ್ಕರಿಸಿದಾಗ, ತಾವು ನೀಡಿದ ಪ್ರಸಿದ್ಧ ದೂರಿನಲ್ಲಿ ಅದರ ಪ್ರಕಾಶಕರು ಹೀಗೆ ಹೇಳಿದರು: "ಇಲ್ಲಿರುವ ಕಥೆಗಳು ಇಪ್ಪತ್ತು ಕುಶಲಕಲೆಗಳು ಮತ್ತು ವೃತ್ತಿಗಳನ್ನು ವರ್ಣಿಸುತ್ತವೆ. ಓದುಗರಿಗೆ ಹದಿನಾರನೆಯ ಶತಮಾನದ ಜನಜೀವನ ಮತ್ತು ವರ್ತನೆಗಳನ್ನು ಪರಿಚಯ ಮಾಡಿಕೊಡುವುದೇ ಅವುಗಳ ಉದ್ದೇಶ. ಈ ಕೃತಿಯು ವಿವಿಧ ವೃತ್ತಿಗಳಿಗೆ ಸಂಬಂಧಪಟ್ಟ ಅಪರೂಪದ ತಾಂತ್ರಿಕ ಪದಗಳ ಖಜಾನೆಯಾಗಿದೆ. ಹಲವು ಉದ್ಯೋಗಗಳಿಗೆ ವಿಶಿಷ್ಟವಾದ ಈ ವಾಗ್ರೂಢಿಗಳು ಈಗ ಆಂಶಿಕವಾಗಿಯಾದರೂ ಒಟ್ಟು ತೆಲುಗು ಭಾಷೆಯ ಪದಕೋಶದ ಭಾಗವಾಗಿ ಪರಿಣಮಿಸಿವೆ."
ಸರ್ಕಾರೀ ಆಜ್ಞೆ ಸಂಖ್ಯೆ ೩೫೫, ದಿ: ೨೨.೪.೧೯೨೭. ರಹಸ್ಯ ದಾಖಲೆ. ೧೮೫೬ರಲ್ಲಿ ಸ್ಥಾಪಿತವಾದ ವಿ ರಾಮಸ್ವಾಮಿ ಶಾಸ್ತ್ರುಲು ಮತ್ತು ಮಕ್ಕಳು ಸಂಸ್ಥೆಯ ಮಾಲಿಕರಾದ ವಾವಿಳ್ಲ ವೆಂಕಟೇಶ್ವರ ಶಾಸ್ತ್ರುಲು ಅವರ ಅರ್ಜಿ ರಾಷ್ಟ್ರೀಯ ಪತ್ರಾಗಾರ, ಮದ್ರಾಸ್.

17. Comparative Indian literature, Vol.I ಕೆ.ಎಂ. ಜಾರ್ಜ್ ಅವರಿಂದ ಸಂಪಾದಿತ (ಮದ್ರಾಸ್ ; ಮ್ಯಾಕ್ ಮಿಲನ್ ಅಂಡ್ ಕಂಪನಿ, ೧೯೮೪) ಪುಟ ೩೦೭

೧೮. ಸುಶೀಲ್ ಕುಮಾರ್ ಡೇ, ಅರ್ಲಿ ಹಿಸ್ಟರಿ ಆಫ್‌ದ ವೈಷ್ಣವ ಫೇತ್ ಅಂಡ್ ಮೂವ್‌ಮೆಂಟ್ ಇನ್ ಬೆಂಗಾಲ್ ಪುಟ ೩೭೯ ಉದ್ಧೃತ : ರಣಜಿತ್ ಗುಹಾ ಅವರಿಂದ; ಸಬಾಲ್ಟ್ರನ್ ಸ್ಟಡೀಸ್–VI (ದೆಹಲಿ : ಆಕ್ಸ್‌ಫರ್ಡ್ ಯೂನಿವರ್ಸಿಟಿ ಪ್ರೆಸ್ ೧೯೮೯) ಪುಟ ೨೫೮-೯.

೧೯. ಸ್ವತಃ ಮುದ್ದುಪಳನಿ ಕೂಡ, ಮೈಸೂರು ದೊರೆಗಳ ಆಸ್ಥಾನಕ್ಕೆ ಹೋಗುವುದು ಅನಿವಾರ್ಯವಾಯಿತೆಂದು ನಮಗೆ ತಂಜಾವೂರಿನಲ್ಲಿ ತಿಳಿದುಬಂತು.

೨೦. ಈಗ ಇಂಗ್ಲಿಷ್ ಮನೋಧರ್ಮ, ಇಂಗ್ಲಿಷ್‌ತನ ಎಂದು ಕರೆಯಲಾಗುತ್ತಿರುವ ಗುಣಸಂಕೀರ್ಣವನ್ನು ರೂಪಿಸುವುದರಲ್ಲಿ ಭಾರತ ಮತ್ತು ಇತರ ವಸಾಹತುಗಳು ವಹಿಸಿದ ಪಾತ್ರದ ವ್ಯವಸ್ಥಿತವಾದ ಸಂಶೋಧನೆಯು ಈಗ ತಾನೇ ಪ್ರಾರಂಭವಾಗಿದೆ. ಈ ಕ್ಷೇತ್ರಕ್ಕೆ ಸಂಬಂಧಿಸಿದಂತೆ ನಾವು ಎಂ. ಚಂದ್ರಿಕಾ ಅವರಿಗೆ ಕೃತಜ್ಞರಾಗಿದ್ದೇವೆ. ಏಕೆಂದರೆ ಅವರು ೧೮೫೭ರ ದಂಗೆ ಹಾಗೂ ಝಾನ್ಸಿರಾಣಿ ಲಕ್ಷ್ಮೀಬಾಯಿಯ ಪ್ರತಿನಿಧೀಕರಣಕ್ಕೆ ಸಂಬಂಧಿಸಿದಂತೆ ನಡೆಸಿರುವ ಸಂಶೋಧನೆಯಲ್ಲಿ, ಹತ್ತೊಂಬತ್ತನೆಯ ಶತಮಾನದ ಉತ್ತರಾರ್ಧದಲ್ಲಿ, ಈ ಎರಡು ದೇಶಗಳ ನಡುವೆ ನಡೆದ ಪ್ರಕ್ರಿಯೆಗಳ ಬಗೆಗಿನ ನಮ್ಮ ತಿಳಿವಳಿಕೆಯನ್ನು ಅಪಾರವಾಗಿ ಹೆಚ್ಚಿಸಿದ್ದಾರೆ.

೨೧. ಪತ್ರ ೨೫.೯.೧೮೨೮ರಂದು ಡಬ್ಲ್ಯು. ಫ್ರೇಜರ್ ಅವರು ಮುಖ್ಯ ಕಾರ್ಯದರ್ಶಿಯವರಿಗೆ ಬರೆದಿದ್ದು, ಪೋರ್ಟ್ ವಿಲಿಯಂ (ಈಗ ಮದ್ರಾಸು) ಉದ್ಧೃತ : ಎಚ್. ಶಾರ್ಪ್, ಸೆಲಕ್ಷನ್ಸ್ ಫ್ರಂ ಎಜುಕೇಶನಲ್ ರೆಕಾರ್ಡ್ಸ್ Vol. I (ಕಲ್ಕತ್ತಾ : ಸೂಪರಿಂಟೆಂಡೆಂಟ್, ಗವರ್ನ್‌ಮೆಂಟ್ ಪ್ರಿಂಟಿಂಗ್, ಇಂಡಿಯಾ, ೧೯೨೩) ಪುಟ ೧೩.

೨೨. ಜೆ. ಫಾರಿನ್ ಅವರು ಮಾಡಿರುವ ಕಾರ್ಯ ನಿರ್ದೇಶಕ (Minute) ೨೮.೮.೧೯೩೪ ಉದ್ಧೃತ : ಬಿ.ಕೆ. ಬೋಮನ್-ಬೆಹ್ರಾಮ್ ಅವರಿಂದ, ಎಜುಕೇಶನಲ್ ಕಾಂಟ್ರುವರ್ಸಿಸ್ ಆಫ್ ಇಂಡಿಯಾ : ದಿ ಕಲ್ಚರಲ್ ಕಾಂಕ್ವೆಸ್ಟ ಆಫ್ ಇಂಡಿಯಾ ಅಂಡರ್ ಬ್ರಿಟಿಷ್ ಇಂಪೀರಿಯಲೀಸಂ (ಬಾಂಬೆ ತಾರಾಪೂರ್ ವಾಲಾ ಸನ್ಸ್ ಅಂಡ್ ಕಂಪನಿ ೧೯೪೨) ಪುಟ ೧೩.

೨೩. ಗೌರಿ ವಿಶ್ವನಾಥನ್, "ದಿ ಬಿಗಿನಿಂಗ್ಸ್ ಆಫ್ ಇಂಗ್ಲಿಷ್ ಲಿಟರರಿ ಸ್ಟಡಿ ಇನ್ ಬ್ರಿಟಿಷ್ ಇಂಡಿಯಾ". ಆಕ್ಸ್‌ಫರ್ಡ್ ಲಿಟರರಿ ರಿವ್ಯೂ ಸಂಪುಟ ೯ (೧೯೮೮). ಪುಟ ೨-೨೬, ಅವರು ಥಾಮಸ್ ಮಕಾಲೆ ಮತ್ತು ಚಾರ್ಲ್ಸ್ ಟ್ರೆವೆಲ್ಯನ್ ಅವರು ಉಲ್ಲೇಖಿಸುತ್ತಾರೆ :ಪಾರ್ಲಿಮೆಂಟರಿ ಅಫೇರ್ಸ್ ಗ್ರೇಟ್ ಬ್ರಿಟನ್ ಸಂ. ೩೨, ೧೮೫೨-೫೩.

೨೪. ಭಾರತೀಯ ಸಾಹಿತ್ಯದ ಉಗಮವನ್ನು ಕುರಿತ ಈ ವಿಚಾರಧಾರೆಗೆ ಸಂಬಂಧಿಸಿದ ಹೆಚ್ಚು ವಿವರವಾದ ಚರ್ಚೆಗೆ ನೋಡಿ : ಸೂಸಿ ಥಾರು, "ದಿ ಅರೇಂಜ್‌ಮೆಂಟ್ ಆಫ್ ಅನ್ ಅಲೈಯನ್ಸ್ : ಇಂಗ್ಲಿಷ್ ಅಂಡ್ ದ ಮೇಕಿಂಗ್ ಆಫ್ ಮಾಡರ್ನ್ ಇಂಡಿಯನ್ ಲಿಟರೇಚರ್ಸ್" ಶ್ವೇತಾ ಜೋಶಿಯವರಿಂದ ಸಂಪಾದಿತವಾದ ರೀಥಿಂಕಿಂಗ್ ಇಂಗ್ಲಿಷ್ (ದೆಹಲಿ, ಟ್ರಿಯಾಂಕ, ೧೯೯೧)

೨೫. ನೋಡಿ. ಉಮಾ ಚಕ್ರವರ್ತಿ, "ವಾಟೆವರ್ ಹ್ಯಾಪನ್ಡ್ ಟು ವೇದಿಕ್ ದಾಸಿ?" ಕುಂಕುಂ ಸಂಗಾರಿ ಮತ್ತು ಸುದೇಶ್ ವೈದ್ ಅವರಿಂದ ಸಂಪಾದಿತವಾದ ರೀ ಕ್ಯಾಸ್ಟಿಂಗ್ ವಿಮೆನ್ : ಎಸ್ಸೇಸ್ ಇನ್ ಕಲೋನಿಯಲ್ ಹಿಸ್ಟರಿ (ದೆಹಲಿ: ಕಾಳಿ ಫಾರ್ ವಿಮೆನ್ ೧೯೮೯, ಪುಟಗಳು ೨೭-೮೭

೨೬. ಹೆಣ್ಣಿನ, ಈ ಹೊಸ ಆದರ್ಶೀಕರಣ ಮತ್ತು ಅದಕ್ಕೆ ಸಂಬಂಧಿಸಿದ ರಾಜಕೀಯವನ್ನು ಕುರಿತ ವಿವರವಾದ ಚರ್ಚೆಗಾಗಿ ನೋಡಿ : "ದಿ ಟ್ವೆಂಟಿಯತ್ ಸೆಂಚುರಿ : ವಿಮೆನ್ ರೈಟಿಂಗ್ ದ ನೇಶನ್" ಸೂಸಿಥಾರು ಮತ್ತು ಕೆ. ಲಲಿತಾ ಅವರಿಂದ ಸಂಪಾದಿತವಾದ "ವಿಮೆನ್ ರೈಟಿಂಗ್ ಇನ್ ಇಂಡಿಯಾ ವಾಲ್ಯೂಂ II ಟ್ವೆಂಟಿಯತ್ ಸೆಂಚುರಿ : (ನ್ಯೂಯಾರ್ಕ್ : ದಿ ಫೆಮಿನಿಸ್ಟ್ ಪ್ರೆಸ್, ಬರಲಿದೆ)

೨೭. ಈ ಬಗ್ಗೆ ಕೆ. ಲಲಿತಾ ಅವರ ವಾದ ಈ ರೀತಿ ಇದೆ. ಗುರಜಾಡ ಅಪ್ಪಾರಾವ್ ಅವರು ೧೮೯೨ರಲ್ಲಿ ರಚಿಸಿದ ಕನ್ಯಾಶುಲ್ಕಂ ನಾಟಕವು ಅಂದಿನ ಸಮಾಜವನ್ನು ಕುರಿತ ವಿಭಿನ್ನ ದೃಷ್ಟಿಕೋನವನ್ನು ಮಂಡಿಸುತ್ತದೆ. ಆ ನಾಟಕ ನಾಚ್-ವಿರೋಧಿ ಚಳುವಳಿಯನ್ನು ಗೇಲಿ ಮಾಡುತ್ತದೆ. ಕೃತಿಯ ಕೇಂದ್ರದಲ್ಲಿ ಮಧುರವಾಣಿ ಮತ್ತು ಅವಳಂತಹ ಹಲವು ಉದ್ಯೋಗಚ್ಯುತರಾದ ವರ್ಗಗಳಿಗೆ ಸೇರಿದವರಿದ್ದಾರೆ. ಗುರಜಾಡ ಅವರ ಬರವಣಿಗೆಯು, ತನ್ನ ಕಾಲದ ಸಮಾಜದಲ್ಲಿ ನಿಧಾನವಾಗಿ ರೂಪಿತವಾಗುತ್ತಿದ್ದ ಮೇಲುಕೀಳುಗಳ ಶ್ರೇಣೀಕರಣಕ್ಕೆ ಸವಾಲು ಹಾಕಿತು. ಅದರ ಫಲವೆನ್ನುವಂತೆ ಅಂದಿನ ವಿಮರ್ಶಕರು ಅವರ ಕೃತಿಗಳನ್ನು ಪಕ್ಕಕ್ಕೆ ತಳ್ಳಿಬಿಟ್ಟಿತು. ೧೯೪೦ರ ದಶಕದಲ್ಲಿ ಆಂಧ್ರಪ್ರದೇಶದ ಪ್ರಗತಿಶೀಲ ಲೇಖಕರ ಸಂಘಗಳು ಅವರನ್ನು ಮುನ್ನೆಲೆಗೆ ತರುವವರೆಗೆ ಪರಿಸ್ಥಿತಿಯು ಹೀಗೆಯೇ ಮುಂದುವರಿಯಿತು.

೨೮. ಅಮ್ರಿತ್ ಶ್ರೀನಿವಾಸನ್ "ರಿಫಾರ್ಮ್ ಅಂಡ್ ರಿವೈವಲ್ : ದ ದೇವದಾಸಿ ಅಂಡ್ ಹರ್ ಡಾನ್ಸ್", "ಇಕನಾಮಿಕ್ ಅಂಡ್ ಪೊಲಿಟಿಕಲ್ ವೀಕ್ಲಿ" ವಾಲ್ಯೂಂ XX ನಂ. ೪೪ (೧೯೮೫).

೨೯. ನಾಚ-ವಿರೋಧಿ ಚಳುವಳಿಗಳು ಈ ಕಲಾವಿದೆಯರ ಆತ್ಮಪ್ರತ್ಯಯದ ಮೇಲೆ ಮಾಡಿದ ವಿನಾಶಕಾರೀ ಪರಿಣಾಮವನ್ನು ಈ ನಿದರ್ಶನವು ಬಹಳ ಚೆನ್ನಾಗಿ ಹೇಳುತ್ತದೆ : ಮುದ್ದುಪಳನಿ, ಅಷ್ಟೇಕೆ, ನಾಗರತ್ನಮ್ಮನವರಲ್ಲಿಯೂ ಕೂಡ

ಅಪಾರವಾದ ಆತ್ಮವಿಶ್ವಾಸ ಹಾಗೂ ಕ್ರಿಯಾಶೀಲತೆಗಳು ಕಂಡುಬರುತ್ತವೆ. ಅವರೊಂದಿಗೆ ಮೂವಲೂರು ರಾಮಾಮೃತಮ್ಮಾಳ್ ಅವರ ಆತ್ಮನಿಂದಕ ಧೋರಣೆಯನ್ನು ಹೋಲಿಸಿನೋಡಬೇಕು. ಆಕೆಯ 'ದಾಸಿಕ್ಕಳ್ ಮೋಸಾವೆಲೈ'' (ದೇವದಾಸಿಯರ ಮೋಸಗಳು/ ತಂತ್ರಗಳು) ಎಂಬ ಆಕರ್ಷಕವಾದ ಕೃತಿಯನ್ನು ರಚಿಸಿದ್ದಾರೆ (ಮದ್ರಾಸ್, ಪರ್ಲ್ ಪ್ರೆಸ್ ೧೯೩೬).

ಈಗಾಗಲೇ ಹೆಸರಿಸಲಾದ ಲೇಖನದಲ್ಲಿ (ಟಿ.೨೮) ಅಮೃತಾ ಶ್ರೀನಿವಾಸನ್ ಅವರು ಈ ಸನ್ನಿವೇಶದ ಬಗ್ಗೆ ಹೀಗೆ ವ್ಯಾಖ್ಯಾನ ನೀಡುತ್ತಾರೆ; "ಈ ಸುಧಾರಣಾವಾದಿ ಚಳುವಳಿಗಳು ದೇವದಾಸಿಯರ ಮೇಲೆ ಒತ್ತಡವನ್ನು ಹೇರಿದವು. ಅವರು ಗೃಹಸ್ಥ ಮೌಲ್ಯಗಳು ನೈತಿಕವಾಗಿ ತಮ್ಮವಕ್ಕಿಂತ ಉತ್ತಮವೆಂದು ಒಪ್ಪಿಕೊಳ್ಳುವಂತೆ ಮಾಡಿದವು."

೩೦. ನೋಡಿ : i) ಕುಂಕುಂ ಸಂಗರಿ, "ಮೀರಾಬಾಯ್ ಅಂಡ್ ದ ಸ್ಪಿರಿಚುಯಲ್ ಇಕಾನಮಿ ಆಫ್ ಭಕ್ತಿ" ಇನ್ ಅಕೇಶನಲ್ ಪೇಪರ್ಸ್ ಆನ್ ಹಿಸ್ಟರಿ ಅಂಡ್ ಸೊಸೈಟಿ: ನೆಹ್ರು ಮೆಮೊರಿಯಲ್ ಮ್ಯೂಸಿಯಂ ಅಂಡ್ ಆರ್ಕೈವ್ಸ್ ಸೆಕೆಂಡ್ ಸೀರೀಸ್ ನಂ. xxvii (ಇದರಲ್ಲಿ ರಾಷ್ಟ್ರೀಯತೆ ಮತ್ತು ಲಿಂಗವನ್ನು ಕುರಿತ ವಿವರವಾದ ಚರ್ಚೆ ಇದೆ.)

ii) ಮಿಹಿರ್ ಭಟ್ಟಾಚಾರ್ಯ, "ರವೀಂದ್ರನಾಥ್ ಟ್ಯಾಗೋರ್ ಅಂಡ್ ದ ಓರಿಯೆಂಟಲ್ ವುಮೆನ್, ಎ ರೀಡಿಂಗ್ ಆಫ್ ಚತುರಂಗ." ೧೯೮೭ರ ಮಾರ್ಚ್ ತಿಂಗಳಲ್ಲಿ ಜಾದವ್‌ಪುರ್ ವಿಶ್ವವಿದ್ಯಾಲಯದಲ್ಲಿ ನಡೆದ ವಿಚಾರ ಸಂಕಿರಣದಲ್ಲಿ ಮಂಡಿತವಾದ ಪ್ರಬಂಧ. ಸಂಕಿರಣದ ವಿಷಯ : 'ಲಿಟರೇಚರ್, ಸೊಸೈಟಿ ಅಂಡ್ ಐಡಿಯಾಲಜಿ ಇನ್ ದ ವಿಕ್ಟೋರಿಯನ್ ಎರಾ'.

೩೧. ಅವರ ಪೈಕಿ ಸ್ವಾತಂತ್ರ್ಯ ಹೋರಾಟಗಾರರಾದ ಇ. ಕೃಷ್ಣ ಅಯ್ಯರ್ ಅವರೂ ಗಮನೀಯರು. ಇವರು ಜಾತಿಯಿಂದ ಬ್ರಾಹ್ಮಣರು. ವೃತ್ತಿಯಿಂದ ವಕೀಲರು. ಸುಬ್ರಹ್ಮಣ್ಯ ಭಾರತಿಯವರ ದೇಶಭಕ್ತಿ ಗೀತೆಗಳನ್ನು ಹಾಡುತ್ತಾ ದಕ್ಷಿಣ ಭಾರತದಲ್ಲಿ ಸಂಚಾರ ಮಾಡಿದರು. ೧೯೨೩ರ ನಂತರ ಸ್ತ್ರೀ ಪಾತ್ರಗಳನ್ನು ವಹಿಸುತ್ತಿದ್ದರು, ಸಾದಿರ್ ಶೈಲಿಯಲ್ಲಿ ನರ್ತಿಸುತ್ತಿದ್ದರು. ೧೯೩೧ರಲ್ಲಿ ಕೃಷ್ಣ ಅಯ್ಯರ್ ಈ ನರ್ತನವನ್ನು ಕುರಿತಂತೆ ಆತ್ಮಗೌರವ-ಚಳುವಳಿಗೆ ಸಂಬಂಧಪಟ್ಟವರೊಂದಿಗೆ ತೀವ್ರವಾದ ವಾಗ್ಯುದ್ಧಗಳಲ್ಲಿ ಸಿಲುಕಿಕೊಂಡರು.

ವಿವರಗಳಿಗೆ ನೋಡಿ : ಸುನೀಲ್ ಕೊಠಾರಿ, "ಹಿಸ್ಟರಿ: ರೂಟ್ಸ್, ಗ್ರೋತ್ ಅಂಡ್ ರಿವೈವಲ್" ಸುನೀಲ್ ಕೊಠಾರಿಯವರಿಂದ ಸಂಪಾದಿತವಾದ, **ಭರತನಾಟ್ಯಂ: ಇಂಡಿಯನ್ ಕ್ಲಾಸಿಕಲ್ ಡ್ಯಾನ್ಸ್ ಆರ್ಟ್** ಕೃತಿಯಲ್ಲಿ. (ದೆಹಲಿ: ಮಾರ್ಗ್ ಪಬ್ಲಿಕೇಶನ್ಸ್ ೧೯೭೯), ಪುಟಗಳು ೨೩-೨೯.

೩೨. ಶ್ರೀನಿವಾಸನ್, ಪುಟ ೧೮೭೪-೫

ರುಕ್ಮಿಣಿ ಅರುಂಡೇಲ್ ಅವರು ತಮ್ಮ ಕಲಾಜೀವನದ ಮೊದಲ ದಿನಗಳ ಬಗ್ಗೆ ಹೇಳಿರುವ ಮಾತುಗಳು ಖಂಡಿತವಾಗಿಯೂ ಉಲ್ಲೇಖಾರ್ಹವಾಗಿದೆ. ತನ್ನಲ್ಲಿ ಸೌಂದರ್ಯದ ಬಗೆಗಿನ ಸಂವೇದನಶೀಲತೆಯು ಬೆಳೆಯುವುದಕ್ಕೆ ಭಾರತದ ಜನಸಾಮಾನ್ಯರು ಹಾಗೂ ದಿನಬಳಕೆಯ ವಸ್ತುಗಳನ್ನು ಸೌಂದರ್ಯವನ್ನು ಕುರಿತ ಆ್ಯನಿಬೆಸೆಂಟ್ ಅವರ ಉತ್ಸಾಹವೇ ಕಾರಣವೆಂದು ಅವರು ಒಪ್ಪಿಕೊಳ್ಳುತ್ತಾರೆ. ನಂತರ ಹೀಗೆ ಹೇಳುತ್ತಾರೆ : "ಆ ದಿನಗಳಲ್ಲಿ ಭಾರತೀಯ ಮಹಿಳೆಯೊಬ್ಬಳು ನರ್ತಿಸುವುದನ್ನು ಊಹಿಸಲೂ ಸಾಧ್ಯವಿರಲಿಲ್ಲ. ನಾನು ಆಗತಾನೆ ೧೯೧೪ರಲ್ಲಿ ನಾವೆಲ್ಲ ಒಟ್ಟಿಗೆ ಪ್ರವಾಸ ಮಾಡುತ್ತಿದ್ದೆವು. ನನಗೆ ನರ್ತಿಸಬೇಕೆಂಬ ಆಸೆಯಿದೆಂದು ನಾನು ಹೇಳಿದೆ. ಎಲ್ಲರೂ ಚಕಿತರಾದರು. ಅದು ಹುಚ್ಚು ವಿಚಾರವೆಂದು ಹಂಗಿಸಿದರು. ಆದರೆ ಆ್ಯನಿಬೆಸೆಂಟ್ ಅವರು ಮುಗುಳ್ನಗುತ್ತಾ ಹೀಗೆಂದರು : "ಎಂತಹ ಸುಂದರ ವಿಚಾರ ! ರುಕ್ಮಿಣಿಯ ನರ್ತನ ಸೊಗಸಾಗಿರುತ್ತದೆ" ೧೯೨೮ರಲ್ಲಿ ನಾನಿನ್ನು ನೃತ್ಯವನ್ನು ಸರಿಯಾಗಿ ಕಲಿಯಲು ಪ್ರಾರಂಭಿಸಿರಲಿಲ್ಲ. ಅಷ್ಟರಲ್ಲಿ ನನಗೆ ವಿವಿಧ ವಿನೋದಾವಳಿಯನ್ನು ನಡೆಸಿಕೊಡುವ ಅವಕಾಶ ದೊರಕಿತು..... ಅಕ್ಟೋಬರ್ ಮೊದಲನೆಯ ತಾರೀಕು ಅವರ ಜನ್ಮದಿನ..... ಅವರು ಅನೇಕ ಮಿತ್ರರನ್ನು ಆ ಸಮಾರೋಭಕ್ಕೆ ಆಹ್ವಾನಿಸಿದರು.... ಅಂದು ನಾನು ಟೆನಿಸನ್ ರಚಿಸಿದ ಜನಿವೆವ್ ಮತ್ತು ಚೀನಾ ದೇಶದ ಲೋಕಮಾತೆಯಾದ ಕ್ಯಾನ್-ಯಿನ್ ದೇವಾಲಯದ ದೃಶ್ಯವೊಂದನ್ನು ನರ್ತಿಸಿ ತೋರಿಸಿದೆ.

ನನ್ನ ನೃತ್ಯಯಾತ್ರೆಯು ಅವರ ಜನ್ಮದಿನದಂದು ಮೊದಲಾಯಿತು. ಕಾರ್ಯಕ್ರಮದ ಆಹ್ವಾನಪತ್ರಿಕೆಯ ಮೇಲೆ ನಾವು ನಟರ ಹೆಸರುಗಳನ್ನು ಆ್ಯನಿಬೆಸೆಂಟ್ ಅವರ ಮಾತುಗಳನ್ನು ಮುದ್ರಿಸಿದೆವು. ನನ್ನ ಮೊದಲ ಸಂಪಾದನೆಯು ಆಕೆ ಅಷ್ಟೊಂದು ಪ್ರೀತಿಸುತ್ತಿದ್ದ, ಮೂಕಪ್ರಾಣಿಗಳ ಹಿತಕ್ಕಾಗಿ ವಿನಿಯೋಗವಾಯಿತು. ನನಗೆ ಕೂಡ ಅವುಗಳ ಬಗ್ಗೆ ಅಪಾರ ಅನುಕಂಪ.

ದಿ ಆ್ಯನಿಬೆಸೆಂಟ್ ಸೆಂಟನರಿ ಬುಕ್, ಸಿ.ಟಿ. ರಾಮಸ್ವಾಮಿ ಅಯ್ಯರ್ ಅವರಿಂದ ಉದ್ಧೃತ ಆ್ಯನಿಬೆಸೆಂಟ್ (ದೆಹಲಿ : ಪಬ್ಲಿಕೇಷನ್ಸ್ ಡಿವಿಶನ್, ೧೯೬೩) ಪುಟ ೯೪.

ಇಪ್ಪತ್ತನೆಯ ಶತಮಾನದ ಮೊದಲ ದಶಕಗಳ ಸೌಂದರ್ಯ ಕಲ್ಪನೆಯಲ್ಲಿ ಮೂಡಿಬಂದ ರಾಷ್ಟ್ರೀಯವಾದ ಹಾಗೂ ಅಂತರರಾಷ್ಟ್ರೀಯ ವಾದಗಳ ಗಾಢಮೈತ್ರಿಯು ಪದ್ಮಾ ಸುಬ್ರಹ್ಮಣ್ಯಂ ಅವರ ಹೇಳಿಕೆಯಲ್ಲಿಯೂ ಅಷ್ಟೇ ಸ್ಪಷ್ಟವಾಗಿ ಗೋಚರಿಸುತ್ತದೆ.

"ನನ್ನ ನೃತ್ಯದಲ್ಲಿ ಪರಕೀಯವಾದ ನೃತ್ಯ ಸಂಪ್ರದಾಯಗಳ ಎಳೆಗಳನ್ನು ಗುರುತಿಸಬಹುದು. (ಅವರ ನೃತ್ಯವು ರಷ್ಯಾದ ಬ್ಯಾಲೆಯಿಂದ ಪ್ರಭಾವಿತವಾದಂತೆ ತೋರುವುದೆಂದು ಯಾರೋ ಅವರಿಗೆ ರಷ್ಯದಲ್ಲಿಯೇ ಹೇಳಿದ್ದರು). ಅಷ್ಟೇಕೆ ನನ್ನ ಚಲನಭಂಗಿಗಳಲ್ಲಿ ಒಮ್ಮೆ ಕಥಕ್ಕಳಿ, ಇನ್ನೊಮ್ಮೆ ಮಣಿಪುರಿ, ಮತ್ತೊಮ್ಮೆ ಒಡಿಸ್ಸಿ, ನಾಲ್ಕನೆಯ ಬಾರಿ ಮತ್ಯಾವುದೋ ನರ್ತನಶೈಲಿಯ ಚಲನಗಳು ಕಾಣಿಸಿಕೊಳ್ಳಬಹುದು. ಮೇಲು ನೋಟಕ್ಕೆ ಇವೆಲ್ಲ ವಿಭಿನ್ನ ಶೈಲಿಗಳ ಮಿಶ್ರಣವೆಂದು ತೋರುತ್ತದೆ. ಆದರೆ ಅದು ಹಾಗಲ್ಲ. ನಾನು ಈ ಎಲ್ಲ ಶೈಲಿಗಳ ಮೂಲ ಆಕರವನ್ನೇ ನನ್ನ ಪ್ರಧಾನ ಮಾರ್ಗದರ್ಶಿಯಾಗಿ ಹೊಂದಿದ್ದೇನೆ. ಅದೇ ಭರತನ ನಾಟ್ಯಶಾಸ್ತ್ರ."
ಪದ್ಮಾ ಸುಬ್ರಹ್ಮಣ್ಯಂ, ಭರತಾಸ್ ಆರ್ಟ: ದನ್ ಅಂಡ್ ನೌ (ಮದ್ರಾಸ್, ನೃತ್ಯೋದಯ, ೧೯೭೯)

೩೩. ಅದೇ, ಪುಟ ೩-೪ ಸುನೀಲ್ ಕೊಠಾರಿಯವರೂ ಇದೇ ಮಾತನ್ನು ಪಡಿನುಡಿಯುತ್ತಾರೆ. "ಭರತನಾಟ್ಯದಂತಹ ಅಭಿಜಾತ ಕಲಾಪ್ರಕಾರದಲ್ಲಿ, ಆರ್ಯ ಮತ್ತು ದ್ರಾವಿಡ ಸಂಸ್ಕೃತಿಗಳು ಅರ್ಥಪೂರ್ಣವಾಗಿ ಬೆರೆತುಕೊಂಡವು." ಭರತನಾಟ್ಯಂ ಪುಟ ೨೩ (ಹಿಂದೆಯೇ ಹೆಸರಿಸಲಾಗಿದೆ : ೩೧)

೩೪. ಅದೇ ಪುಟ ೧೧

೩೫. ಅದೇ ಪುಟ ೭೫-೭೮

೩೬. ಅದೇ, ಪುಟ ೧೧

೩೭. ಅದೇ ಪುಟ ೩೬

೩೮. ನಾಯಕರು ವೈಷ್ಣವರಾಗಿದ್ದರು. ಅವರ ಕಾಲಕ್ಕಾಗಲೇ ರಾಧಾಕೃಷ್ಣ ಪಂಥ ಆಳವಾದ ಹಾಗೂ ಕೀಳು ಅಭಿರುಚಿಯ (ಅಲ್ಲಿರುವುದೇ ಹಾಗೆ) ಬೇರುಗಳನ್ನು ಬಿಟ್ಟಿತ್ತು..... ನೈತಿಕವಾಗಿ ಪತನಗೊಂಡ ಬಯಕೆಗಳನ್ನು ಮೂಡಿಸಲು ಹಾಗೂ ಭೋಗಿಸಲು ಅನುಕೂಲವಾಗುವಂತೆ ಮಧುರ ಭಕ್ತಿಯ ನೆಪವನ್ನು ಉಪಯೋಗಿಸಿಕೊಳ್ಳುತ್ತಿದ್ದರು. ಈ ದುರದೃಷ್ಟಕರವಾದ ಧೋರಣೆಯು ನೃತ್ಯಕಲೆಯಲ್ಲಂತೂ ಗುಣಪಡಿಸಲಾರದಷ್ಟು ವಿಷಮಯವಾಗಿ ಸೇರಿಹೋಗಿತ್ತು. ಪದ್ಮಾಸುಬ್ರಹ್ಮಣ್ಯಂ, ಪೂರ್ವೋಕ್ತ, ಪುಟ ೭೫.

೩೯. ಅದೇ ಪುಟ ೭೫

೪೦. ಅದೇ ಪುಟ ೭೬

೪೧. ಸುನೀಲ್ ಕೊಠಾರಿ ಭರತನಾಟ್ಯಂ.... (ಪೂರ್ವೋಕ್ತ) ಪುಟ ೨೮

೪೨. ರುಕ್ಮಿಣೀದೇವಿ ಅರುಂಡೇಲ್, 'ಸ್ಪಿರಿಚುಯಲ್ ಬ್ಯಾಂಕ್ ಗ್ರೌಂಡ್' ಸುನೀಲ್ ಕೊಠಾರಿಯವರ ಪೂರ್ವೋಕ್ತ ಕೃತಿಯಲ್ಲಿ.

೪೩. ನಾವು ಹೈದರಾಬಾದ್, ರಾಜಮಂಡ್ರಿ, ವೇಟಪಾಲೆಂ, ಮದ್ರಾಸ್ ಮತ್ತು ತಂಜಾವೂರುಗಳಲ್ಲಿರುವ ಪುಸ್ತಕಭಂಡಾರಗಳನ್ನು ಆಮೂಲಾಗ್ರವಾಗಿ ಹುಡುಕಿದವು. ೧೮೮೭, ೧೯೧೧ ಮತ್ತು ೧೯೫೨ರಲ್ಲಿ ಮುದ್ರಿತವಾದ ಆವೃತ್ತಿಗಳ ತಲಾ ಒಂದು ಪ್ರತಿ ನಮಗೆ ದೊರಕಿತು. ಈ ಶತಮಾನದ ಎಪ್ಪತ್ತನೆಯ ಶತಕದಲ್ಲಿ ಕಡಿಮೆ ಬೆಲೆಯ ಆವೃತ್ತಿಯೊಂದು ಹೊರಬಂದಿರಬಹುದೆಂಬ ಸಂಗತಿಯೂ ನಮಗೆ ತಿಳಿದು ಬಂತು. ಆದರೆ ಮೂಲ ಓಲೆಗರಿ ಪ್ರತಿಯಾಗಲಿ ಅಥವಾ ಅದರಿಂದ ನಕಲು ಮಾಡಿದ ಬೇರೆ ಓಲೆಗರಿ ಪ್ರತಿಗಳಾಗಲಿ ನಮಗೆ ದೊರಕಲೇ ಇಲ್ಲ. ತಂಜಾವೂರು ಕಾಲದ ಅನೇಕ ಸಾಹಿತ್ಯಕೃತಿಗಳ ಹಸ್ತಪ್ರತಿಗಳನ್ನೂ ಇತರ ದಾಖಲೆಗಳನ್ನು ಸಂಗ್ರಹಿಸಿರುವ ಸರಸ್ವತಿ ಮಹಲ್ ಗ್ರಂಥಭಂಡಾರದಲ್ಲಿಯೂ ಅವು ಸಿಗಲಿಲ್ಲ.

೪೪. ಉದಾಹರಣೆಗೆ 'ರಾಧಿಕಾ ಸಾಂತ್ವನಂ' ಕುರಿತು ಕೆ. ಲಲಿತಾ ಅವರು ಉದಯಂ ಪತ್ರಿಕೆಯಲ್ಲಿ ಬರೆದ ಲೇಖನಕ್ಕೆ ಡಿ. ಚಂದ್ರಶೇಖರ್ ಮತ್ತು ವಿ. ಉಷಾದೇವಿಯವರು ನೀಡಿರುವ ಪ್ರತಿಕ್ರಿಯೆಯನ್ನು ಗಮನಿಸಬಹುದು. ಲಲಿತಾ ಅವರ ಲೇಖನವು ೧೭-೬-೯೦ ಮತ್ತು ೨೭-೬-೯೦ರಂದು ಎರಡು ಕಂತುಗಳಲ್ಲಿ ಪ್ರಕಟವಾಯಿತು. ಪ್ರತಿಕ್ರಿಯೆಯು ಪ್ರಕಟವಾಗಿದ್ದು ೨೯-೬-೯೦ ರಂದು. ❑

ಕೃಪೆ : 'ಸ್ತ್ರೀವಾದಿ ಸಾಹಿತ್ಯ ವಿಮರ್ಶೆ', ಸಂಪಾದಕರು ; ತೇಜಸ್ವಿನಿ ನಿರಂಜನ, ಸೀಮಂತಿನಿ ನಿರಂಜನ. ಪ್ರಕಾಶಕರು : ಕನ್ನಡ ಸಂಘ, ಕ್ರೈಸ್ಟ್ ಕಾಲೇಜ್, ಬೆಂಗಳೂರು.

ಸಂಪಾದಕರ ಪಿ.ಸೂ.: 'ರಾಧಿಕಾಸಾಂತ್ವನಂ' ೧೯೧೧ರ ಆವೃತ್ತಿ, ವೀರೇಶಲಿಂಗಂ ಅವರ ಸಾಹಿತ್ಯ ಚರಿತ್ರೆ – ಮುಂತಾದ ತೆಲುಗು ಪುಸ್ತಕಗಳೂ 'ಪುಸ್ತಕಮನೆ'ಯಲ್ಲಿ ಕಾಣಲು ಸಾಧ್ಯ.

೬

ತ್ಯಾಗರಾಜರ ಎರಡು ಸಮಾಧಿ ಉತ್ಸವಗಳು

ಪಿ. ಸಾಂಬಮೂರ್ತಿ
ಅನು : ವಿ. ಸೀತಾರಾಮಯ್ಯ

ಪ್ರಮುಖ ಸಂಗೀತ ವಿದ್ವಾಂಸರಲ್ಲಿ ಪಿ. ಸಾಂಬಮೂರ್ತಿಯವರೂ ಒಬ್ಬರು. 'ತ್ಯಾಗರಾಜ' ಎಂಬ ಅವರ ಕೃತಿಯು ಪುಟ್ಟದಾದರೂ ಅಧಿಕೃತವಾದದ್ದು. ಆಳ ವ್ಯಾಸಂಗದಿಂದ ಕೂಡಿರುವಂಥಾದ್ದು. ಅದನ್ನು ಕನ್ನಡಕ್ಕೆ ಅನುವಾದಿಸಿದವರೂ ಸಾಹಿತ್ಯ. ಕಲೆಗಳ ಬಗ್ಗೆ ಸಾಂಬಮೂರ್ತಿಯವರಷ್ಟೇ ಎತ್ತರದ ಸ್ಥಾನಗಳಿಸಿದ ವಿ. ಸೀತಾರಾಮಯ್ಯ ಅವರು. ಆ ಕೃತಿಯಿಂದ ಆಯ್ದ ಈ ಭಾಗದಲ್ಲಿ. ತಿರುವೈಯಾರಿನ ಎರಡು ಉತ್ಸವಗಳ ಬಗ್ಗೆ, ಬೆಂಗಳೂರಿನ ನಾಗರತ್ನಮ್ಮ ಅವರನ್ನು ನಾಗರತ್ನಮ್ಮಾಳ್ ಎಂದು ದಾಖಲಿಸಿರುವ ಬಗ್ಗೆ, ಕೊನೆಯ ಪಕ್ಷ ಅವರ ಹೆಸರನ್ನು ಉಲ್ಲೇಖಿಸಿರುವ ಬಗ್ಗೆ – ತಿಳಿಯಬೇಕಾಗಿದ್ದೂ ಇಲ್ಲಿದೆ ಎಂದು ಕೊಡಲಾಗುತ್ತಿದೆ. ಸಂಪಾದಕ

ತಿರುವೈಯಾರು ಎರಡು ಮಹೋತ್ಸವಗಳಿಗೆ ಪ್ರಖ್ಯಾತವಾಗಿದೆ

೧) ಏಪ್ರಿಲ್ ತಿಂಗಳಲ್ಲಿ ನಡೆಯುವ ಸಪ್ತಸ್ಥಾನ ಉತ್ಸವ ;

೨) ಜನವರಿ ತಿಂಗಳಲ್ಲಿ ನಡೆಯುವ ತ್ಯಾಗರಾಜರ ಉತ್ಸವ. ಸಾವಿರಾರು ಮಂದಿ ಪ್ರೇಕ್ಷಕರು, ಭಕ್ತರು ವರ್ಷಂಪ್ರತಿ ಈ ಉತ್ಸವಗಳನ್ನು ನೋಡಲು ತಿರುವೈಯಾರಲ್ಲಿ ಬಂದು ಸಂದಣಿಸುತ್ತಾರೆ.

ಅವರ ಉಳಿಕೆಗಳನ್ನು ಸಮಾಧಿಮಾಡಿದ ಸ್ಥಳದಲ್ಲಿ ಒಂದು ಬೃಂದಾವನವನ್ನು ರಚಿಸಿದರು. ಶಿವಭಕ್ತರಲ್ಲಿ ಲಿಂಗವನ್ನು ಸ್ಥಾಪಿಸುವುದು ವಾಡಿಕೆ ; ಹರಿದಾಸರಿಗೆ ಬೃಂದಾವನವನ್ನು ರಚಿಸುವುದು ರೂಢಿ. ಬೃಂದಾವನ ಒಂದು ಸಣ್ಣ ಹೊಳ್ಳಾದ ಇಟ್ಟಿಗೆಯ ಕಟ್ಟೆ, ನಾಲ್ವಡಿ ಅಥವಾ ಹೆಚ್ಚಿನ ಎತ್ತರವುಳ್ಳದ್ದು. ಅದರ ಒಳಗೆ ಪವಿತ್ರವಾದ ತುಳಸಿಯ ಗಿಡವನ್ನು ನೆಟ್ಟು ಬೆಳೆಸುತ್ತಾರೆ.

ಅವರ ಸಿದ್ಧಿಯ ಕಾಲದಿಂದೀಚೆಗೆ ಉಮ್ಮೈಯಾಳ್‌ಪುರಂ ಶಿಷ್ಯರೂ ಇತರರೂ ಪ್ರತಿವರ್ಷವೂ ಪುಷ್ಯ ಬಹುಳ ಪಂಚಮಿಯ ದಿನದಂದು ಸಮಾಧಿ ಸ್ಥಾನಕ್ಕೆ ಹೋಗುತ್ತಿದ್ದರು. ಅಲ್ಲಿ ಪೂಜೆ ನೆರವೇರಿಸಿ ಮನೆಗೆ ಬಂದು ಕ್ರಮವಾಗಿ ಆರಾಧನೆ ನಡೆಸುತ್ತಿದ್ದರು. ಆ ಸಮಯದಲ್ಲಿ ಅವರ ಕೊರಳು ಕಟ್ಟಿದಂತಾಗಿ ಕಣ್ಣಿಂದ ನೀರು ಧಾರಾಕಾರವಾಗಿ ಸುರಿದು ಅವರಿಗೆ ಹಾಡಲು ಕಷ್ಟವಾಗುತ್ತಿತ್ತಂತೆ.

೧೯೦೭ರಿಂದ ಈಚೆಗೆ ಸಮಾಧಿಯ ಉತ್ಸವ ಒಂದು ಹೊಸ ಮಜಲನ್ನು ಪ್ರವೇಶಿಸಿತು. ನರಸಿಂಹ ಭಾಗವತರು, (ತಿಲ್ಲಾ ಸ್ಥಾನದ) ಪಂಜು ಭಾಗವತರು ಪಿಟೀಲು ಮಹಾವಿದ್ವಾಂಸರಾದ ತಿರುಚಿಯ ಗೋವಿಂದಸ್ವಾಮಿ ಪಿಳ್ಳೆಯವರು ಉತ್ಸವವನ್ನು ಮಹಾವಿಜೃಂಭಣೆಯಿಂದ ನೆರವೇರಿಸತೊಡಗಿದರು.

ಈಚೆಗೆ ತೀರಿಕೊಂಡ ಬೆಂಗಳೂರಿನ ನಾಗರತ್ನಮ್ಮಾಳ್ ತಾನು ಕೂಡಿಟ್ಟಿದ್ದ ಹಣವನ್ನು ಸಮಾಧಿಯ ಮೇಲೆ ಸುಂದರ ದೇವಾಲಯವೊಂದನ್ನು ಕಟ್ಟಲು ವಿನಿಯೋಗಿಸಿದರು. ೧೯೨೫ರಲ್ಲಿ ಕಟ್ಟಿದ ಈ ದೇವಾಲಯ ಈಚೆಗೆ ಇನ್ನೂ ಉತ್ತಮಪಟ್ಟು ವಿಸ್ತಾರಗೊಂಡಿದೆ.

ದೇವಸ್ಥಾನದ ಕಟ್ಟಡ ಮೇಲ್ವಿಚಾರಣೆಯ ಕೆಲಸ ತಿರುವೊತ್ತಿಯೂರಿನ ಕೀರ್ತಿಶೇಷ ರಾಮಸ್ವಾಮಿ ಅಯ್ಯರ್ ಅವರಿಗೆ ನಿರ್ವಹಿಸಲಾಯಿತು. ಅವರು ಕೌತುಕಪೂರ್ಣವಾದ ಒಂದು ಸಂಗತಿಯನ್ನು ಹೇಳುತ್ತಾರೆ. ಅಸ್ತಿಭಾರವನ್ನು ಹಾಕುವ ಉದ್ದೇಶದಿಂದ ನದಿಯ ದಡದಲ್ಲಿ ಸಮಾಧಿಯ ಸುತ್ತ ಎಷ್ಟು ಆಳದವರೆಗೂ ಅಗಿಯಬೇಕೆಂಬುದು ಅವರಿಗೆ ಗೊತ್ತಾಗಲಿಲ್ಲವಂತೆ. ಸ್ಥಳದ ತಜ್ಞರ ಸಲಹೆ ಕೇಳಿದರು. ಆತನಿಗೆ ಯಾವ ಬೆಳಕನ್ನು ಹಾಯಿಸಲೂ ಅವರು ಶಕ್ತರಾಗಲಿಲ್ಲ. ಧೈರ್ಯವಾಗಿ ಅಗಿಯತೊಡಗಿದರು. ಯಾವುದೋ ಒಂದು ನೆಲೆಯ ಆಳವನ್ನು ಮುಟ್ಟಿದಾಗ ಸಾಂಬ್ರಾಣಿಯ ವಾಸನೆ ಆ ಸ್ಥಳದಿಂದ ಹೊರಹೊಮ್ಮಿತಂತೆ. ಅಲ್ಲಿಂದ

ಕೆಳಕ್ಕೆ ಅವರು ಅಗಿಯಬಾರದೆಂಬುದಕ್ಕೆ ಇದು ಎಚ್ಚರಿಕೆಯೆಂದು ಅವರಿಗೆ ಯೋಚನೆ ಬಂತು. ಆ ಸ್ಥಳದಲ್ಲಿ ಅಸ್ಥಿಭಾರವನ್ನು ಹಾಕಲು ತೊಡಗಿದರು. ಅದರ ಮೇಲೆ ಆಮೇಲೆ ದೇವಾಲಯವನ್ನು ಕಟ್ಟಲಾಯಿತು.

ಸಮಾಧಿಯ ಬಳಿ ಕಾವೇರಿ ದಡದಲ್ಲಿ ಒಂದು ಸಂಜೆ ಸೂಲಮಂಗಲಂ ವೈದ್ಯನಾಥ ಭಾಗವತರು ಒಬ್ಬ ಗೆಳೆಯರೊಡನೆ ಸಂಧ್ಯಾವಂದನೆ ಮಾಡುತ್ತಿದ್ದರಂತೆ. ಇದ್ದಕ್ಕಿದ್ದಂತೆ 'ರಾಮ ರಾಮ' ಶಬ್ದ ಕೇಳಿಸಿತಂತೆ. ಬಳಿಯಲ್ಲಿ ಯಾರೂ ಇರಲಿಲ್ಲ. ಸಮಾಧಿಯ ಒಳಗಿಂದಲೇ ಹೊರಬರುತ್ತಿರುವಂತೆ ಆ ಶಬ್ದ ಕೇಳಿಸಿತು.

೧೯೪೦ನೆ ವರ್ಷದಿಂದ ಈಚೆಗೆ ತಿರುವೈಯಾರಲ್ಲಿ ವಾರ್ಷಿಕ ತ್ಯಾಗರಾಜ ಉತ್ಸವವನ್ನು ವಿಜೃಂಭಣೆಯಿಂದ ತ್ಯಾಗಬ್ರಹ್ಮ ಆರಾಧನ ಮಹೋತ್ಸವ ಸಭೆ ನೆರವೇರಿಸಿಕೊಂಡು ಬಂದಿದೆ. ಸಮಾಧಿ ನಿಜವಾಗಿ ದೊಡ್ಡ ಯಾತ್ರಾಸ್ಥಳವಾಗಿದೆ. ಅಲ್ಲಿ ವರ್ಷವರ್ಷವೂ ಹೋಗುವ ಸಾವಿರಾರು ಮಂದಿ ಗಾಯಕರಿಗೂ ಸಂಗೀತಪ್ರಿಯರಿಗೂ ಭಕ್ತರಿಗೂ ಅದರಿಂದ ಬಾಳಲ್ಲಿ ಸ್ಫೂರ್ತಿ, ಪರಿಶುದ್ಧಿ ದೊರಕಿವೆ.

❑

ಕೃಪೆ : ತ್ಯಾಗರಾಜ, ಪ್ರಕಾಶಕರು : ನ್ಯಾಷನಲ್ ಬುಕ್ ಟ್ರಸ್ಟ್, ಇಂಡಿಯಾ.

೭

ತ್ಯಾಗರಾಜರ ಸಮಾಧಿ, ಉತ್ಸವಗಳ ಹಿನ್ನೆಲೆ

ವಿ.ಎಸ್. ಸಂಪತ್ಕುಮಾರಾಚಾರ್ಯ

'ಕರ್ನಾಟಕ ಸಂಗೀತ ಪಾರಿಭಾಷಿಕ ಶಬ್ದಕೋಶ'ದಂತಹ ಬೃಹತ್ ಸಂಪುಟಗಳನ್ನು ನೀಡಿದ ಸಂಪತ್ಕುಮಾರಾಚಾರ್ಯರು, ತ್ಯಾಗರಾಜರನ್ನು ಕುರಿತು ಆಳ ಅಧ್ಯಯನ ನಡೆಸಿದ ವಿದ್ವಾಂಸರು.'ಸದ್ಗುರು ತ್ಯಾಗರಾಜರು' ಎಂಬ ಜೀವನ ಸಾಧನೆ ಕೊಡುಗೆಯ ಕೃತಿಯಿಂದ ಆಯ್ದ ಈ ಭಾಗದಲ್ಲಿ, ತ್ಯಾಗರಾಜರ ಸಮಾಧಿ ಹಾಗೂ ಉತ್ಸವಗಳ ಹಿನ್ನೆಲೆ ಕುರಿತು ಅನೇಕ ಮಾಹಿತಿಗಳು ಒಳಗೊಂಡಿದ್ದು, ಆ ಮೂಲಕ ಬೆಂಗಳೂರು ನಾಗರತ್ನಮ್ಮ ಅವರ ಪಾಲ್ಗೊಳ್ಳುವಿಕೆಯ ಮಹತ್ತ್ವ ಕೂಡ ಇದರಿಂದ ಹೊರಬೀಳುತ್ತದೆ.
ಸಂಪಾದಕ

ಸಮಾಧಿ ಉತ್ಸವ : ತ್ಯಾಗರಾಜರ ಸಮಾಧಿಯ ಮೇಲೆ ಬೃಂದಾವನವನ್ನು ನಿರ್ಮಿಸಲಾಯಿತು. ತಾವು ಸಿದ್ಧಪಡೆದ ೬೦ ವರ್ಷಗಳ ತರುವಾಯ ತಮ್ಮ ಕೀರ್ತಿಯು ಹರಡುವುದೆಂದು ತ್ಯಾಗರಾಜರು ತಮ್ಮ ಶಿಷ್ಯರಿಗೆ ತಿಳಿಸಿದ್ದರು. ಅವರು ಸಿದ್ಧಪಡೆದ ನಂತರ ಅವರ ಉಮಯಾಳ್ಪುರಂ ಶಿಷ್ಯರೂ ಮತ್ತು ಇತರರೂ ಪ್ರತಿವರ್ಷ ಪುಷ್ಯ ಬಹುಳ ಪಂಚಮಿಯ ದಿನ ಅವರ ಸಮಾಧಿಗೆ ಹೋಗಿ ಪೂಜೆ ಮಾಡಿ, ಮನೆಗೆ ಬಂದು ಆರಾಧನೆಯನ್ನು ಮಾಡುತ್ತಿದ್ದರು. ಇಂತಹ ಸಂದರ್ಭಗಳಲ್ಲಿ ಅವರಿಗೆ ತಮ್ಮ ಗುರುವಿನ ಸ್ಮರಣೆಯುಂಟಾಗಿ ದುಃಖ ತುಂಬಿ ಅವರ ಕೃತಿಗಳನ್ನು ಹಾಡುವುದೇ ಕಷ್ಟವಾಗುತ್ತಿತ್ತೆಂದು ತಿಳಿದು ಬರುತ್ತದೆ.

ತಿಲ್ಲೈಸ್ಥಾನಂ ರಾಮ ಅಯ್ಯಂಗಾರ್ಯರು ತ್ಯಾಗರಾಜರ ಪುತ್ರವಾತ್ಸಲ್ಯವನ್ನು ಪಡೆದಿದ್ದ ಶಿಷ್ಯರಾಗಿದ್ದರು. ಇವರ ಶಿಷ್ಯರು ಸಹೋದರರದ ತಿಲ್ಲೈಸ್ಥಾನಂ ನರಸಿಂಹ ಭಾಗವತರು ಮತ್ತು ಪಂಜು ಭಾಗವತರು. ರಾಮ ಅಯ್ಯಂಗಾರ್ಯರು ಕಾಲವಾದ ನಂತರ ಈ ಸಹೋದರರು ಪ್ರತಿದಿನ ಸಮಾಧಿಯ ಪೂಜೆಗೆ ವ್ಯವಸ್ಥೆ ಮಾಡಿ ವಾರ್ಷಿಕ ಆರಾಧನೋತ್ಸವವನ್ನು ನಡೆಸಲು ತೊಡಗಿದರು. ೧೯೦೭ರಲ್ಲಿ ಆಶ್ಚರ್ಯಕರವಾದ ರೀತಿಯಲ್ಲಿ ಸಮಾಧಿ ಉತ್ಸವವು ಹೊಸ ಸ್ವರೂಪವನ್ನು ಪಡೆಯಿತು. ಇಲ್ಲಿಯವರೆಗೆ ಯಾವ ಸಂಗೀತದ ಕಾರ್ಯಕ್ರಮವನ್ನು ಯೋಚಿಸಿರಲಿಲ್ಲ. ಅಧಿಷ್ಠಾನ ಪೂಜೆ ಮತ್ತು ಆರಾಧನೆ ಮತ್ತು ಭೋಜನವನ್ನು ನಡೆಸುತ್ತಿದ್ದರು. ೧೯೦೮ರಲ್ಲಿ ಇವುಗಳಲ್ಲದೆ ಸಂಗೀತ ಕಚೇರಿಗಳು ಮತ್ತು ಹರಿಕಥಾ ಕಾಲಕ್ಷೇಪಗಳನ್ನು ತಿಲ್ಲೈಸ್ಥಾನಂ ಸಹೋದರರು ಖ್ಯಾತ ಪಿಟೀಲು ವಿದ್ವಾಂಸರಾಗಿದ್ದ ತಿರುಚಿ ಗೋವಿಂದಸ್ವಾಮಿ ಪಿಳ್ಳೆ ಮತ್ತು ಇತರ ವಿದ್ವಾಂಸರ ನೆರವಿನಿಂದ ಏರ್ಪಾಡುಮಾಡಿ ಉತ್ಸವವನ್ನು ವಿಜೃಂಭಣೆಯಿಂದ ನಡೆಸಲು ತೊಡಗಿದರು.

ಕೆಲವು ವರ್ಷಗಳ ನಂತರ ಉತ್ಸವವನ್ನು ನಡೆಸುವ ವಿಚಾರದಲ್ಲಿ ತಿಲ್ಲೈಸ್ಥಾನಂ ಸಹೋದರರಲ್ಲಿ ಭಿನ್ನಾಭಿಪ್ರಾಯ ಉಂಟಾಗಿ ಎರಡು ಪಕ್ಷಗಳುಂಟಾಯಿತು. ಹಿರಿಯ ಸಹೋದರರ ಪಕ್ಷವು 'ದೊಡ್ಡ ಪಕ್ಷ' ಮತ್ತು ಕಿರಿಯ ಸಹೋದರರ ಪಕ್ಷವು 'ಚಿಕ್ಕ ಪಕ್ಷ'ವೆನ್ನಿಸಿಕೊಂಡಿತು. ನರಸಿಂಹಭಾಗವತರು ಕಾಲವಾದ ನಂತರ ಹಿರಿಯ ಪಕ್ಷಕ್ಕೆ ತಿರುಚಿ ಗೋವಿಂದಸ್ವಾಮಿ ಪಿಳ್ಳೆಯವರು ಮುಖ್ಯಸ್ಥರಾದರು. ೧೯೧೪ರಲ್ಲಿ ಪಂಜು ಭಾಗವತರು ಶ್ರೀ ತ್ಯಾಗಬ್ರಹ್ಮ ವೈಭವ ಪ್ರಕಾಶ ಸಭಾ ಎಂಬ ಸಮಿತಿಯನ್ನು ಸ್ಥಾಪಿಸಿ ಅದಕ್ಕೆ ಉತ್ಸವವನ್ನು ಆಚರಿಸುವ ಹಕ್ಕನ್ನು ಕೊಟ್ಟು, ಸಮಾಧಿ ಪೂಜೆ ಮತ್ತು ಆರಾಧನೆಯನ್ನು ಮಾಡುವ ಹಕ್ಕನ್ನು ತಾವು ಇಟ್ಟುಕೊಂಡರು. ಇವೆರಡು ಪಕ್ಷಗಳು ೧೯೨೬ರ ವರೆಗೆ ಉತ್ಸವ ಇತ್ಯಾದಿಗಳನ್ನು ನಡೆಸುತ್ತಿದ್ದುವು.

೧೯೨೦ರಲ್ಲಿ ಬೆಂಗಳೂರು ನಾಗರತ್ನಮ್ಮನವರು ತ್ಯಾಗರಾಜರ ಸಮಾಧಿಯ ಮೇಲೆ ಸ್ಥಿರವಾದ ಕಟ್ಟಡವನ್ನು ನಿರ್ಮಾಣ ಮಾಡುವ ಉದ್ದೇಶದಿಂದ ತಿರುವೈಯ್ಯಾರಿಗೆ ಬಂದರು. ತ್ಯಾಗರಾಜರ ಪರಮ ಭಕ್ತೆಯಾಗಿದ್ದರು. ತಮ್ಮ ಆಸ್ತಿಯನ್ನೆಲ್ಲ ಸಮಾಧಿಯ ದೇವಾಲಯ ನಿರ್ಮಾಣಕ್ಕಾಗಿ ವಿನಿಯೋಗಿಸಲು ಸಂಕಲ್ಪಿಸಿದರು. ವಾಲಾಜಪೇಟೆ ಕೃಷ್ಣಸ್ವಾಮಿ ಭಾಗವತರ ಶಿಷ್ಯ ಬೆಂಗಳೂರು ಮುನುಸಾಮಪ್ಪನವರಲ್ಲಿ ನಾಗರತ್ನಮ್ಮನವರು ಸಂಗೀತವನ್ನು ಕಲಿತರು ಎಂಬುದನ್ನು ಇಲ್ಲಿ ಸ್ಮರಿಸಬಹುದು. ಈ ಗುಡಿಯ ನಿರ್ಮಾಣದ ಮೇಲ್ವಿಚಾರಣೆಯನ್ನು ತಿರುವೊಟ್ಟಿಯೂರು ಎಸ್. ರಾಮಸ್ವಾಮಿ ಅಯ್ಯರ್‌ರವರು ವಹಿಸಿಕೊಂಡಿದ್ದರು. ಅವರು ತಮ್ಮ ಕೆಲಸವನ್ನು ನಿರ್ವಹಿಸುತ್ತಿದ್ದಾಗ ಒಂದು ಸ್ವಾರಸ್ಯಕರವಾದ ಘಟನೆ ನಡೆಯಿತು. ನದಿಯ ತೀರದಲ್ಲಿರುವ ಸಮಾಧಿಯ ಸುತ್ತಲೂ ಎಷ್ಟು ದೂರದಲ್ಲಿ ದೇವಾಲಯದ ಕಟ್ಟಡದ ಅಸ್ತಿಭಾರಕ್ಕಾಗಿ ಅಗೆಯಬಹುದೆಂಬ ವಿಷಯ ಅವರಿಗೆ ತಿಳಿದಿರಲಿಲ್ಲ. ಸ್ಥಳದ ನಿಪುಣರಿಂದ ಅವರಿಗೆ ಏನೂ ಅನುಕೂಲಕರವಾದ ಸಲಹೆ ದೊರಕಲಿಲ್ಲ. ತಾವೇ ಧೈರ್ಯಮಾಡಿ ಪಾಯ ತೋಡಿಸಲು ತೊಡಗಿದರು. ಸ್ವಲ್ಪ ಆಳ ಅಗೆದ ಮೇಲೆ ಆ ಸ್ಥಳದಿಂದ ಸಾಂಬ್ರಾಣಿಯ ವಾಸನೆ ಹೊರಟಿತು. ಇದನ್ನು ಎಚ್ಚರಿಕೆಯೆಂದು ಭಾವಿಸಿ ಇನ್ನೂ ಹೆಚ್ಚು ಆಳವಾಗಿ ಪಾಯವನ್ನು ತೋಡಿಸದೆ ಅಸ್ತಿಭಾರವನ್ನು ಹಾಕಿಸಿ ದೇವಾಲಯವನ್ನು ಕಟ್ಟಿಸಲು ತೊಡಗಿದರು.

ಒಂದು ಸಲ ಸೂಲಮಂಗಲಂ ವೈದ್ಯನಾಥ ಭಾಗವತರು ತಮ್ಮ ಒಬ್ಬ ಮಿತ್ರರೊಡನೆ ಸಮಾಧಿಯ ಸಮೀಪದಲ್ಲಿ ಕಾವೇರಿ ದಡದಲ್ಲಿ ಸಂಜೆ ಸಂಧ್ಯಾವಂದನೆಯನ್ನು ಮಾಡುತ್ತಿದ್ದರು. ಇದ್ದಕ್ಕಿದ್ದಂತೆ ರಾಮ ರಾಮ ಎಂಬ ಶಬ್ದ ಕೇಳಿಸಿತು. ಸುತ್ತಲೂ ತಿರುಗಿ ನೋಡಿದರು. ಯಾರೂ ಕಣ್ಣಿಗೆ ಬೀಳಲಿಲ್ಲ. ಆ ಶಬ್ದವು ಸಮಾಧಿಯಿಂದಲೇ ಬಂದಿರಬೇಕೆಂದು ಊಹಿಸಿದರು. ತ್ಯಾಗರಾಜರ ಸಮಾದಿಯ ದೇವಾಲಯದ ನಿರ್ಮಾಣವು ೧೯೨೫ರಲ್ಲಿ ಪೂರ್ಣಗೊಂಡು ಕುಂಭಾಭಿಷೇಕವು ನಡೆಯಿತು. ೧೯೨೬ರಲ್ಲಿ ನಾಗರತ್ನಮ್ಮನವರು ಹೆಚ್ಚು ಮಂದಿ ವಿದುಷಿಯರನ್ನೊಳಗೊಂಡ ಬೇರೊಂದು ಸಮಿತಿಯನ್ನು ರಚಿಸಿ ಉತ್ಸವವನ್ನು ಆಚರಿಸಲು ತೊಡಗಿದರು. ೧೯೨೬ರಿಂದ ೧೯೪೦ರ ವರೆಗೆ ತಿರುವಯ್ಯಾರಿನಲ್ಲಿ ಬೇರೆ ಬೇರೆ ಕಡೆ ಉತ್ಸವವನ್ನು ನಡೆಸುತ್ತಿದ್ದ ಮೂರು ಸಮಿತಿಗಳಿದ್ದುವು. ಈ ಮೂರು ಸಮಿತಿಗಳನ್ನೂ ಒಂದುಗೂಡಿಸಿ ೧೯೪೦ರಲ್ಲಿ ಶ್ರೀತ್ಯಾಗಬ್ರಹ್ಮಮಹೋತ್ಸವ ಸಭೆಯು ಅಸ್ತಿತ್ವಕ್ಕೆ ಬಂದಿತು. ಚಿಕ್ಕ ಪಕ್ಷದ ಪ್ರಮುಖರು ಈ ಏರ್ಪಾಡಿಗೆ ಒಪ್ಪಿದರೂ ಶಿಷ್ಯಪರಂಪರೆಯ ಪೂಜಾಕೈಂಕರ್ಯವನ್ನು ಸಮಾಧಿ ದೇವಾಲಯದಲ್ಲಿ ಪ್ರತಿ ವರ್ಷ ಪುಷ್ಯ ಬಹುಳ ಪಂಚಮಿಯ ದಿನ ನಡೆಸುವ ಹಕ್ಕನ್ನು ಉಳಿಸಿಕೊಂಡರು. ತಿಲ್ಲೈಸ್ಥಾನಂ ಸಹೋದರರ ನಂತರ ತಿರುವೈಯ್ಯಾರು ರಾಜ ಗೋಪಾಲ ಭಾಗವತರು ಈ ಕೈಂಕರ್ಯವನ್ನು ನಡೆಸುತ್ತಿದ್ದರು. ಅವರ ನಂತರ ಅವರ ಪುತ್ರ ರಾಮಮೂರ್ತಿ ಅಯ್ಯರ್‌ರವರು ಸಮಾಧಿ ಪೂಜೆ, ಆರಾಧನೆ ಮತ್ತು ಇತರ ಧಾರ್ಮಿಕ ವಿಧಿಗಳನ್ನು ಪ್ರತಿ ವರ್ಷವೂ ತಿರುವೈಯಾರಿನಲ್ಲಿ ನಡೆಸುತ್ತ ಬಂದಿದ್ದಾರೆ. ತಿರುವೈಯಾರ್ ಚೆಲ್ಲಂ ಅಯ್ಯರ್‌ರವರ ನೇತೃತ್ವದಲ್ಲಿ ಚಿಕ್ಕ ಸಮಿತಿಯು ಶಿಷ್ಯ ಪರಂಪರೆ ಆರಾಧನಾ ಪೂಜೆಯನ್ನು ನಡೆಸಲು ನೆರವು ನೀಡುತ್ತಿದೆ.

ತ್ಯಾಗರಾಜ ಆರಾಧನೋತ್ಸವವು ಭಾರತದ ಅತ್ಯಂತ ಪ್ರಮುಖ ಸಂಗೀತೋತ್ಸವವಾಗಿದೆ. ಪ್ರತಿ ವರ್ಷ ಅಲ್ಲಿಗೆ ಹೋಗುವ ಸಾವಿರಾರು ಮಂದಿ ಸಂಗೀತಪ್ರಿಯರು, ಸಂಗೀತ ವಿದ್ವಾಂಸರು ಮತ್ತು ಭಕ್ತರ ಸ್ಫೂರ್ತಿಯ ಕೇಂದ್ರವಾಗಿರುವುದಲ್ಲದೆ ಪವಿತ್ರ ಸ್ಥಳವಾಗಿದ್ದು ಎಲ್ಲರನ್ನೂ ಶುದ್ಧೀಕರಿಸುವ ಸ್ಥಳವಾಗಿದೆ.

❑

ಕೃಪೆ : ಸದ್ಗುರು ತ್ಯಾಗರಾಜರು. ಪ್ರಕಾಶಕರು : ಗೀತಾ ಬುಕ್ ಹೌಸ್. ಮೈಸೂರು

ನಮ್ಮ ನಾಡಿನ ನಾಗರತ್ನಮ್ಮ : ಅಹಲ್ಯೆಯ ಶಿಲೆ

ಟಿ.ಎಸ್. ರಾಮಚಂದ್ರಮೂರ್ತಿ

ಸಜ್ಜನರಲ್ಲಿ, ಸ್ನೇಹಶೀಲರಲ್ಲಿ, ಶಿಕ್ಷಣ ತಜ್ಞರಲ್ಲಿ ಟಿ.ಎಸ್. ರಾಮಚಂದ್ರಮೂರ್ತಿಯವರೂ ಒಬ್ಬರು. ಸಾಹಿತ್ಯ, ಸಂಗೀತ, ಸಂಸ್ಕೃತಿ ಪ್ರಿಯರೂ ಕೂಡ. ಎಲ್ಲಕ್ಕು ಮಿಗಿಲಾಗಿ ಸದಾ ದೇಶ ವಿದೇಶಗಳ ಸಂಚಾರಿಯಾದರೂ ಕರ್ನಾಟಕದ ಚಿಂತೆಯೇ ಅವರ ಮೈ ಮನಸ್ಸುಗಳನ್ನು ಆವರಿಸಿರುತ್ತದೆ. ಕೆಲಕಾಲದ ಹಿಂದೆ ಪ್ರಕಟವಾದ 'ಪರ್ಯಟನೆಯ ಸುಳಿಯಲ್ಲಿ' ಎಂಬ ಅವರ ಸೊಗಸಾದ ಪ್ರವಾಸ ಪುಸ್ತಕದ ಪುಟ ಒಂದರಲ್ಲಿ ಮೂಡಿಬಂದಿರುವ ಈ ಭಾಗ, ಬೆಂಗಳೂರು ನಾಗರತ್ನಮ್ಮ ಹಾಗೂ ಅವರ ಹಿರಿಮೆಗೇ ಆಗುತ್ತಿರುವ ಅಪಚಾರವನ್ನು ಪ್ರತ್ಯಕ್ಷ ಕಂಡು ಮರುಗಿದ ವಸ್ತುಸ್ಥಿತಿ ಇಲ್ಲಿದೆ. ಸಂಪಾದಕ

ವಿಶ್ವಮಾನ್ಯವಾದ ಈ ಸಂಗೀತೋತ್ಸವ ಪ್ರಾರಂಭವಾಗುವುದಕ್ಕೆ ಮುಂಚೆ ಒಂದೆರಡು ವಿಷಯಗಳು ನನ್ನ ಮನಸ್ಸಿನಲ್ಲಿ ಹಾದು ಹೋಯಿತು. ನಾಗರತ್ನಮ್ಮನವರ ವಿಗ್ರಹಕ್ಕೆ ವಂದಿಸಿದನೆಂದು ಹೇಳಿದ್ದೆನಲ್ಲ. ಈ ನಾಗರತ್ನಮ್ಮ ಬೆಂಗಳೂರಿನವರು. ಕರ್ನಾಟಕ ಸಂಗೀತದಲ್ಲಿ ಸಾಕಷ್ಟು ಹೆಸರು ಗಳಿಸಿದವರು. ಅನೇಕ ಸಂಗೀತ ಸಭೆಗಳ ಗೌರವಕ್ಕೆ ಪಾತ್ರರಾಗಿದ್ದವರು. ಜೊತೆಗೆ ಶ್ರೀ ತ್ಯಾಗರಾಜಸ್ವಾಮಿಗಳ ಪರಮಭಕ್ತರು. ಸಂಗೀತ ಸಾಹಿತ್ಯಗಳ ಪರಿಚಯವೂ ಇತ್ತು. ಆಕೆಗೆ ಸಂಸ್ಕೃತ ಕಾವ್ಯ ಅಭ್ಯಾಸವಾಗಿತ್ತೆಂದು ತಿಳಿದಿದ್ದೇನೆ. ಆದ್ದರಿಂದಲೇ ಸಂಸ್ಕೃತ ಶ್ಲೋಕ, ಗಮಕದಲ್ಲಿ ಹೆಸರನ್ನು ಗಳಿಸಿದ್ದರು. ಗ್ರಾಮಫೋನ್ ರೆಕಾರ್ಡ್‌ಗಾಗಿ ಆಕೆ ಹಾಡಿದ "ಶತ್ರುಚ್ಛೇದೈಕ ಮಂತ್ರಂ" ನಮ್ಮ ಮಾವನವರ ಮನೆಯಲ್ಲಿದ್ದ ಸೀತಾಫೋನ್ ಮುಖಾಂತರ ಕೇಳಿದ್ದು ಸ್ವಲ್ಪ ಸ್ವಲ್ಪ ಜ್ಞಾಪಕದಲ್ಲಿ ಉಳಿದಿದೆ. ಹರಿಕಾಂಬೋಧಿ ಅವರ ಪ್ರಿಯವಾದ ರಾಗವೆಂದು ಕೇಳಿದ್ದೇನೆ. ಮಹಾರಾಜರ ಕೃಪಾಕಟಾಕ್ಷಕ್ಕೂ ಒಳಗಾಗಿದ್ದರೆಂಬುದು ಎಲ್ಲರಿಗೂ ಗೊತ್ತಿರುವ ವಿಷಯ.

ತಮ್ಮ ಜೀವನದಲ್ಲಿ ಸಾಕಷ್ಟು ಕಷ್ಟಗಳನ್ನು ಅನುಭವಿಸಿದ ಈ "ರಾಗರತ್ನ" ತನಗೆ ಸುಖಶಾಂತಿಗಳು ಶ್ರೀ ರಾಮನ ಪಾದಾವಿಂದಗಳಲ್ಲಿ ದೊರೆಯದೆ ಮತ್ತೆಲ್ಲಿಯೂ ದೊರೆಯದೆಂದು ತಿಳಿದು ತಾನು ಗಳಿಸಿದ ಎಲ್ಲ ಐಶ್ವರ್ಯಾದಿಗಳನ್ನು ತನ್ನ ಇಷ್ಟದೈವವಾದ ಶ್ರೀ ರಾಮನಿಗೂ ಮತ್ತು ತ್ಯಾಗರಾಜರಿಗೂ ಸಮರ್ಪಿಸಿ ಶ್ರೀ ತ್ಯಾಗರಾಜ ಆರಾಧನಾ ಉತ್ಸವಕ್ಕೆ ಕಾರಣಕರ್ತರಾದರು. ಆದರೆ ದುಃಖದ ಸಂಗತಿ ಎಂದರೆ ಅವರ ಆ ವಿಗ್ರಹ ಮಂಟಪಕ್ಕೆ ಹೊರತಾಗಿ ಅಹಲ್ಯೆಯ ಶಿಲೆಯಂತೆ ಆಚೆ ಇತ್ತು. ಯಾವ ಕಾರಣಕ್ಕೋ ಗೊತ್ತಿಲ್ಲ. ಬಹುಶಃ ಅಲ್ಲಿ ಸಹಸ್ರಾರು ಭಕ್ತವೃಂದಕ್ಕೆ ಈ ವಿಗ್ರಹದ ಇರುವಿಕೆಯೂ ಗೊತ್ತಿಲ್ಲ. ಹಾಗೂ ಈ ಭಕ್ತಶಿರೋಮಣಿಯ ವಿಷಯವೂ ಗೊತ್ತಿಲ್ಲದಿರುವುದು ಖೇದಕರ ಸಂಗತಿ. ನನ್ನ ಮನಸ್ಸು ತುಂಬಾ ವ್ಯಾಕುಲಕ್ಕೆ ಒಳಗಾಗಿ ಈ ಮಹೋತ್ಸವದ ವ್ಯವಸ್ಥಾಪಕರಿಗೆ ಈ ಅಸಡ್ಡೆ ಏಕೋ ಅನಿಸಿತು. ಕರ್ನಾಟಕದ ಸಂಗೀತ ಪ್ರಿಯರು ಅಥವಾ ಗಾಯನ ಸಮಾಜಗಳು, ಇಲ್ಲವೆ ಸರ್ಕಾರದ ಧುರೀಣರು ವರ್ಷಕ್ಕೊಮ್ಮೆಯಾದರೂ ಆಕೆಯ ಹೆಸರಿನಲ್ಲಿ ಒಂದು ಸಂಗೀತೋತ್ಸವವನ್ನು ಹಮ್ಮಿಕೊಂಡರೆ ನಮ್ಮ ಕೃತಜ್ಞತೆಯ ಭಾಗವನ್ನು ಅರ್ಪಿಸಿದಂತಾಗುವುದೆಂದು ನನ್ನ ಭಾವನೆ. 'ತೇವರ್ ಅದಿಯಲ್'ನ ಶಾಪ ವಿಮೋಚನೆ ಯಾವಾಗಲೋ ನೋಡೋಣ.

ತಿರುವಯ್ಯಾರಿನ ಸಂಗೀತ ಮಂಟಪ

ಸಹಸ್ರಾರು ಜನ ಸೇರಿದ್ದ ಮಂಟಪದಲ್ಲಿ ಸಂಗೀತ ವಿದ್ವಾಂಸರುಗಳು ಪಂಚರತ್ನ ಕೃತಿಗಳನ್ನು ಹಾಡಿ ಜಗದಾನಂದಕಾರಕನಾದ ಶ್ರೀರಾಮಚಂದ್ರಸ್ವಾಮಿಯ ಕೃಪೆಗೆ ನಮ್ಮನ್ನು ಪಾತ್ರರಾಗಿಸಿ 'ಎಂದರೋ ಮಹಾನುಭಾವುಲು ಅಂದರಕಿ ವಂದನಮುಲು' ಎಂದು ಹೇಳಿ ಮಂಟಪದಿಂದ ನಿರ್ಗಮಿಸಿದರು.

ಈ ಕಾರ್ಯಕ್ರಮಗಳ ಕಾರ್ಯದರ್ಶಿ ಶ್ರೀ ಕುನ್ನಕ್ಕುಡಿ ವೈದ್ಯನಾಥನ್ ಮಾತ್ರ ಭರ್ಜರಿ ಜರತಾರಿ ಪಂಚೆಯುಟ್ಟು ಕೆಂಪು ಶಲ್ಯ ಹೊದ್ದು ರೂಪಾಯಿ ಅಗಲದ ಕುಂಕುಮವನ್ನು ಹಣೆಯಲ್ಲಿ ಧರಿಸಿ ತಮ್ಮ ದಂತಪಂಕ್ತಿಯನ್ನು ಆಗಾಗ ಅಂದರೆ ಸಂತೋಷವಾದಾಗ ತೋರಿಸುತ್ತ ಶೋಭಾಯಮಾನರಾಗಿ ಒಂದು ಮೈಲಿಗೂ ಕಾಣುವಂತಹ ವ್ಯಕ್ತಿತ್ವವನ್ನು ಪಡೆದು ಮೆರೆಯುತ್ತಿದ್ದುದು ಎದ್ದು ಕಾಣುತ್ತಿತ್ತು. ನಾಗರತ್ನಮ್ಮನವರ ಕಡೆ ಯಾಕೆ ಈ ವೈದ್ಯನಾಥರು ಮತ್ತು ಅಧ್ಯಕ್ಷ ಮೂಪನಾರರಿಗೆ ಗಮನ ಹರಿಯಲಿಲ್ಲವೋ ಕಾಣೆ !

❑

ಕೃಪೆ : ಪರ್ಯಟನೆಯ ಸುಳಿಯಲ್ಲಿ, ಪ್ರಕಾಶಕರು : ಭಾರತೀ ಪ್ರಕಾಶನ, ಮೈಸೂರು.

ಕೇಂದ್ರ ಸಾಹಿತ್ಯ ಅಕಾಡೆಮಿ

ದಕ್ಷಿಣ ಪ್ರಾದೇಶಿಕ ಕಚೇರಿ, ಸೆಂಟ್ರಲ್ ಕಾಲೇಜ್ ಆವರಣ

ಡಾ. ಬಿ.ಆರ್. ಅಂಬೇಡ್ಕರ್ ವೀಧಿ, ಬೆಂಗಳೂರು-೫೬೦ ೦೦೧

ಹೊಸ ಕನ್ನಡ ಪ್ರಕಟಣೆಗಳು

ಕಾದಂಬರಿಗಳು

- ಆ ದೀರ್ಘ ಮೌನ (ಇಂಗ್ಲಿಷ್ ಮೂಲ : ಶಶಿ ದೇಶಪಾಂಡೆ, ಅನು : ವಿಜಯ ಕಣೇಕಲ್) ೧೨೦.೦೦
- ಆರು ಅಡಿ ಭೂಮಿ (ಉರ್ದು ಮೂಲ : ಅಬ್ದುಸ್ಸಮದ್ ; ಅನು : ಪಂಚಾಕ್ಷರಿ ಹಿರೇಮಠ) ೧೫೦.೦೦
- ಅರ್ಧನಾರೀಶ್ವರ (ಹಿಂದಿ ಮೂಲ : ವಿಷ್ಣು ಪ್ರಭಾಕರ್ ; ಅನು : ಎಸ್.ಎಮ್. ರಾಮಚಂದ್ರಸ್ವಾಮಿ) ೨೫೦.೦೦
- ನೀಲಿಚಂದಿರ (ಹಿಂದಿ ಮೂಲ : ಶಿವಪ್ರಸಾದ ಸಿಂಹ ; ಅನು : ಪಿ. ಶಶಿಕಲಾ) ೩೫೦.೦೦
- ಚಿಟ್ಟಾಲಹು (ಪಂಜಾಬೀ ಮಲ : ನಾನಕ್ ಸಿಂಗ್ ; ಅನು : ಲವ್‌ಲೀನ್ ಜಾಲಿ, ವಿಜಯಲಕ್ಷ್ಮಿ ಅರಸ್) ೮೫.೦೦
- ಗೋಡೆಯಲ್ಲಿ ಒಂದು ಕಿಟಕಿ ಇರುತ್ತಿತ್ತು (ಹಿಂದಿ ಮೂಲ: ವಿನೋದಕುಮಾರ್ ಶುಕ್ಲ; ಅನು: ತೇಜಸ್ವಿ ಕಟ್ಟಿಮನಿ) ೧೦೦.೦೦
- ಶಾಂಬ (ಬಂಗಾಳಿ ಮೂಲ: ಸಮರೇಶ್ ಬಸು, ಅನು: ಜಿ. ಕುಮಾರಪ್ಪ) ೧೦೦.೦೦
- ಹಗ್ಗ – ೧, ೨, ೩ ಭಾಗಗಳು (ಮಲಯಾಳ ಮೂಲ: ತಕಳಿ ಶಿವಶಂಕರಪಿಳ್ಳೆ, ಅನು: ಕೆ.ಕೆ. ನಾಯರ್, ಅಶೋಕ್ ಕುಮಾರ್) ೩೨೫.೦೦ / ೨೫೦.೦೦ / ೨೫೦.೦೦

ಕಥಾ ಸಂಕಲನ

- ಸ್ವರ್ಣ ಕಮಲಗಳು (ತೆಲುಗು ಮೂಲ : ಇಲ್ಲಿಂದಲ ಸರಸ್ವತೀದೇವಿ ; ಅನು–ಪಿ. ವೇಣು–ಗೋಪಾಲ್) ೩೦೦.೦೦
- ಸಿ.ವಿ. ಶ್ರೀರಾಮನ್ ಕತೆಗಳು (ಮಲಯಾಳಂ; ಅನು–ಅಶೋಕ್ ಕುಮಾರ್) ೩೦೦.೦೦
- ದೇವರ ಮನೆ ಇತರ ಕತೆಗಳು (ಒರಿಯಾ; ಅನು ಸೀತಾರಾಮಯ್ಯ ಸೋಮನಾಥ್) ೧೨೫.೦೦
- ತಂದೆಯ ಸ್ನೇಹಿತ (ತಮಿಳು; ಅಶೋಕ ಮಿತ್ರನ್; ಅನು: ಶೇಷನಾರಾಯಣ) ೧೦೦.೦೦
- ಸಮಕಾಲೀನ ಭಾರತೀಯ ಇಂಗ್ಲಿಷ್ ಸಣ್ಣ ಕಥೆಗಳು (ಸಂ: ಶಿವ್.ಕೆ. ಕುಮಾರ್; ಅನು ಮಹಾಬಲೇಶ್ವರ ಕಾಟ್ರಹಳ್ಳಿ) ೧೫೦.೦೦
- ಉಲ್ಲಂಘನ (ಒರಿಯಾ; ಪ್ರತಿಭಾ ರಾಯ್; ಅನು ಸ್ನೇಹಲತಾ ರೋಹಿಡೇಕರ್) ೧೬೦.೦೦

ಕಾವ್ಯ

- ಕನ್ನಡ ಸಾನೆಟ್ ಸಂಗ್ರಹ (ಸಂ. ಹೆಚ್.ಎಸ್. ವೆಂಕಟೇಶಮೂರ್ತಿ) ೮೫.೦೦
- ಶಬ್ದ ಗರ್ಭಿತ ಆಕಾಶ (ಒರಿಯಾ ಮೂಲ : ಸೀತಾಕಾಂತ್ ಮಹಾಪಾತ್ರ; ಅನು: ಕಮಲಾ ಹೆಮ್ಮಿಗೆ) ೯೦.೦೦
- ಸಂಬಂಧ (ಇಂಗ್ಲಿಷ್ : ಜಯಂತ ಮಹಾಪಾತ್ರ; ಅನು: ಲಕ್ಷ್ಮೀನಾರಾಯಣಭಟ್) ೫೦.೦೦
- ತಮಿಳು ಕವಿತೆಗಳು (ಸಂಪಾದಕರು; ಚಂದ್ರಶೇಖರ ಕಂಬಾರ ಮತ್ತು ಓ.ಎಲ್. ನಾಗಭೂಷಣ ಸ್ವಾಮಿ) ೪೦.೦೦
- ಆಧುನಿಕ ಮಹಾಭಾರತ (ಗುಂಟೂರು ಶೇಷೇಂದ್ರಶರ್ಮರ ತೆಲುಗು ಆಧುನಿಕ ಮಹಾಕಾವ್ಯ; ಅನು: ಅರ್ಕಸಾಲಿ ವೃಷಭೇಂದ್ರಚಾರ್) ೨೦೦.೦೦
- ಮಲಯಾಳದ ಜಾನಪದ ಹಾಡುಗಳು (ಸಂ. ಅಯ್ಯಪ್ಪ ಪಣಿಕ್ಕರ್; ಅನು: ಸಿ. ರಾಘವನ್) ೧೨೫.೦೦

ಇತರ

- ಸೌಗಂಧಿಕಾ ಪರಿಣಯ (ಮುಮ್ಮಡಿ ಕೃಷ್ಣರಾಜ ಒಡೆಯರ್; ಸಂ.ಹೆಚ್.ಎಸ್. ಶ್ರೀಮತಿ) ೬೦೦.೦೦
- ತತ್ವಮಸಿ (ಮಲಯಾಳಂ ಮೂಲ: ಸುಕುಮಾರ್ ಅಳಿಕ್ಕೋಡ್, ಅನು; ವಿ. ಗೋಪಾಲಕೃಷ್ಣ) ೨೦೦.೦೦
- ಭಾರತೀಯ ಇಂಗ್ಲಿಷ್ ಸಾಹಿತ್ಯ ಚರಿತ್ರೆ (ಎಂ.ಕೆ. ನಾಯಕ್; ಅನು: ಬಸವರಾಜ ನಾಯ್ಕರ್) ೨೦೦.೦೦
- ತೆಲುಗು–ಕನ್ನಡ ನಿಘಂಟು (ಸಂ.ಪಾಣ್ಯಂ ರಾಮಶೇಷ ಶಾಸ್ತ್ರಿ) ೧೫೦.೦೦
- ಟೀಕಾ ಸ್ವಯಂವರ : ಮರಾಠಿ ವಿಮರ್ಶಾ ಕೃತಿ (ಬಾಲಚಂದ್ರ ನೇಮಾಡೆ; ಅನು: ಚಂದ್ರಕಾಂತ ಪೋಕಳೆ) ೧೮೦.೦೦
- ಪಂಡಿತ ತಾರಾನಾಥರು ಬದುಕು ಮತ್ತು ಬರಹ: ಎಂ. ಧ್ರುವನಾರಾಯಣ ೭೫.೦೦

ಭಾರತೀಯ ಸಾಹಿತ್ಯ ನಿರ್ಮಾಪಕರು (ಒಂದು ಪ್ರತಿ ರೂ.೨೫.೦೦)

- ವ.ರಾ. (ವ. ರಾಮಸ್ವಾಮಿ) * ನಿರಂಜನ * ಸರ್ವಜ್ಞ * ಮಹಾಕವಿ ಶ್ರೀ ಶ್ರೀ * ರಾಚಕೊಂಡ ವಿಶ್ವನಾಥಶಾಸ್ತ್ರಿ
- ಜಿ.ಪಿ. ರಾಜರತ್ನಂ * ತೀನಂ. ಶ್ರೀಕಂಠಯ್ಯ * ಮಹಾಮಹೋಪಾಧ್ಯಾಯ ಗೋಪೀನಾಥ ಕವಿರಾಜ * ಅ.ನ. ಕೃಷ್ಣರಾವ್ (೪೦.೦೦) * ಬಸವರಾಜ ಕಟ್ಟೀಮನಿ (೪೦.೦೦) * ಆಲೂರು ವೆಂಕಟರಾಯರು (೪೦.೦೦)